
ಸಂಪುಟ 23 ಸಂಚಿಕೆ 4
ಜನವರಿ 28, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ



ಹಾಲಾಹಲದಲ್ಲಿ ಹಾಲು ಉತ್ಪಾದಕರು



'ಸಂವಿಧಾನ ಪರಾಮರ್ಶೆ': ಹೊಲಸು ಮಿಶ್ರಣ



ಪ್ರಬಲ ಚಳುವಳಿಗೆ ರೈತ-ಕೂಲಿಕಾರರ ಸಜ್ಜು


ಲಿ ಪೆಂಗ್ ಭೇಟಿ:
ಗೆಳೆತನದ ಹೊಸ ಮೈಲಿಗಲ್ಲು

ಎರಡನೇ ಸಂಯುಕ್ತ ರಂಗ ಉದಯ

ಹಿಂದಿನ ಸಂಚಿಕೆಯಲ್ಲಿ ಎಡ ಸಾಹಸವಾದಿಗಳು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷವೊಂದರ ಬುಡಕ್ಕೆ ಕೊಟಲಿ ಏಟು ಹಾಕಿ, ಶಿಸ್ತು, ಏಕತೆ ಗಾಳಿಗೆ ತೂರಿದ್ದರ ಬಗ್ಗೆ ಹಾಗೂ ಸಾಮ್ರಾಜ್ಯವಾದ ಹಾಗೂ ಬಂಡವಾಳಶಾಹಿ ವಿರುದ್ಧ ಪ್ರಬಲ ಯುವಜನ ಸಂಘಟನೆ ಮೂಡಿ ಬಂದ ಬಗ್ಗೆ ಓದಿರುವಿರಿ, ಈ ಸಂಚಿಕೆಯಲ್ಲಿ ಪ.ಬಂಗಾಳದಲ್ಲಿ 2ನೇ ಸಂಯುಕ್ತ ರಂಗ ರಚಿಸಿ, ಒಂದು ಕನಿಷ್ಠ ಕಾರ್ಯಕ್ರಮದಡಿಯಲ್ಲಿ ಚುನಾವಣೆ ಎದುರಿಸಿದ ಬಗೆ ಹಾಗೂ ನಿದ್ದೆಯಿಲ್ಲದ ಕಾಂಗ್ರೆಸ್‌ನ ಅಪಪ್ರಚಾರ, ಅದಕ್ಕೆ ಬಂಡವಾಳ ಶಾಹಿ ಪತ್ರಿಕೆಗಳ ಪ್ರಚಾರದ ಬಗ್ಗೆ ಓದಿರಿ......

ನಾವು ಮಾವೋ ಬೆಂಬಲಿಗರು ಎಂದು ಹೇಳಿದ ಅವರು, 'ಚೀನಾ ಅಧ್ಯಕ್ಷ ಮಾವೋ ನಮ್ಮ ಅಧ್ಯಕ್ಷರು' ಎಂಬ ಘೋಷಣೆ ಹಾಕಿದರು. ಅವರು ದೇಶದ ಎಲ್ಲವನ್ನು ಮರೆತು ಚೀನಾದ ಮಾದರಿಯನ್ನು ಅನುಸರಿಸಿದರು. ಅದರ ಪರಿಣಾಮಗಳು ಅನಾಹುತಕಾರಿಯಾಗಿದ್ದವು. ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೂ ಅದಕ್ಕೂ ಯಾವುದೇ ಸಂಬಂಧವಿರಲಿಲ್ಲ.

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ



ನಕ್ಸಲ್‌ಬಾರಿ ಅವರ ಚಟುವಟಿಕೆಗಳ ಕೇಂದ್ರ ಸ್ಥಳವಾಯಿತು. ಸ್ವಲ್ಪ ಸಮಯದ ಹಿಂದೆಯೇ ತಯಾರಿ ಆರಂಭವಾಗಿತ್ತು. ಸಿಪಿಐ(ಎಂ) ವಿರುದ್ಧ ರಹಸ್ಯ ಗುಂಪುಗಳನ್ನು ರಚಿಸಲಾಯಿತು ಹಾಗೂ ಅವರ ಪ್ರಚಾರವನ್ನು ನಡೆಸಲು ಮುದ್ರಣಾಲಯಗಳನ್ನು ತೆರೆಯಲಾಯಿತು. ಪಕ್ಷದ ಒಳಗೆ ಚರ್ಚೆ ನಡೆಸುವಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಪ್ರತಿಯೊಂದನ್ನು ರಹಸ್ಯವಾಗಿಡಲಾಗಿತ್ತು. ಹೀಗಾಗಿ ಅವರಲ್ಲಿ ಯಾರನ್ನೂ ಗುರುತಿಸುವುದು ಆಗದ ಕೆಲಸವಾಗಿತ್ತು. ಇದೊಂದು ವಿಚಿತ್ರ ಪಕ್ಷ-ವಿರೋಧಿ ಚಟುವಟಿಕೆಯಾಗಿತ್ತು. ಪಕ್ಷದ ಹಿಂದಿನ ಮಹಾಧಿವೇಶನ ಈ ಧೋರಣೆಯನ್ನು ತಿರಸ್ಕರಿಸಿದ್ದರೂ, ಈ ತಪ್ಪು ಧೋರಣೆಯ ಎಡಪಂಥೀಯರು ತಮ್ಮ ಪ್ರಚಾರವನ್ನು ಮುಂದುವರಿಸಿದರು. ಸಮಸ್ಯೆ ಸಂಘಟನೆಯದ್ದಕ್ಕಿಂತ ಹೆಚ್ಚಾಗಿ ರಾಜಕೀಯವಾದುದಾಗಿತ್ತು. ಅವರಲ್ಲಿ ಅನೇಕ ಜನರನ್ನು ಪಕ್ಷದಿಂದ ಉಚ್ಚಾಟಿಸಲಾಯಿತು.

1969 ರ ಫೆಬ್ರವರಿಯಲ್ಲಿ ಮಧ್ಯಂತರ ಚುನಾವಣೆ ನಡೆಯಲಿತ್ತು. ಈ ಬಾರಿ ನಾವು ಸಂಯುಕ್ತ ರಂಗದ ಅಭ್ಯರ್ಥಿಗಳಾಗಿ ಸ್ಪರ್ಧಿಸಿದೆವು. 1967 ರಲ್ಲಿ ಚುನಾವಣೆಗಿಂತ ಮುಂಚೆ ಸಂಯುಕ್ತ ರಂಗವನ್ನು ರಚಿಸಲು ಸಾಧ್ಯವಾಗದಿದ್ದರಿಂದ ಕಾಂಗ್ರೆಸ್‌ಗೆ ಅನೇಕ ಕ್ಷೇತ್ರಗಳಲ್ಲಿ ಜಯ ದೊರಕಿತ್ತು ಎಂಬುದನ್ನು ನಾವು ಮರೆತಿರಲಿಲ್ಲ. ಆದರೆ ಈ ಸಲ ಹಾಗಾಗಲಿಲ್ಲ. ನಮ್ಮ ಪಕ್ಷ ಪ್ರತ್ಯೇಕ ಪ್ರಣಾಳಿಕೆಯನ್ನು ಹೊರಡಿಸಲಿಲ್ಲ. ನಾವು ಒಂದು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಮತದಾರರ ಬಳಿ ಹೋದೆವು.

ಈ ಬಾರಿಯ ಅಂದಾಜು ಸ್ವಲ್ಪ ಭಿನ್ನವಾಗಿತ್ತು. ಸ್ವಲ್ಪಕಾಲ ಅಧಿಕಾರದಲ್ಲಿದ್ದ ಸರಕಾರದ ನಿರ್ವಹಣೆಯ ಆಧಾರದಲ್ಲಿ ಜನರು ಮತ ಚಲಾಯಿಸಲಿದ್ದರು. ನಾವು ಭಾರೀ ಸಾಧನೆ ಮಾಡಿದ್ದೇವೆಂದೇನೂ ಅಲ್ಲ; ಆದರೆ ಈ ರೀತಿಯ ಪರಿಣಾಮವನ್ನು ನಾವು ಬೀರಿದ್ದೇವೆನ್ನುವುದರಲ್ಲಿ ಅನುಮಾನವಿಲ್ಲ. ಎಲ್ಲ ದಿಕ್ಕುಗಳಿಂದ ಆಕ್ರಮಣ ನಡೆದಾಗ್ಯೂ, ದೃಢ ನಿಲುವುಗಳು ಹಾಗೂ ಕಲ್ಯಾಣ ಕಾರ್ಯಕ್ರಮಗಳ ಪರವಾಗಿ ನಿಂತ ಪಕ್ಷವಾಗಿ ಸಿಪಿಐ(ಎಂ) ಹೊರ ಹೊಮ್ಮಿತ್ತು.

ನಿದ್ದೆಯಿಲ್ಲದ ರಾತ್ರಿಗಳು

ಕಾಂಗ್ರೆಸ್ ಪಕ್ಷ ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆಯುತ್ತಿತ್ತು. ಜನರು ಸಿಪಿಐ(ಎಂ)ನ ಬೆಂಬಲಕ್ಕೆ ನಿಂತಿದ್ದಾರೆ ಎನ್ನುವುದನ್ನು ಅದು ಅರಿತಿತ್ತು. ಹೀಗಾಗಿ ಅದು ನಮ್ಮ ವಿರುದ್ಧ ಅಪಪ್ರಚಾರ ಆರಂಭಿಸಿತು. ಬಂಡವಾಳಶಾಹಿ ಪತ್ರಿಕೆಗಳು ಅದಕ್ಕೆ ಪೂರ್ಣಬೆಂಬಲ ನೀಡಿದವು. ಕಾಂಗ್ರೆಸ್ ಮುಖಂಡರ ಹೇಳಿಕೆಗಳು ಮತ್ತು ಅವರಿಗೆ ಸಂಬಂಧಿಸಿದ ಸುದ್ದಿಗಳು ಮುಖಪುಟಗಳಲ್ಲಿ ರಾರಾಜಿಸಿದವು. ಪೂರ್ಣ ಸುಳ್ಳು ಹಾಗೂ ವಿಕೃತಿಗಳು ಅಪಪ್ರಚಾರದ ಸಾರವಾಗಿದ್ದವು.

ಸಿಪಿಐ(ಎಂ)ಗೆ ಸಂವಿಧಾನ ಮತ್ತು ದೇಶದ ಪ್ರಜಾಸತ್ತಾತ್ಮಕ ಸ್ವರೂಪದಲ್ಲಿ ನಂಬಿಕೆಯಿಲ್ಲ ಎಂದು ಕಾಂಗ್ರೆಸ್ ಮತ್ತು ಇತರ ಕಾಂಗ್ರೆಸ್ಸೇತರ ಶಕ್ತಿಗಳು ಪ್ರಚಾರ ಮಾಡಲು ಆರಂಭಿಸಿದವು. ರಾಜ್ಯ ಸರಕಾರದಲ್ಲಿ ಸಿಪಿಐ(ಎಂ) ಭಾಗಿಯಾದರೆ ದೇಶದ ರಾಜಕೀಯಕ್ಕೆ ಹಾನಿಯಾಗುತ್ತದೆ ಎಂದು ಹೇಳುವುದು ಅದರ ಉದ್ದೇಶವಾಗಿತ್ತು. ಸಿಪಿಐ(ಎಂ) ಇಲ್ಲದ ಯಾವುದೇ ಕಾಂಗ್ರೆಸ್ಸೇತರ ಸರಕಾರಕ್ಕೆ ಅವರ ವಿರೋಧ ಇರಲಿಲ್ಲ.

ಆ ಹೊತ್ತಿಗೆ ಕಾಂಗ್ರೆಸ್ ಹತಾಶವಾಗಿತ್ತು. ಕಾಂಗ್ರೆಸ್‌ನ ಪ್ರಜಾಪ್ರಭುತ್ವ ವಿರೋಧಿ ನೀತಿಗಳ ವಿರುದ್ಧ ಹೋರಾಡಲು ಜನರು ಸಾಧಿಸಿದ ಒಗ್ಗಟ್ಟನ್ನು ನಾಶ ಮಾಡಲು ಕಾಂಗ್ರೆಸ್ ಪಣ ತೊಟ್ಟಿತ್ತು. ಸಿಪಿಐ(ಎಂ) ಒಡ್ಡಿರುವ ರಾಜಿರಹಿತ ಸವಾಲುಗಳನ್ನು ಎದುರಿಸಲು ಅಸಾಧ್ಯ ಎಂಬುದನ್ನು ಕಾಂಗ್ರೆಸ್ ಮನವರಿಕೆ ಮಾಡಿಕೊಂಡಿತ್ತು. ಏನಾದರೂ ಮಾಡಿ ಸಂಯುಕ್ತ ರಂಗವನ್ನು ಒಡೆಯಬೇಕು ಎಂಬ ತಂತ್ರವನ್ನು ಕಾಂಗ್ರೆಸ್ ಅನುಸರಿಸಿತ್ತು.

ಕಾನೂನು ಮತ್ತು ವ್ಯವಸ್ಥೆ ವಿಚಾರವನ್ನು ಕೂಡ ಕಾಂಗ್ರೆಸ್ ಪಕ್ಷ ಅಪಪ್ರಚಾರಕ್ಕೆ ಬಳಸಿಕೊಂಡಿತು. ಕಾನೂನು ಮತ್ತು ಸುವ್ಯವಸ್ಥೆ ಹದಗೆಡಲು ಸಿಪಿಐ(ಎಂ) ಮಾತ್ರವೇ ಹೊಣೆ ಎಂದು ಜರಿಯಲಾರಂಭಿಸಿತು. ಚುನಾವಣೆ ಹಿನ್ನೆಲೆಯಲ್ಲಿ ಬಂಡವಾಳಶಾಹಿ ಪತ್ರಿಕೆಗಳು ಅತಿರೇಕದ ಸುದ್ದಿಗಳನ್ನು ಪ್ರಕಟಿಸತೊಡಗಿದವು. ಆದರೆ ಇವೆಲ್ಲ ನಮಗೆ ಮಾಮೂಲಿ ಆಗಿಬಿಟ್ಟಿತ್ತು. ಅದೇ ರೀತಿ ಇದು ನಮಗೆ ಅನಿರೀಕ್ಷಿತವೂ ಆಗಿರಲಿಲ್ಲ. ಹಿಂದಿನ ಸಂಯುಕ್ತ ರಂಗ ಸರಕಾರವೂ ಇಂಥ ಧಾಳಿಯನ್ನು ಅನುಭವಿಸಿತ್ತು. ಕಾನೂನು ಮತ್ತು ವ್ಯವಸ್ಥೆ ಬಗ್ಗೆ ನಮ್ಮ ವೈರಿಗಳ ಸತತ ದಾಳಿ ಹಾಗೂ ಅಪಪ್ರಚಾರ ಏನೇ ಇದ್ದರೂ ತಮಗೆ ಭದ್ರತೆ ಹಾಗೂ ಸುರಕ್ಷತೆ ಒದಗಿಸಿದ್ದು ಸಂಯುಕ್ತ ರಂಗ ಸರಕಾರ ಎನ್ನುವುದು ಜನರಿಗೆ ಗೊತ್ತಿತ್ತು. ಇದು ಯಾರೂ ನಿರಾಕರಿಸಲಾಗದ ವಾಸ್ತವವಾಗಿತ್ತು. ಆದ್ದರಿಂದ ಬಂಡಲುಗಟ್ಟಲೆ ಪತ್ರಿಕೆಗಳ 'ಬಂಡಲ್'ಗಳಿಗೆ ನಮಗೆ ಯಾವುದೇ ಹಾನಿ ತರಲು ಸಾಧ್ಯವಿಲ್ಲ ಎಂಬ ವಿಶ್ವಾಸ ನಮಗಿತ್ತು.

ಅಪಪ್ರಚಾರದ ಜತೆಯಲ್ಲಿ, ಕಾಂಗ್ರೆಸ್ ಮತ್ತು

(ಮುಂದುವರಿಯುವುದು)

ಆತ್ಮರಕ್ಷಣೆಯ ಹೋರಾಟಗಳಿಂದ ಆಕ್ರಮಣಕಾರಿ ಹೋರಾಟಗಳತ್ತ

ಹೈದ್ರಾಬಾದ್‌ನಲ್ಲಿ ನಡೆದ ಸಿಐಟಿಯು ಅಖಿಲ ಭಾರತ 10ನೇ ಸಮ್ಮೇಳನವು ತಕ್ಷಣದಲ್ಲಿ ಎರಡು ಹೋರಾಟದ ಪ್ರಮುಖ ಕರೆಗಳನ್ನು ನೀಡಿದೆ.

ಒಂದು: ಕಾರ್ಮಿಕ ವರ್ಗದ ಬೇಡಿಕೆಗಳಿಗಾಗಿ ಜನವರಿ 24 ರಂದು ರಾಷ್ಟ್ರೀಯ ಪ್ರತಿಭಟನಾ ದಿನ ಇನ್ನೊಂದು: ಫೆಬ್ರವರಿ 5-6 ಮತ್ತು 7 ರಂದು ದೇಶವ್ಯಾಪಿ ಸಾಲದ ಬವಣೆ ಹಾಗೂ ಕೃಷಿ ಉತ್ಪನ್ನಗಳ ಬೆಲೆ ಕುಸಿತ ವಿರೋಧಿಸಿ ರೈತ-ಕೃಷಿಕೂಲಿಕಾರರ ರಸ್ತೆ ತಡೆ, ಪಿಕೆಟಿಂಗ್ ಚಳುವಳಿಯಲ್ಲಿ ದುಡಿಯುವ ಜನ ಭಾಗಿಗಳಾಗಿ ಯಶಸ್ವಿಗೊಳಿಸುವುದು.

ಕೇಂದ್ರ, ರಾಜ್ಯ ಸರ್ಕಾರಗಳ ನೀತಿಗಳ ಪರಿಣಾಮವಾಗಿ ಕೈಗಾರಿಕೆಗಳು ರೋಗಗ್ರಸ್ತವಾಗುತ್ತಿವೆ. ನಿರುದ್ಯೋಗ, ತೀವ್ರ ಬೆಲೆ ಏರಿಕೆ, ಖಾಸಗೀಕರಣ, ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳಲು 2ನೇ ರಾಷ್ಟ್ರೀಯ ಕಾರ್ಮಿಕ ಆಯೋಗ ರಚನೆ ಮುಂತಾಗಿ ಧಾಳಿಗಳು ದಿನೇ ದಿನೇ ಹೆಚ್ಚುತ್ತಿವೆ. ಕೋಮುವಾದೀಕರಣ ಉಲ್ಬಣಗೊಳ್ಳುತ್ತಿದೆ. ಆಡಳಿತದಲ್ಲಿ ಕೋಮುವಾದ ನುಸುಳಿದೆ. ಈ ಬಗ್ಗೆ ಒಂದು ಉದಾಹರಣೆ ಎರಡನೇ ಕಾರ್ಮಿಕ ಆಯೋಗದ 9 ಸದಸ್ಯರಲ್ಲಿ 5 ಜನ ಆರ್‌ಎಸ್‌ಎಸ್ ನ ಕ್ರಿಯಾಶೀಲ ಸದಸ್ಯರು.

ಇಂತಹ ಧಾಳಿಗಳು ಭಾರತದಲ್ಲಷ್ಟೇ ಅಲ್ಲ, WTO, ವಿಶ್ವಬ್ಯಾಂಕ್, ಐಎಂಎಫ್‌ಗಳ ನಿರ್ದೇಶಿತ ನೀತಿಗಳ ಪರಿಣಾಮವಾಗಿ ಜಗತ್ತಿನಾದ್ಯಂತ ದುಡಿಯುವ ಜನತೆಯ ಮೇಲೆ ತೀವ್ರ ಧಾಳಿ ನಡೆಸಲಾಗುತ್ತಿದೆ ಎಂದು ಅಧ್ಯಕ್ಷ ಭಾಷಣದಲ್ಲಿ ಕಾಂ. ಬಾಲಾನಂದನ್ ಅವರು ಸಮ್ಮೇಳನದ ಗಮನ ಸೆಳೆದಿದ್ದರು. ಈ ಧಾಳಿಗಳನ್ನು ಎದುರಿಸುವಲ್ಲಿ ಮೊದಲು ಜಗತ್ತಿನ ವಿವಿಧ ದೇಶಗಳಲ್ಲಿ ಆತ್ಮರಕ್ಷಣಾ ಹೋರಾಟಗಳು ನಡೆಯುತ್ತಿದ್ದವು. ಈಗ ಪರಿಸ್ಥಿತಿ ನಿಧಾನವಾಗಿ ಯಾದರೂ ಬದಲಾಗುತ್ತಿದೆ. ಆಕ್ರಮಣಕಾರಿ ಹೋರಾಟಗಳ ಕಡೆ ಅಂದರೆ ನೀತಿಗಳನ್ನು ವಿರೋಧಿಸುವುದಷ್ಟೇ ಅಲ್ಲ ಹಿಮ್ಮೆಟ್ಟಿಸಿ ಹಿಂದೆ ತೆಗೆದುಕೊಳ್ಳುವ ಮಟ್ಟಕ್ಕೆ ಹೋರಾಟಗಳು



ಭಾರತ ಮತ್ತು ಇತರ ದೇಶಗಳ ಅನುಭವ

ಬೆಳೆಯುತ್ತಿವೆ. ಉದಾಹರಣೆಯಾಗಿ ಬೊಲಿವಿಯಾ ದೇಶದಲ್ಲಿ ಸಾರ್ವಜನಿಕ ನೀರು ಸರಬರಾಜು ವ್ಯವಸ್ಥೆಯನ್ನು ಬ್ರಿಟಿಷ್ ಮತ್ತು ಅಮೆರಿಕಾ ದೇಶಗಳ ಕಂಪನಿಗಳಿಗೆ ವಹಿಸಿದ್ದನ್ನು ಹಿಮ್ಮೆಟ್ಟಿಸಲು ಕಾರ್ಮಿಕರು 13 ದಿನಗಳ ಮುಷ್ಕರದ ಮೂಲಕ ಸರಕಾದ ಎಲ್ಲಾ ಬೆದರಿಕೆ ಧಾಳಿಗಳನ್ನು ಲೆಕ್ಕಿಸದೇ ವಿರೋಚಿತ ಹೋರಾಟ ನಡೆಸಿದ ಪರಿಣಾಮವಾಗಿ ಇಡೀ ದೇಶದಲ್ಲಿ ಕುಡಿಯುವ ನೀರಿಗಾಗಿ ಪರದಾಟ ಉಂಟಾಗಿ ಅಂತಿಮವಾಗಿ ಬೊಲಿವಿಯ ಸರಕಾರವು ನೀರು ಸರಬರಾಜು ವ್ಯವಸ್ಥೆ ಬ್ರಿಟಿಷ್, ಅಮೆರಿಕಾ ಕಂಪನಿಗಳಿಗೆ ನೀಡಿದ್ದನ್ನು ಹಿಂದಕ್ಕೆ ಪಡೆಯಲಾಗಿದೆ. ಕರ್ನಾಟಕದಲ್ಲೂ ಬೆಂಗಳೂರು, ಬಳ್ಳಾರಿ, ಗುಲ್ಬರ್ಗ ಸೇರಿದಂತೆ 5 ನಗರಗಳ ಕುಡಿಯುವ ನೀರು ಸರಬರಾಜು ಬ್ರಿಟಿಷ ಕಂಪನಿಗಳಿಗೆ ವಹಿಸುವ ಪ್ರಯತ್ನದಲ್ಲಿ ಕರ್ನಾಟಕ ಸರಕಾರ ತೊಡಗಿರುವುದನ್ನು ಗಮನಿಸಬೇಕಿದೆ. ಫ್ರಾನ್ಸ್, ಇಟಲಿಯ ದೇಶಗಳ ಸರಕಾರಗಳು ಅಲ್ಲಿಯ ರೈತರ ಹಾಗೂ ಲಾರಿಗಳ ನಿರ್ವಾಹಕರ ಉಗ್ರ ಹೋರಾಟಕ್ಕೆ ಮಣಿದು ತೈಲ ಬೆಲೆಗಳು ಇಳಿಸಿದ್ದೂ, ಅಮೆರಿಕದಲ್ಲಿ ಕೈಗಾರಿಕೆಗಳ ಮುಚ್ಚುವಿಕೆ, ಕಾರ್ಮಿಕರ ಸಂಖ್ಯೆ ಕಡಿತಗಳ ವಿರುದ್ಧ AEL-CIO ಕಾರ್ಮಿಕ ಸಂಘಗಳು(ಅಮೇರಿಕದ ಟ್ರೇಡ್ ಯೂನಿಯನ್‌ಗಳು ಹಿಂದೆ ಸದಾ ಮಾಲೀಕರ ಹಿಂದೆ ಇದ್ದಂತಹವು) ಹೋರಾಟದಲ್ಲಿ ತೊಡಗಿವೆ. ವಿದ್ಯುತ್ ಖಾಸಗೀಕರಣದ ವಿರುದ್ಧ ಹತ್ತು ಸಾವಿರ ಕಾರ್ಮಿಕರು ಕೊರಿಯಾದಲ್ಲಿ ರಣರಂಗಕ್ಕಿಳಿದಿದ್ದಾರೆ.

ಸಿಐಟಿಯು ಸಮ್ಮೇಳನ

ಬದಲಾಗುತ್ತಿರುವ ಅಂತರ್ರಾಷ್ಟ್ರೀಯ ಪರಿಸ್ಥಿತಿ ಇದಾಗಿದೆ. ಸಮ್ಮೇಳನದಲ್ಲಿ ಭಾಗವಹಿಸಿದ್ದ ಫಿಲಿಫೈನ್ಸ್ ದೇಶದ ಪ್ರತಿನಿಧಿ ಹೇಳಿದ್ದೂ ಗಮನಾರ್ಹ "ಸಿಐಟಿಯು ಸಮ್ಮೇಳನದ ವರದಿ ಹಾಗೂ ಚರ್ಚೆ ಕೇಳುತ್ತಿದ್ದರೆ ಇದೆಲ್ಲಾ ನಮ್ಮ ದೇಶದ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದಾರೆ ಎಂದು ಅನಿಸುತ್ತದೆ. ನಾನು ನನ್ನ ದೇಶದಲ್ಲೇ ಇದ್ದೇನೆಂದು ಭಾಸವಾಗುತ್ತಿದೆ" ಎನ್ನುತ್ತಾ ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿಯ ಧಾಳಿಯ ಸ್ವರೂಪದ ಬಗ್ಗೆ ಬೆಳಕು ಚೆಲ್ಲಿದರು.

ಅಲ್ಲದೆ ನಮ್ಮ ದೇಶದಲ್ಲಿ ಎಲ್ಲ ಜನ ವಿಭಾಗಗಳು ಧುಮುಕಿ ಬೀದಿಗಿಳಿಯುತ್ತಿರುವುದನ್ನು ನೋಡಬಹುದು. ಈ ಹೋರಾಟಗಳು ಜನರ ಬದಲಾಗುತ್ತಿರುವ ಮನೋಭಾವದ ಪ್ರತಿಬಿಂಬವಾಗಿದೆ. ವಿಶ್ವಬ್ಯಾಂಕ್, ಡಬ್ಲ್ಯುಟಿಓ, ಐಎಂಎಫ್ ನೀತಿಗಳ ಪರಿಣಾಮ ಎಲ್ಲ ಜನ ವಿಭಾಗಗಳೂ ಮೊದಮೊದಲು ಅರ್ಥಮಾಡಿ ಕೊಳ್ಳಲು ಹಿಂದೆ ಬಿದ್ದಿದ್ದರೂ ಈಗೀಗ ಎಲ್ಲರಿಗೂ ಅರಿವಾಗುತ್ತಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಿ ನೌಕರರು, ರಕ್ಷಣಾ, ಕೈಗಾರಿಕಾ ನೌಕರರು, ಅಂಚೆ ನೌಕರರು, ಬ್ಯಾಂಕ್, ಇನ್ಸುರೆನ್ಸ್ ನೌಕರರು, ವಕೀಲರು ಅಷ್ಟೇ ಅಲ್ಲ ಸಣ್ಣ ಕೈಗಾರಿಕೆಗಳ ಮಾಲೀಕರು, ತೋಟಗಳ ಮಾಲೀಕರು, ಲಕ್ಷಾಂತರ ಸಂಖ್ಯೆಯಲ್ಲಿ ಕಳೆದ ನಾಲ್ಕಾರು ತಿಂಗಳುಗಳಲ್ಲಿ ಹೋರಾಟಕ್ಕೆ ಇಳಿದಿದ್ದಾರೆ. ಪ್ರಜಾಪ್ರಭುತ್ವ ಚಳುವಳಿ ಬಲಹೀನವಾಗಿರುವ ಪ್ರದೇಶಗಳಲ್ಲೂ ಉದಾ: ಹಿಮಾಚಲ ಪ್ರದೇಶ, ನಾಪ್ತಾ ಚಕ್ಕಿ ವಿದ್ಯುತ್ ಕಾರ್ಮಿಕರ ಮೂರು ತಿಂಗಳ ಮುಷ್ಕರ, ಬಿರ್ಲಾ ಟೆಕ್ಸ್‌ಟೈಲ್, ಭೋಪಾಲ್ ಮಿಲ್ ವರ್ಕರ್ಸ್, ಮಾರುತಿ ಉದ್ಯೋಗ, ಡೆಲ್ಲಿ ಸಣ್ಣ ಕೈಗಾರಿಕಾ ಮಾಲೀಕರು, ಕಾರ್ಮಿಕರು ಮುಷ್ಕರ ಅಷ್ಟೇ ಅಲ್ಲಾ ಕಲ್ಲಿದ್ದಲು ರಂಗದಲ್ಲಿ ಸಿಐಟಿಯು ಕರೆಯಂತೆ 3 ದಿನಗಳ ಚಾರಿತ್ರಿಕ ಮುಷ್ಕರವನ್ನು ಅಲ್ಲಿಯ INTUC, BMS ಮತ್ತಿತರ ಪ್ರಮುಖ ಸಂಘಗಳ ನಾಯಕತ್ವ ವಿರೋಧಿಸಿದರೂ ಆ ಸಂಘಗಳ ಕಾರ್ಮಿಕರು ಸಂಪೂರ್ಣ ಭಾಗವಹಿಸಿದ್ದೂ ಗಮನಾರ್ಹ. ಮೆಡಿಕಲ್ ರೆಪ್ರಜೆಂಟೇಟಿವ್ಸ್ 5 ದಿನಗಳ ದೇಶವ್ಯಾಪಿ ಮುಷ್ಕರ ಅಲ್ಲದೇ ದೇಶಾದ್ಯಂತ ರೈತಾಪಿಜನತೆಯು ಕೃಷಿ ಉತ್ಪನ್ನಗಳ ಬೆಲೆ ಕುಸಿತ, ವಿದ್ಯುತ್ ದರ ಏರಿಕೆ, ಮತ್ತಿತ್ತರ ಪರಿಣಾಮಗಳನ್ನು ವಿರೋಧಿಸಿ ಹೋರಾಟದಕಣಕ್ಕೆ ಇಳಿಯುತ್ತಿದ್ದಾರೆ. ನಾವು ಆತ್ಮರಕ್ಷಣಾ ಹೋರಾಟಗಳನ್ನು ಆಕ್ರಮಣಕಾರಿ ಹೋರಾಟಗಳಾಗಿ ಬದಲಾಯಿಸುವ ಮೂಲಕವಷ್ಟೆ ಎನ್.ಡಿ.ಎ ಸರಕಾರ ಅನುಸರಿಸುತ್ತಿರುವ ಜಾಗತೀಕರಣದ ಆರ್ಥಿಕ ನೀತಿಗಳನ್ನು ಹಿಮ್ಮೆಟ್ಟಿಸಿ ಹಿಂದಕ್ಕೆ ಹೋಗುವಂತೆ ಮಾಡಲು ಸಾಧ್ಯ ಎಂದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಡಾ|| ಪಂದೆಯವರು ಗುರುತಿಸಿದ್ದಾರೆ. ಇದು ಸಮ್ಮೇಳನದ ವರದಿಯಲ್ಲಿ ಪ್ರತಿಫಲನಗೊಂಡಿದೆ. ಮೇಲಿನ ಪರಿಸ್ಥಿತಿಗಳಲ್ಲಿ ಮತ್ತೊಂದು ಪ್ರಮುಖ ಕರೆ 2001 ಫೆಬ್ರವರಿ 5, 6, 7 ರಂದು ರೈತರು ನಡೆಸುವ ದೇಶವ್ಯಾಪಿ ಹೋರಾಟದಲ್ಲಿ ಸಿ.ಐ.ಟಿ.ಯು. ಎಲ್ಲಾ ಕಾರ್ಮಿಕರು ಧುಮುಕಬೇಕೆಂದು ತಿಳಿಸಿದೆ. ಈ ಎರಡು ಕರೆಗಳನ್ನು ಸಮರ್ಥ ರೀತಿಯಲ್ಲಿ ಯಶಸ್ವಿಯಾಗುವಂತೆ ಮಾಡುವುದು ಸಿ.ಐ.ಟಿಯುನ ಎಲ್ಲಾ ಸಂಘಗಳ, ಎಲ್ಲಾ ಕಾರ್ಮಿಕರ ಆದ್ಯಕರ್ತವ್ಯವಾಗಿದೆ.

ಸಿಐಟಿಯು ಅಖಿಲಭಾರತ ಸಮ್ಮೇಳನದ ಆಯೋಗಗಳ ವರದಿ ಚರ್ಚೆಗಳಲ್ಲಿ ಪ್ರಮುಖವಾಗಿ ಪಾಳೆಯಗಾರಿ ಮೌಲ್ಯಗಳ ವಿರುದ್ಧ ರಾಜಿ ಇಲ್ಲದ ಹೋರಾಟ ನಡೆಸುವ ಅಗತ್ಯವನ್ನು ಒತ್ತಿಹೇಳಲಾಗಿದೆ.

ಎಸ್. ಪ್ರಸನ್ನಕುಮಾರ್.

ಹೆಗಡೆಯುವರ ಹೊಗಳಿಕೆಗೆ ಸಮರ್ಪಿಸಿಕೊಂಡ ಸಮಾವೇಶ

ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಜಿಲ್ಲೆಯ ಅಡಿಕೆ ತೆಂಗು ಬೆಳೆಗಾರರ ಸಮಾವೇಶವೊಂದು ನಡೆಯಿತು. ಈ ಸಮಾವೇಶದಲ್ಲಿ ಅಡಿಕೆ ತೆಂಗು ಬೆಳೆಗಳ ಬೆಲೆ ಕುಸಿದ ಬಗ್ಗೆ ಮೂಲಭೂತ ಚರ್ಚೆ ನಡೆದು ಮುಂದಿನ ಹೋರಾಟದ ಒಂದು ಕ್ರಿಯಾಯೋಜನೆ ರೂಪಿತ ಆಗುತ್ತದೆ ಎಂದು ಹೋದವರೆಲ್ಲಾ ನಿರಾಶೆಯಿಂದ ಹಿಂದಿರುಗಬೇಕಾಯಿತು. ಸಮಾವೇಶದ ವಿಶೇಷವೆಂದರೆ ರಾಜಕೀಯದಲ್ಲಿ, ಅಧಿಕಾರದಲ್ಲಿ ಇದ್ದವರು, ಅಧಿಕಾರ ಕಳೆದುಕೊಂಡವರು, ಅಧಿಕಾರ ಮುಂದೆ ಸಿಗಬಹುದೆಂದು ಕಾಯುತ್ತಿರುವವರು ಕೇಂದ್ರದ ಮಾಜಿ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆಯವರ ಭಜನೆ ನಡೆಯಿತು. ಎಲ್ಲರೂ ಮಾತನಾಡಿದವರೆ. ಮಾತಿನಿಂದಲೇ ಬೆಲೆಗಳೇನಾದರೂ ಹೆಚ್ಚಾಗುವಂತಿದ್ದರೆ ಅಡಿಕೆ ಕ್ವಿಂಟಾಲಿಗೆ 25 ಸಾವಿರ ರೂ. ಮತ್ತು ತೆಂಗು ನೂರಕ್ಕೆ 1500 ರೂ. ಆಗಿಬಿಡುತ್ತಿತ್ತೇನೋ. ಆದರೆ ಅದು ಸಾಧ್ಯವಿಲ್ಲವಲ್ಲ

ಸಮಾವೇಶ ನಡೆಸಲು ತೆಗೆದುಕೊಂಡ ಮುತುವರ್ಜಿಯನ್ನು ಸಂಘಟಕರು ಬೆಲೆ ಇಳಿತಕ್ಕೆ ಕಾರಣವನ್ನು ಹುಡುವಲ್ಲಿಯೂ(ಕಾರಣ ಹುಡುಕಲು ತೀರಾ ಬುದ್ಧಿವಂತಿಕೆಯೇನೂ ಬೇಡ) ತೆಗೆದುಕೊಂಡಿದ್ದರೆ ಏನಿಲ್ಲದಿದ್ದರೂ ರೈತರ ಬೆಲೆಗಳ ಇಳಿತಕ್ಕೆ ಕಾರಣರಾದವರನ್ನಾದರೂ ವೇದಿಕೆಯಿಂದ ಕೈಬಿಡಬಹುದಾಗಿತ್ತು.

ಬೆಲೆ ಕುಸಿತದ ಪರಿಣಾಮ:

ಕರಾವಳಿ ಜಿಲ್ಲೆಯ ಜನರ ಬಹುಮುಖ್ಯ ಆರ್ಥಿಕ ಬೆಲೆ ಅಡಿಕೆ, ತೆಂಗು. ಇದು ಇವರ ಜೀವನಾಧಾರ ಕೂಡ. ಉ.ಕ. ಜಿಲ್ಲೆಯ ಆರ್ಥಿಕ ವಹಿವಾಟುಗಳು ಒಂದು ಹಂತದಲ್ಲಿ ಈ ಬೆಳೆಗಳ ಬೆಲೆಯನ್ನು ಅವಲಂಬಿಸಿವೆ. ತೋಟದಲ್ಲಿ ಬೆಳೆಯುವ ಅಡಿಕೆ ತಾಂಬೂಲಗಳಿಗೆ, ಬಣ್ಣಗಳಿಗೆ, ಗುಟ್ಕಾಗಳಿಗೆ ಹೆಚ್ಚೆಚ್ಚು ಬಳಕೆ ಆಗುತ್ತದೆ. ತೆಂಗಿನ ಕಾಯಿ ಅಡುಗೆಗಾಗಿ ಮತ್ತು ಅಡುಗೆಗೆ ಬೇಕಾಗುವ ಎಣ್ಣೆಗಾಗಿ ಬಳಕೆ ಆಗುತ್ತಿದೆ. ಕೆಲವು ಸಂದರ್ಭದಲ್ಲಿ ಒಟ್ಟೊಟ್ಟಿಗೇ ಇನ್ನು ಕೆಲವು ಸಂಧರ್ಭದಲ್ಲಿ ಪ್ರತ್ಯೇಕ ತೋಟದಲ್ಲಿ ಅಡಿಕೆ-ತೆಂಗನ್ನು ಬೆಳಯಲಾಗುತ್ತದೆ.

ಕಳೆದ ವರ್ಷ ಕ್ವಿಂಟಾಲಿಗೆ 15 ಸಾವಿರದವರೆಗೆ ಬೆಲೆಯನ್ನು ಕಂಡ ಅಡಿಕೆ ಈ ವರ್ಷ 4-5 ಸಾವಿರ ರೂ.ಗಳಿಗೆ ಕುಸಿದಿದೆ. ತೆಂಗಿಕಾಯಿಯ ಬೆಲೆ ಕಳೆದ ವರ್ಷ 5-6 ರೂ.ಗಳಿದ್ದದ್ದು ಈ ವರ್ಷ 1.50 ರಿಂದ 2 ರೂ.ಗಳಿಗೆ ಇಳಿದಿದೆ. ಇಂತಹ ಸ್ಥಿತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ನೆರವಿಗೆ ಬರದಿದ್ದು ಮಾತ್ರ ಖಂಡನಾರ್ಹ. ಅಡಿಕೆ-ತೆಂಗಿಗೆ ಮಾತ್ರವಲ್ಲ ರೈತ ಬೆಳೆದ ಯಾವ ಬೆಳೆಗಳಿಗೂ ಈ ಸರ್ಕಾರ ನೆರವಿಗೆ ಬರುತ್ತಿಲ್ಲ.

ಬೆಲೆ ಕುಸಿತಕ್ಕೆ ಕಾರಣ ಏನು?

ಅಡಿಕೆ ಮತ್ತು ತೆಂಗು ಬೆಳೆಗಳ ಬೆಲೆ ಕುಸಿಯಲು ಮುಖ್ಯ ಕಾರಣ ಕೇಂದ್ರ ಸರ್ಕಾರದ ಉದಾರೀಕರಣ ಮತ್ತು ಮುಕ್ತ ಆಮದು ನೀತಿ. ವಿದೇಶಿ ವಸ್ತುಗಳನ್ನು, ಬೆಳೆಗಳನ್ನು ಯಾವ ಅಡೆತಡೆ ಇಲ್ಲದೆ ತರಿಸಿಕೊಳ್ಳಲಾಗುತ್ತಿದೆ. ಹೀಗೆ ಮುಕ್ತವಾಗಿ ಆಮದು ಮಾಡಿಕೊಳ್ಳುವಾಗ ಸ್ಥಳೀಯ ಮಾರುಕಟ್ಟೆಯ ಸ್ಥಿತಿ, ದೇಶೀಯ ಉತ್ಪಾದನೆಯ ಪ್ರಮಾಣ, ಅದರ ಬೇಡಿಕೆ, ಅವಶ್ಯಕತೆ, ಒಟ್ಟು ಆರ್ಥಿಕತೆಯ ಮೇಲೆ ಪರಿಣಾಮ - ಇದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ವಿಶ್ವ ಮಾರುಕಟ್ಟೆಯೊಂದಿಗೆ ಸ್ಪರ್ಧಿಸುವ ಹುಚ್ಚು ಸಾಹಸದ ಮಾತು ವಿದೇಶಿಗಳಿಗೆ ಈ ದೇಶದ ಮಾರುಕಟ್ಟೆಯನ್ನು ಕೆಂಪು ಹಾಸಿಗೆ ಹಾಕಿ ಸ್ವಾಗತಿಸಿ ದೇಶಿಯ ಕೈಗಾರಿಕೆ ಮತ್ತು ಕೃಷಿ ಉತ್ಪಾದನೆಯನ್ನು ಸಂಪೂರ್ಣವಾಗಿ ನಾಶ ಮಾಡುವಲ್ಲಿ ಪರ್ಯವಸಾನವಾಗುತ್ತದೆ.

ತೊಗರಿ, ಮೆಕ್ಕೆಜೋಳ, ಭತ್ತ, ರೇಷ್ಮೆ ಆಲೂಗಡ್ಡೆ, ಈರುಳ್ಳಿ... ಹೀಗೆ ಹತ್ತಾರು ಬೆಳೆಗಳ ಹೆಸರುಗಳನ್ನು ಹೇಳಬಹುದು. ಅಡಿಕೆ ಮತ್ತು ತೆಂಗು ಇದಕ್ಕೆ ಇತ್ತೀಚಿನ ಸೇರ್ಪಡೆ. ವಿದೇಶದಿಂದ ಆಮದಾಗುವ ವಸ್ತುವಿಗೆ ಶೇ 300ರಷ್ಟು ಕರ ವಿಧಿಸುವ(ಶೇ 300 ಕ್ಕಿಂತ ಹೆಚ್ಚು ಕರ ವಿಧಿಸುವುದಿದ್ದಲ್ಲಿ ವಿಶ್ವ ವ್ಯಾಪಾರ ಸಂಘಟನೆಯ ಲಿಖಿತ ಒಪ್ಪಿಗೆ ಪಡೆಯಬೇಕಂತೆ. ನಮ್ಮ ದೇಶಕ್ಕೆ ಬರುವ ವಸ್ತುವಿಗೆ ತೆರಿಗೆ ಹಾಕಲು ನಾವು ವಿದೇಶದಿಂದ ಒಪ್ಪಿಗೆ ಪಡೆಯಬೇಕಂತೆ. ಈ ಮಾತನ್ನು ನಾಚಿಕೆ ಇಲ್ಲದೆ ಹೇಳುತ್ತಿರುವುದು 'ಸ್ವದೇಶಿ' ಮಂತ್ರ ಪಠಿಸುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ) ಅವಕಾಶವಿದ್ದರೂ ಸರ್ಕಾರ ವಿಧಿಸುತ್ತಿಲ್ಲ. ಇಂದು ಮಲೇಶಿಯಾ, ಶ್ರೀಲಂಕಾಗಳಿಂದ ದೊಡ್ಡ ಪ್ರಮಾಣದಲ್ಲಿ ಅಡಿಕೆ ಮಾರುಕಟ್ಟೆಗೆ ಬರುತ್ತಿದೆ. ಅಡಿಕೆ ಬೆಲೆ ಸಂಪೂರ್ಣ ಕುಸಿದ ನಂತರ ಶೇ 100 ತೆರಿಗೆ ಏರಿಸಿದ್ದಾರೆ. ಇಷ್ಟಿದ್ದರೂ ಬೆಲೆ ಸೀಮಿತಕ್ಕೆ ಬರುತ್ತಿಲ್ಲ. ಇನ್ನು ತೆಂಗಿನ ಬೆಲೆ ಕೂಡ ಹಾಗೆಯೇ. ಉ.ಕ. ಜಿಲ್ಲೆಯಲ್ಲಿಯೇ ಲಕ್ಷಾಂತರ ತೆಂಗಿನ ಎಣ್ಣೆ ಡಬ್ಬಗಳು ಕೊಳ್ಳುವವರಿಲ್ಲದೆ ಕುಳಿತಿದೆ. ವಿದೇಶದಿಂದ ಬರುವ 'ಪಾಮೆಣ್ಣೆ' ಕೇವಲ 20-25 ರೂ.ಗಳಿಗೆ ದೊರೆಯುತ್ತಿರುವಾಗ ತೆಂಗಿನ ಎಣ್ಣೆಯನ್ನು ದುಬಾರಿ ಬೆಲೆ ಕೊಟ್ಟು ಕೊಳ್ಳುವವರಿಲ್ಲ.

ದೊಡ್ಡ ದೊಡ್ಡ ಎಣ್ಣೆ ವ್ಯಾಪಾರಿಗಳ ಲಾಬಿಗೆ ಒಳಗಾದ ಸರ್ಕಾರ ವಿದೇಶದಿಂದ ಸರಬರಾಜಾಗುವ ಪಾಮೆಣ್ಣೆಯ ಮೇಲೆ ಆಮದು-ಸುಂಕ ವಿಧಿಸಿದರೆ ಮಾತ್ರ ತೆಂಗಿನ ಎಣ್ಣೆಗೆ ಒಂದು ಮಾರುಕಟ್ಟೆ ಕಲ್ಪಿಸಬಹುದು. ತೆಂಗಿನ ಎಣ್ಣೆ, ಶೇಂಗಾ ಎಣ್ಣೆಗಳನ್ನು ಸರ್ಕಾರ ಖರೀದಿಸಿ ರೇಷನ್ ಮೂಲಕ ಕೊಡುವ ಬದಲು ಇಂದು ಪಾಮೆಣ್ಣೆಯನ್ನು ರೇಷನ್ ಮೂಲಕ ಕೊಡುತ್ತಿದೆ. ಇಲ್ಲಿ ಬೆಳೆಯುವ ಯಾವುದೇ ಎಣ್ಣೆಗಳನ್ನು ರೇಷನ್ ಮೂಲಕ ಕೊಟ್ಟಿಲ್ಲ. ಒಂದು ನಿರ್ದಿಷ್ಟ ಮಾರುಕಟ್ಟೆಯನ್ನು ರೈತರಿಗೆ ಸರ್ಕಾರ ಒದಗಿಸಬಹುದಿತ್ತು. ಆದರೆ ಕೃಷಿ ಪ್ರಧಾನತೆಯ ಮಾತನಾಡುವ ಯಾವ ಸರ್ಕಾರವೂ ಈ ಬಗ್ಗೆ ಯೋಚಿಸದಿರುವುದು ಈ ದೇಶದ ರೈತನ ಪಾಲಿಗೆ ದುರಂತ.

ಕಾರಣ ಮರೆಮಾಚುವ ಹುನ್ನಾರ

ಅಂದು ಸಭೆಯಲ್ಲಿ ಮಾತನಾಡಿದ ಬಹುತೇಕರಿಂದ ಮುಕ್ತ ಆಮದು ನೀತಿಯಿಂದ ಈ ಸಮಸ್ಯೆ ತಲೆತೋರಿದೆ ಎನ್ನುವುದನ್ನು ಮರೆಮಾಚುವ ಒಂದು ನಾಟಕವೇ ನಡೆಯಿತು. ವೇದಿಕೆಯಲ್ಲಿ ಕಾಂಗ್ರೆಸ್ಸಿನವರು, ಬಿಜೆಪಿ ನೆಂಟರಾದ ಸಂಯುಕ್ತ ದಳದವರು ಭಾಷಣ ಮಾಡಿದರು. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸುವ ಒಂದೇ ಒಂದು ಸಣ್ಣ ಪ್ರಯತ್ನ ಕೂಡ ನಡೆದಿಲ್ಲ.

ಉ.ಕ. ದ ಮಾಜಿ ಎಂ.ಪಿ. ಬಿಜೆಪಿಯ ಅನಂತುಕುಮಾರ ವೀರಾವೇಶದಲ್ಲಿ ಮಾತನಾಡಿ ಅಡಿಕೆ ಬೆಲೆ ಇಳಿಯಲು ಉತ್ತರ ಭಾರತದಲ್ಲಿ ಬಡತನ, ಬರಗಾಲ ಕಾರಣ. ಅವರು ಖರೀದಿ ಕಡಿಮೆ ಮಾಡುತ್ತಿದ್ದಾರೆ. ಹಾಗಾಗಿ ಅವರ ಆರ್ಥಿಕ ಸ್ಥಿತಿ ಸುಧಾರಿಸಿ ಕೊಳ್ಳುವವರೆಗೆ ಕಾಯಬೇಕು. ಬೆಲೆ ಇಳಿತಕ್ಕೆ ಬಿಜೆಪಿಯ ನೀತಿ ಕಾರಣವಲ್ಲ" ಎಂದು ಪುಕ್ಕಟ್ಟೆ ಸಲಹೆ ಕೊಟ್ಟು ರೈತರಿಗೆ ತಾಳ್ಮೆಯಿಂದ ಇರಲು ಹೇಳಿದರು. (ಬಡತನ, ಬರಗಾಲ ಇಳಿಸಲು ಏನು ಪ್ರಯತ್ನ ನಡೆದಿದೆ ಎನ್ನುವುದನ್ನು ಹೇಳಿಲ್ಲ)


ಮಾಜಿ ಸಚಿವರಾದ ಪ್ರಭಾಕರ ರಾಣೆಯವರು ಸರಿಯಾದ ವಿಶ್ಲೇಷಣೆಗೆ ತೊಡಗಿದಂತೆ ಪ್ರಾರಂಭದಲ್ಲಿ ಅನ್ನಿಸಿತು. ಸರ್ಕಾರದ LPG ನೀತಿಯ ಅಪಾಯದ ಬಗ್ಗೆ ಒಂದೆರಡು ಮಾತು ಹೇಳಿದರು. ಇಂದಿನ ಅಡಿಕೆ ಬೆಲೆ ಕುಸಿತಕ್ಕೆ ಈ ವಿಶ್ವ ಮಾರುಕಟ್ಟೆಯ ಕಲ್ಪನೆ ಎಂದು ಹೇಳುತ್ತಿದ್ದಂತೆ ಅವರಿಗೆ ತಾನು ಬಿಜೆಪಿಯಲ್ಲಿ ಇದ್ದದ್ದು ನೆನಪಾಗಿರಬೇಕು ಹಾಗಾಗಿ ಕೊನೆಯ ಎರಡು ಮೂರು ವಾಕ್ಯವನ್ನು ಕಮ್ಯುನಿಸ್ಟರು ಬಹುರಾಷ್ಟ್ರೀಯ ಕಂಪನಿಯನ್ನು ತಂದಿದ್ದಾರೆ. ಅವರೇ ಅದರ ವಿರುದ್ಧವೇ ಹೋರಾಡುತ್ತಿದ್ದಾರೆ ಎಂದೆಲ್ಲಾ ಹೇಳಿ ಭಾಷಣ ಮುಗಿಸಿದರು. ಆದರೂ ಈ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ವಿರುದ್ಧ ಮೊದಲಿನಿಂದ ಹೋರಾಡುತ್ತಿರುವವರು ಕಮ್ಯುನಿಸ್ಟರು ಎನ್ನುವುದನ್ನು ಮರೆಮಾಚಲು ಸಾಧ್ಯ ಆಗಲಿಲ್ಲ.

ದೇಶಪಾಂಡೆಯವರು ಹಿಂದಿನವರ ದಾರಿ ಹಿಡಿದು ಬೆಳೆ ಹೆಚ್ಚಾಗಿರುವುದು ಕಾರಣ, ಕರ ತಪ್ಪಿಸಿ ಬೆಲೆ ಇಳಿಯಲು ವಹಿವಾಟು ಮಾಡುವುದು ಕಾರಣ ಎಂದು ತೀರಾ ಸರಳವಾದ ಕಾರಣವನ್ನು ಹೇಳಿ ಈಗಾಗಲೇ ಕರ್ನಾಟಕದ ನಿಯೋಗವೊಂದು ಕೇಂದ್ರವನ್ನು ಭೇಟಿ ಆಗಿದೆ ಎಂದು ರಾಮಕೃಷ್ಣ ಹೆಗಡೆಯವರು ತಮ್ಮ ಮೇಲೆ ಹಾಕಿದ ಜವಾಬ್ದಾರಿಯನ್ನು ನಯವಾಗಿ ಕಳಗಿಳಿಸಿದರು ಮತ್ತು ಕೆಲವು ಭರವಸೆಗಳನ್ನು ಯಥಾಪ್ರಕಾರ ಕೊಟ್ಟರು.

ದೇಶಪಾಂಡೆಯವರನ್ನು ಹೊರತುಪಡಿಸಿದರೆ ಮಾತನಾಡಿದ ಎಲ್ಲರೂ ಹೆಗಡೆಯವರಿಂದಲೇ ಅಡಿಕೆಯ ಬೆಲೆ ಏರಿತು, ಅವರ ಸಚಿವ ಪಟ್ಟ ಹೋಗುತಿದ್ದಂತೆಯೇ ಅಡಿಕೆ ಬೆಲೆ ಇಳಿಯಿತು. ಹಾಗಾಗಿ ಅಡಿಕೆ ಬೆಲೆ ಏರಿಳಿತಕ್ಕೆ ಕಾರಣವಾದ ಹೆಗಡೆಯವರು ಮತ್ತೊಮ್ಮೆ (ಏನಾದರೂ ಮ್ಯಾಜಿಕ್‌ನ್ನಾದರೂ ಮಾಡಿ) ಸಚಿವರಾಗಲಿ ಎನ್ನುವ ಆಶಯ ವ್ಯಕ್ತಪಡಿಸಿದರು.

ಜಾಣ ಮರೆವು

ಇದನ್ನು ಜಾಣ ಮರೆವು ಎಂಥಲೇ ಕರೆಯಬೇಕು. ಈ ಜಾಣ ಮರೆವು ಕಾಡಿದ್ದು ಅಂದಿನ ಸಭೆಯಲ್ಲಿ ಭಾಗವಹಿಸಿದ ರಾಮಕೃಷ್ಣ ಹೆಗಡೆಯವರಿಗೆ ಮತ್ತು ಉಳಿದ ಅತಿಥಿಗಳಿಗೆ. ಬೆಲೆ ಏರಿಕೆಗೆ ಕಾರಣರೆಂದು ಹೊಗಳಿದ ರಾಮಕೃಷ್ಣ ಹೆಗಡೆಯವರು ಕೇಂದ್ರದ ವಾಣಿಜ್ಯ ಸಚಿವರಿದ್ದಾಗಲೇ ಮುಕ್ತ ಆಮದು



ನೀತಿ ಜಾರಿಗೆ ತಂದಿದ್ದು ಮೊದಲು 1400 ನಂತರ ಸುಮಾರು 714 ಸಾಮಗ್ರಿಗಳು ಮುಕ್ತ ಆಮದು ಪಟ್ಟಿಗೆ ಸೇರಿದ್ದು ಮತ್ತು ಕರ್ನಾಟಕದಲ್ಲಿ ಈ ವಸ್ತುಗಳ ಉತ್ಪಾದನೆ ತೀವ್ರ ಬಿಕ್ಕಟ್ಟಿಗೆ ಸಿಲುಕಿದ್ದು, ರೈತರು ಕಾರ್ಮಿಕರು ಬೀದಿ ಪಾಲಾದದ್ದು. ಆ ನೀತಿಯ ಎರಡನೇ ಕಂತಾಗಿ ಹೆಗಡೆಯವರ ಪಟ್ಟ ಉರುಳಿದ ನಂತರ ಅಡಿಕೆಯನ್ನು ಒಳಗೊಂಡಂತೆ ಇತರ ವಸ್ತುಗಳು ಮುಕ್ತ ಆಮದು ನೀತಿಗೆ ಒಳಗಾಗಿ ಇಡೀ ರೈತ ಕಾರ್ಮಿಕರ ಸಮುದಾಯ ಅವಸಾನವನ್ನು ಹೊಂದುತ್ತಿದೆ. ಹಾಗಾಗಿ ವಾಣಿಜ್ಯ ಸಚಿವರಾಗಿರುವಾಗ ಇಂತಹ ರೈತವಿರೋಧಿ ನೀತಿಯನ್ನು ಜಾರಿಗೆ ತಂದ ಹೆಗಡೆಯವರನ್ನೇ ಆ ದಿನದ ಸಮಾವೇಶ ಭಜನೆ ಮಾಡಿದ್ದು ವಿಪರ್ಯಾಸ, ಮಹಾ ಮೋಸ.

ಹೆಗಡೆಯವರು ಮಾತನಾಡುತ್ತಾ ತನ್ನ ಮೇಲೆ ಹಾಕಿದ ಭಾರವನ್ನೆಲ್ಲಾ ದೇಶಪಾಂಡೆಯವರ ಹೆಗಲಿಗೆ ದಾಟಿಸುವ ಜಾಣ ಕೆಲಸ ಮಾಡಿದರು. ಅಡಿಕೆ ಧಾರಣೆ

ಪುಟ 9 ಕ್ಕೆ

> **ಸಮಾವೇಶ ನಡೆಸಲು ತೆಗೆದುಕೊಂಡ ಮುತುವರ್ಜಿಯನ್ನು ಸಂಘಟಕರು ಬೆಲೆ ಇಳಿತಕ್ಕೆ ಕಾರಣವನ್ನು ಹುಡುವಲ್ಲಿಯೂ(ಕಾರಣ ಹುಡುಕಲು ತೀರಾ ಬುದ್ಧಿವಂತಿಕೆಯೇನೂ ಬೇಡ) ತೆಗೆದುಕೊಂಡಿದ್ದರೆ ಏನಿಲ್ಲದಿದ್ದರೂ ರೈತರ ಬೆಲೆಗಳ ಇಳಿತಕ್ಕೆ ಕಾರಣರಾದವರನ್ನಾದರೂ ವೇದಿಕೆಯಿಂದ ಕೈಬಿಡಬಹುದಾಗಿತ್ತು.**

ದಲಾಲರ ಏಜೆಂಟ್, ರೈತ ವಿರೋಧಿ ಸಚಿವ ದಿವಾಕರ ಬಾಬುವನ್ನು ಸಂಪುಟದಿಂದ ಕೈಬಿಡಿ

ರೈತರದು ಬಾಳಾ ಆಯ್ತು, ಹಳ್ಳಿಯಿಂದ ಬಂದು ಎಪಿಎಂಸಿಯಲ್ಲಿ ರಾಜಕೀಯ ಮಾಡ್ತೀರಾ? ದಲ್ಲಾಲಿ ವರ್ತಕರನ್ನು ಎದುರು ಹಾಕಿಕೊಳ್ತೀರಾ? ನಿಮ್ಮನ್ನು ನೋಡಿಕೊಳ್ಳುತ್ತೀನಿ. ವರ್ತಕರ ಮೇಲಿರುವ ಕೇಸು ಸಂಜೆ ಒಳಗೆ ವಾಪಸ್ಸು ತೆಗೆದುಕೊಂಡಿಲ್ಲ ಅಂದರೆ ನಿಮ್ಮ ಮೇಲೆ ಕೇಸು ಹಾಕಿಸ್ತೀನಿ.... ಏ ಸೆಕ್ರೇಟರಿ ನೀನು ಈ ರೈತ ಸಂಘದವರೊಂದಿಗೆ ಸಹಕರಿಸಿದರೇ ನಿನ್ನನ್ನು ಸಸ್ಪೆಂಡ್ ಮಾಡ್ತೀನಿ" ಹೀಗೆಲ್ಲಾ ಹಾರಾಡಿದ್ದು ಬೆದರಿಕೆ ಹಾಕಿದ್ದು ದಿವಾಕರ ಬಾಬು ಎಂಬ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವ. ಬಳ್ಳಾರಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ರೈತರ ಹೋರಾಟ ಸಮಿತಿ ಮೂಲಕ ಜಿಲ್ಲೆಯ ಮೆಕ್ಕೆ ಜೋಳವನ್ನು ಬೆಂಬಲ ಬೆಲೆ ರೂ. 445 ಕ್ಕೆ ಕ್ವಿಂಟಲ್ ಖರೀದಿ ಮಾಡಲು ನಡೆಸಿದ ಹೋರಾಟದಿಂದಾಗಿ 75 ಸಾವಿರ ಟನ್ ಮೆಕ್ಕೆಜೋಳವನ್ನು ಭಾರತ ಆಹಾರ ನಿಗಮ(FCI) ನವರು ಖರೀದಿಸುವಂತಾಗಿದ್ದು ಒಂದು ದಾಖಲೆಯೇ ಸರಿ. ಮಾರುಕಟ್ಟೆಯಲ್ಲಿ ದಲ್ಲಾಲಿ ವರ್ತಕರು ರೈತರ ಮಾಲನ್ನು ರೂ. 300 ರಿಂದ 350 ರವರೆಗೆ ಮಾತ್ರ ಬೆಳಿಗ್ಗೆ ಖರೀದಿಸಿ ಸಂಜೆಗೆ FCI ಗೆ ರೂ. 445 ಕ್ಕೆ ಮಾರಿ ಲಾಭ ಮಾಡಿಕೊಳ್ಳುತ್ತಿದ್ದರು. ಆದ್ದರಿಂದ FCI ನವರು ನೇರವಾಗಿ ರೈತರಿಂದಲೇ ಖರೀದಿಸಬೇಕೆಂದು ಒತ್ತಾಯಿಸಿದಾಗ ಬಳ್ಳಾರಿ ಜಿಲ್ಲಾಧಿಕಾರಿಗಳೇ ಪ್ರಾಂತ ರೈತ ಸಂಘ ಹಾಗೂ ರೈತ ಹೋರಾಟ ಸಮಿತಿ ಅಧ್ಯಕ್ಷ ವಿ.ಎಸ್.ಶಿವಶಂಕರ್, ಜನತಾದಳ (ಜಾ) ರೈತ ಮುಖಂಡ ಹನುಮಂತಪ್ಪನವರನ್ನು ಒಳಗೊಂಡ 5 ಜನರನ್ನು ಉಸ್ತುವಾರಿ ಮಾಡಲು ನೇಮಕ ಮಾಡಿದ್ದರು. ಈ ಹಂತದಲ್ಲಿ ರೈತರ ಪರವಾಗಿ ಧ್ವನಿ ಎತ್ತಬೇಕಾದ ಮಂತ್ರಿ ದಿವಾಕರ ಬಾಬು ತದ್ವಿರುದ್ಧವಾಗಿ ರೈತ ಸಂಘದ ಅಧ್ಯಕ್ಷ ಶಿವಶಂಕರ್ ವಿರುದ್ಧ ವರ್ತಕರನ್ನು ಕಟ್ಟಿಕೊಂಡು ಬಂದು ದೌರ್ಜನ್ಯಕ್ಕೆ ಇಳಿದಿದ್ದಾರೆ.

ಪ್ರಾಂತ ರೈತ ಸಂಘವು ಈ ದೌರ್ಜನ್ಯವನ್ನು ವಿರೋಧಿಸಿ ದಿನಾಂಕ 10.01.2001 ರಂದು ಬಳ್ಳಾರಿ, ಹಗರಿಬೊಮ್ಮಹಳ್ಳಿ, ಹೊಸಪೇಟೆ, ಶಿರಗುಪ್ಪ, ಕುರುಗೋಡು ಮುಂತಾದಿ ಜಿಲ್ಲೆಯಾದ್ಯಂತ ಪ್ರತಿಭಟನೆ ನಡೆಸಿತು. ಡಿವೈಎಫ್ಐ, ಎಸ್‌ಎಫ್ಐ, ಸಿಐಟಿಯು ಮುಂತಾದ ಸಂಘಟನೆಗಳು ಪಾಲ್ಗೊಂಡವು. ರೈತ ವಿರೋಧಿ ಮಂತ್ರಿ ದಿವಾಕರ ಬಾಬು ಅವರನ್ನು ಮಂತ್ರಿಮಂಡಲದಿಂದ ಕೈಬಿಡುವಂತೆ ಮುಖ್ಯಮಂತ್ರಿಗಳಿಗೆ ಒತ್ತಾಯಿಸಿದೆ. ವಿಶೇಷವಾಗಿ ತೋರಣಗಲ್ಲಿನಲ್ಲಿ ಮೂರು ತಾಸುಗಳ ರಸ್ತೆ ತಡೆ ನಡೆಸಲಾಗಿದೆ. ಕಾಂಗ್ರೆ ಒಲವಿನ ರೈತ ಮುಖಂಡರು ಸೇರಿದಂತೆ ರೈತ ಹೋರಾಟ ಸಮಿತಿಯು ಮಂತ್ರಿ ದಿವಾಕರ ಬಾಬು ಅವರ ವರ್ತನೆಯನ್ನು ಉಗ್ರವಾಗಿ ಖಂಡಿಸಿದ್ದು ಗಮನಾರ್ಹ. ಶ್ರೀ ದಿವಾಕರ ಬಾಬು ಅವರು ಮಂತ್ರಿಗಳಾದರೂ ಕೀಳುಮಟ್ಟದ ರಾಜಕೀಯ ವರ್ತನೆ, ಗೂಂಡಾ ಸಂಸ್ಕೃತಿಯನ್ನು ಬಿಡಲು ಸಾಧ್ಯವಾಗಿಲ್ಲ. ಬಳ್ಳಾರಿ ನಗರ ಸಭೆಯಲ್ಲಿ ಕ್ಷುಲ್ಲಕ ರಾಜಕೀಯ ಮುಂದುವರೆಸಿದ್ದಾರೆ. ಬಳ್ಳಾರಿಯಲ್ಲಿ ಎಲ್ಲಾ ತರದ ಅನಿಷ್ಟ ವ್ಯಕ್ತಿ-ಶಕ್ತಿಗಳಿಗೆ ಸರ್ವರೀತಿಯ ಬೆಂಬಲ, ಸಹಾಯ ಸಹಕಾರ ಇವರದು. ಇದೇ ಅವರ ರಾಜಕೀಯ ಬಂಡವಾಳವಾಗಿದೆ. ಅದಕ್ಕೆ ಬಳ್ಳಾರಿ ಜನ ಹೇಳುತ್ತಾರೆ ಅಕಸ್ಮಾತ್ ದಿವಾಕರಬಾಬು ಏನಾದರೂ ಮುಖ್ಯಮಂತ್ರಿ ಯಾದರೂ ಅವರನ್ನು ಕಾಣಲು ವಿಧಾನಸೌಧಕ್ಕೆ ಹೋಗಬೇಕಾಗಿಲ್ಲ. ಬಳ್ಳಾರಿ ಮುನಿಸಿಪಾಲಿಟಿ ಬಳಿ ಬಂದರೆ ಆಯ್ತು. ಬಾಗಿಲಲ್ಲೇ ನಿಂತು, ಹೋಗಿ ಬರುವವರನ್ನು ಗುರಾಯಿಸುತ್ತಾರೆ ಎಂದು.......

ಎಡಬಿಡಂಗಿತನ ಸಾಕು ಮಾಡಿ

ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿಯು ಸಚಿವ ದಿವಾಕರ ಬಾಬುರವರ ವರ್ತನೆಯನ್ನು ಖಂಡಿಸಿದೆ. ರೈತ ಹಿತರಕ್ಷಣೆ ಮಾಡುವುದಾಗಿ ಮಾನ್ಯ ಮಂತ್ರಿಗಳು ಹೇಳುತ್ತಿದ್ದರೆ ಅದೇ ಸರ್ಕಾರದ ಸಚಿವರು (ನಾಗಪ್ಪನವರೂ ಸಹ) ದಲಾಲ ಏಜೆಂಟರಂತೆ, ರೈತ ವಿರೋಧಿಗಳಾಗಿ ವರ್ತಿಸುತ್ತಿದ್ದಾರೆ. ಇಂತಹ ವರ್ತನೆಗಳಿಗೆ ಕಡಿವಾಣ ಹಾಕಬೇಕು, ದಿವಾಕರ ಬಾಬುರವರನ್ನು ಸಚಿವ ಸ್ಥಾನದಿಂದ ಕೈಬಿಡಬೇಕೆಂದು ಆಗ್ರಹಿಸಿದೆ. ಇದೇ ಸಂದರ್ಭ ಉಪಯೋಗಿಸಲು ಬಯಸಿದ ಬಿಜೆಪಿ ಎಡಬಿಡಂಗಿತನವನ್ನು ಟೀಕಿಸಲಾಗಿದೆ.

ಕಾಯುವುದಲ್ಲ, ಸಾಯುವುದಲ್ಲ - ಕದನಕ್ಕಿಳಿಯದೇ ಉಳಿಯೋದಿಲ್ಲ

ಜನವರಿ 10 ರಂದು ಧಾರವಾಡ ಸಮೀಪದ ನವಲೂರು ಗ್ರಾಮದ ಮಹದೇವಪ್ಪ ಬಾಣಿ ಎಂಬ ಆಲೂಗಡ್ಡೆ ಬೆಳೆದ ರೈತ ಆತ್ಮಹತ್ಯೆ ಮಾಡಿಕೊಂಡ ಸುದ್ದಿಯನ್ನು ಕೇಳಿ ಮರುಗದವರಿಲ್ಲ. ಅದರ ಬೆನ್ನಿಗೆ ಇನ್ನೊಬ್ಬ ರೈತ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಬಂದಿದೆ. ಇದು ಹೊಸ ವರ್ಷದ ಬಲಿಗಳ ಆರಂಭ. ಆದರೆ ದೇಶಕ್ಕೆ ಅನ್ನ ನೀಡುವ ಇಂತಹ ಕರ್ಮಯೋಗಿಗಳ ಆತ್ಮಹತ್ಯೆ ಕನ್ನಡ ನಾಡಿಗೆ ಹೊಸದೇನೂ ಅಲ್ಲ. ಕಳೆದ 2 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 77 ಕ್ಕೂ ಮೀರಿ ನೇಗಿಲಯೋಗಿಗಳು ಆತ್ಮಹತ್ಯೆಗಳಿಗೆ ಮೊರೆ ಹೋಗಿದ್ದಾರೆ. ತೊಗರಿ ಬೆಳೆದ ಗುಲ್ಬರ್ಗಾದ ರೈತ, ಭತ್ತ ಬೆಳೆದ ರಾಯಚೂರಿನ ರೈತ, ಜೋಳ ಬೆಳೆದ ಬಿಜಾಪುರದ ರೈತ, ಮೆಣಸಿಕಾಯಿ ಬೆಳೆದ ಬಳ್ಳಾರಿಯ ರೈತ..... ಹೀಗೆ ಬಹುತೇಕ ಜಿಲ್ಲೆಗಳ ವಿವಿಧ ಬೆಳೆಗಳನ್ನು ಬೆಳೆಯುತ್ತಿರುವ ರೈತರು ಈ ಪಟ್ಟಿಯಲ್ಲಿ ಸೇರಿದ್ದಾರೆ. ಈ ಸ್ಥಿತಿ ಕೇವಲ ಉತ್ತರ ಕರ್ನಾಟಕದ ಪ್ರದೇಶದ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗದೇ ವೇಗವಾಗಿ ಇಡೀ ರಾಜ್ಯವನ್ನೇ ಆವರಿಸುತ್ತಿದೆ.

ಅನ್ನದಾತನ ಈ ದುಸ್ಥಿತಿಗೆ ಕಾರಣ ಯಾರು?

ವಿಶ್ವ ಬ್ಯಾಂಕ್, ವಿಶ್ವ ವ್ಯಾಪಾರಿ ಸಂಘಟನೆ (WTO) ಮತ್ತು ಇವುಗಳಿಗೆ ಗುಲಾಮರಾಗಿರುವ ಬಿಜೆಪಿ ನಾಯಕತ್ವದ ಕೇಂದ್ರ ಸರ್ಕಾರದ ನೀತಿಗಳು!

ಸ್ವದೇಶಿ, ಸ್ವಾವಲಂಬನೆ, ವರ್ಷಕ್ಕೆ ಒಂದು ಕೋಟಿ ಉದ್ಯೋಗ ಇತ್ಯಾದಿ ಬಣ್ಣ ಬಣ್ಣದ ಘೋಷಣೆಗಳೊಂದಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿ ನಾಯಕತ್ವದ ಕೇಂದ್ರ ಸರ್ಕಾರ, ಕೃಷಿ ರಂಗದ ಇವತ್ತಿನ ಸ್ಥಿತಿಗೆ 1994 ರ 'ಗ್ಯಾಟ್' ಒಪ್ಪಂದಕ್ಕೆ ಸಹಿ ಮಾಡಿದ ಕಾಂಗ್ರೆ ಕಾರಣವೆಂದು ದೂಷಿಸುತ್ತಾ 'ಗ್ಯಾಟ್'ನ ಇವತ್ತಿನ ಅವತಾರವಾದ WTO ನಲ್ಲಿ ಕೃಷಿಕರ ರಕ್ಷಣೆಗಾಗಿ ಇರುವ ಸೀಮಿತ ಅವಕಾಶಗಳನ್ನು ಉಪಯೋಗಿಸಲು ಸಿದ್ಧವಿಲ್ಲದೆ, ಬಹುರಾಷ್ಟ್ರೀಯ ಕಂಪನಿಗಳನ್ನು ತೃಪ್ತಿಪಡಿಸಲು ನಿಗದಿತ ಅವದಿಗಿಂತ ಮುಂಚಿತವಾಗಿ 1429 ಕೃಷಿ ಉತ್ಪನ್ನಗಳನ್ನು ಆಮದಿನ ಮೇಲೆ ಇದ್ದ ಎಲ್ಲಾ ನಿರ್ಬಂಧಗಳನ್ನು ತೆಗೆದು

ಕೃಷಿ ಉತ್ಪನ್ನಗಳ ಬೆಲೆಗಳ ಪರಿಸ್ಥಿತಿ

	1999-2000	2000-2001
	(ಕ್ವಿಂಟಾಲಿಗೆ)	ರೂ.ಗಳಲ್ಲಿ
ಭತ್ತ	600-700	450-500
ಜೋಳ	700-900	350-375
ಮೆಕ್ಕೆಜೋಳ	600-700	300-350
ಶೇಂಗಾ	1100-1400	900-1100
ತೊಗರಿ	1400-1700	1100-1200
ಅಡಿಕೆ	1300-14000	6000-7000
ಕಾಫೀ	12,000-14000	3600-4000
ತೆಂಗು (1ಕ್ಕೆ)	4.00-5.00	1.50-2.00

ಹಾಕಿದೆ. ಮತ್ತು ಆಮದು ಸುಂಕಗಳನ್ನು ಕಡಿತ ಮಾಡಿದೆ. ಇದರ ಫಲವಾಗಿ ಬ್ರೆಜಿಲ್, ಇಂಡೋನೇಶಿಯಾ, ಮಲೇಷಿಯಾ, ಬರ್ಮಾದಿಂದ ಎಣ್ಣೆ, ತೊಗರಿ, ಚೀನಾದಿಂದ ರೇಷ್ಮೆ, ಅಮೆರಿಕಾ, ಫ್ರಾನ್ಸ್, ಬ್ರಿಟನ್‌ಗಳಿಂದ ಹಾಲಿನ ಪುಡಿ, ಪಾಕಿಸ್ತಾನದಿಂದ ಸಕ್ಕರೆ, ಲಂಡನ್‌ನಿಂದ ಚಿಕನ್, ಆಸ್ಟ್ರೇಲಿಯಾದಿಂದ ಸೇಬು, ಶ್ರೀಲಂಕಾದಿಂದ ತೆಂಗು, ಕಾಫಿ, ಟೀ, ಬರ್ಮಾದಿಂದ ಅಡಿಕೆ, ಥೈಲ್ಯಾಂಡ್, ವಿಯೆಟ್ನಾಂನಿಂದ ಅಕ್ಕಿ ಇತ್ಯಾದಿ ನೂರಾರು ಕೃಷಿ ಉತ್ಪನ್ನಗಳು ಯಥೇಚ್ಛವಾಗಿ ಹರಿದುಬರುತ್ತಿದೆ. 2001 ಏಪ್ರಿಲ್‌ನಿಂದ ಆಮದು ನೀತಿ ಸಂಪೂರ್ಣವಾಗಿ ಸಡಿಲಗೊಂಡು ಕೃಷಿ ಉತ್ಪನ್ನಗಳು ಯಾವುದೇ ನಿಯಂತ್ರಣವಿಲ್ಲದೆ ದೇಶದೊಳಗೆ ಹರಿದು ಬರಲಿವೆ. ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಲಿದೆ.

ಇದರ ಪರಿಣಾಮವಾಗಿ ದೇಶಿಯ ಕೃಷಿ ಉತ್ಪನ್ನಗಳ ಬೆಲೆ ಶೇ. 50-250 ರಷ್ಟು ಕುಸಿದು, ಹಾಕಿರುವ ಬಂಡವಾಳ ವಾಪಸ್ ಬರದೆ, ಸಾಲಗಾರರ ಕಾಟ ತಾಳಲಾರದೆ ಸ್ವಾಭಿಮಾನಿಯಾದ ಶ್ರಮಜೀವಿ ರೈತ ಬೇರೆ ದಾರಿ ಕಾಣದೆ ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾನೆ. ಕರ್ಮಯೋಗಿಯ ನಿಜವಾದ ಕೊಲೆಗಡುಕರು ಆಡಳಿತ ನಡೆಸುವ ಬಹುರಾಷ್ಟ್ರೀಯ ಕಂಪನಿಗಳ ಸಾಮ್ರಾಜ್ಯಶಾಹಿಗಳ ಈ ಏಜೆಂಟರು.

ವಿದ್ಯುತ್ ದರ ಏರಿಕೆ, ಕೃಷಿ ಉತ್ಪನ್ನಗಳ ಬೆಲೆ ಕುಸಿತಕ್ಕೆ ಕಾರಣವಾಗಿರುವ
ಕೇಂದ್ರಸರ್ಕಾರದ ಜನ ವಿರೋಧಿ ಕೃಷಿ ನೀತಿ, ಆಮದು ನೀತಿಗಳನ್ನು ವಿರೋಧಿಸಿ
ರಾಜ್ಯಾದ್ಯಂತ ಫೆಬ್ರುವರಿ 2001 ರ 5-6 ರಂದು ರಸ್ತೆ ತಡೆ, ರೈಲು ತಡೆ
ಫೆಬ್ರುವರಿ 7 ರಂದು ಪಿಕೆಟಿಂಗ್ ಮತ್ತು ಜೈಲ್ ಭರೋ

ರೈತನ ಈ ಸ್ಥಿತಿಗೆ ಮತ್ತೊಂದು ಕಾರಣ

ದೇಶದ ದೊಡ್ಡ ಬಂಡವಾಳಗಾರ ಭೂಮಾಲೀಕರ ಆಡಳಿತವನ್ನು ದೃಢಪಡಿಸಲು ಮತ್ತು ವಿದೇಶಗಳ ಸಾಲ ಸುಮಾರು 10,12,486 ಕೋಟಿಗೂ ಮೀರಿದೆ. ಪ್ರತಿ ವರ್ಷ 1 ಲಕ್ಷ ಕೋಟಿ ರೂ. ಬಡ್ಡಿಯಾಗಿ ಕಟ್ಟಲಾಗುತ್ತಿದೆ. IMF-WB ಸಾಲ ತರುವಾಗ ಅವರ ಶರತ್ತುಗಳಿಗೆ ಮಣಿದು ಜಾಗತೀಕರಣ-ಉದಾರೀಕರಣದ ಹೆಸರಿನಲ್ಲಿ ಆಮದು-ರಫ್ತು ನೀತಿಗಳನ್ನು ಸಡಿಲಗೊಳಿಸುವುದರ ಜೊತೆಗೆ ದೇಶದಲ್ಲಿ ಕೃಷಿಗೆ ನೀಡುತ್ತಿರುವ ಸಬ್ಸಿಡಿಗಳನ್ನು ಕಡಿತ ಮಾಡಬೇಕೆಂಬ ಶರತ್ತನ್ನು ಒಪ್ಪಿ ನೀಡಲಾಗುತ್ತಿರುವ ಶೇ 2-3 ರ ಸಣ್ಣ ಪ್ರಮಾಣದ ಸಬ್ಸಿಡಿಗಳನ್ನು ಕಡಿತ ಮಾಡಲಾಗುತ್ತಿದೆ. ಮತ್ತು ಕೃಷಿಗೆ ಎಲ್ಲವನ್ನು ಖಾಸಗೀಕರಣಗೊಳಿಸಲಾಗುತ್ತಿದೆ. ಇದರ ಪರಿಣಾಮ ಎಲ್ಲ ಕೃಷಿ ಸಾಮಗ್ರಿಗಳು ದುಬಾರಿಯಾಗುತ್ತಿವೆ. ಅಂದರೆ ಒಂದು ಕಡೆ ಕೃಷಿ ಸಾಮಗ್ರಿಗಳ ಬೆಲೆಗಳು ದುಬಾರಿ ಮತ್ತೊಂದು ಕಡೆ ಕೃಷಿ ಉತ್ಪನ್ನಗಳ ಬೆಲೆ ತೀವ್ರವಾಗಿ ಕುಸಿತ. ಇದರಿಂದ ರೈತ ಸಂಕಷ್ಟಕ್ಕೆ ಗುರಿಯಾಗಿದ್ದಾನೆ.

ಕೂಲಿಕಾರರ ಸ್ಥಿತಿ-ಹೆಚ್ಚುತ್ತಿರುವ ನಿರುದ್ಯೋಗ ಹಸಿವು, ಆಕ್ರೋಶ

ಈ ಅತ್ಯಂತ ಕೃಷಿ ವಿರೋಧಿ ಧೋರಣೆಗಳ ಪರಿಣಾಮವಾಗಿ ಕೃಷಿಕೂಲಿಕಾರರಿಗೆ ಕೆಲಸವಿಲ್ಲ. ಕೃಷಿ ರಂಗದಲ್ಲಿ ದೊಡ್ಡ ಪ್ರಮಾಣದಲ್ಲಿ ರಂಗ ಪ್ರವೇಶ ಮಾಡುತ್ತಿರುವ ಯಾಂತ್ರೀಕರಣದಿಂದ ನಿರುದ್ಯೋಗ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳುತ್ತಿದೆ. ಸ್ಫೋಟಗೊಂಡಿರುವ ಈ ನಿರುದ್ಯೋಗ ಬಡತನ ಹಸಿವನ್ನು ಹೆಚ್ಚಿಸಿದೆ. ಆದರೆ ಕೇಂದ್ರ ಸರ್ಕಾರ ಈ ಬಡವರಿಗೆ ನೀಡಲಾಗುತ್ತಿದ್ದ ರೇಷನ್, ಸೀಮೆಎಣ್ಣೆ ದರಗಳನ್ನು ಎರಡು ಮೂರು ಬಾರಿ ಏರಿಸಿದೆ. ರಾಜ್ಯದಲ್ಲಿ ಇದ್ದ 65 ಲಕ್ಷ ಹಸಿರು ಕಾರ್ಡ್ ಫಲಾನುಭವಿಗಳ ಸಂಖ್ಯೆಯನ್ನು 27 ಲಕ್ಷಕ್ಕೆ ಇಳಿಸಲು ಹುನ್ನಾರ ನಡೆದಿದೆ. ಕೇಂದ್ರ ಸರ್ಕಾರದ ಗೋದಾಮುಗಳಲ್ಲಿ 40ದಶಲಕ್ಷ ಟನ್ ಆಹಾರ ಪದಾರ್ಥಗಳು ಕೊಳೆತು ನಾಶವಾಗುತ್ತಿದೆ. ಆದರೆ ಬಡವರಿಗೆ ಒಪ್ಪತ್ತಿನ ಊಟವಿಲ್ಲ. ಕೋಟ್ಯಾಂತರ ಕೂಲಿಕಾರರಿಗೆ ನೆರವು ಒದಗಿಸಬಹುದಾದ 'ಕೂಲಿಗಾಗಿ ಕಾಳು' ಯೋಜನೆಯಂತಹ ಕಾರ್ಯಕ್ರಮವನ್ನು ರೂಪಿಸುವುದರ ಬದಲಿಗೆ ಕುಟುಂಬಕ್ಕೆ 5 ಕೆ.ಜಿ. ಅಕ್ಕಿ ನೀಡುವ ಅಂತ್ಯೋದಯದಂತಹ ಅಸಮರ್ಪಕ ಯೋಜನೆಗಳನ್ನು ಘೋಷಿಸಿದೆ. ಕೋಟ್ಯಾಂತರ ಸಂಖ್ಯೆಯಲ್ಲಿರುವ ಈ ಶ್ರಮಜೀವಿಗಳ ಕೆಲಸ, ಕೂಲಿ, ಜೀವನ ಭದ್ರತೆಗಾಗಿ ಕೇಂದ್ರೀಯ ಶಾಸನವನ್ನು ರೂಪಿಸಲು ಈ ತನಕ ಸಾಧ್ಯವಾಗಿಲ್ಲ. ಇಂತಹ ಸ್ಥಿತಿಯಲ್ಲಿ ಕೂಲಿಕಾರ ಅತ್ಯಂತ ಕಷ್ಟಕ್ಕೆ ಗುರಿಯಾಗಿ ಆಕ್ರೋಶಗೊಂಡಿದ್ದಾನೆ.

ಕೇಂದ್ರ ಸರ್ಕಾರದ ಹಾದಿಯಲ್ಲಿ ಮುನ್ನಡೆಯುತ್ತಿರುವ ರಾಜ್ಯ ಕಾಂಗ್ರೆ ಸರ್ಕಾರ

1994 ರ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿ ಇವತ್ತಿನ ಸ್ಥಿತಿಗೆ ಕಾರಣವಾಗಿರುವ ಕಾಂಗ್ರೆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಜೊತೆಗೆ ಕೃಷಿ ಬಿಕ್ಕಟ್ಟಿನ ಸಂದರ್ಭದಲ್ಲಿ ರಾಜ್ಯದ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ರೈತರ ನೆರವಿಗೆ ಕೇಂದ್ರ ಸರ್ಕಾರ ಧಾವಿಸುವಂತೆ ಒತ್ತಡವನ್ನು ಹೇರುವುದರಲ್ಲಿ ವಿಫಲವಾಗಿದೆ.

ಜಿ.ಸಿ.ಬಯ್ಯಾರೆಡ್ಡಿ

ಸಮಸ್ಯೆಗಳ ಪರಿಹಾರಕ್ಕೆ ಸೀಮಿತವಾಗಿ ಮಾಡಬಹುದಾದ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಮುಖ್ಯವಾಗಿ ಕೇಂದ್ರ ಸರ್ಕಾರದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಧೋರಣೆಗಳನ್ನೇ ಅನುಸರಿಸುತ್ತಿದೆ. ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸಲು ತೀರ್ಮಾನಿಸಿ ಸಂಕಷ್ಟದಲ್ಲಿರುವ ರೈತರಿಂದ 17-18 ವರ್ಷಗಳ ಹಳೇ ಬಾಕಿಗಳ ಹೆಸರಿನಲ್ಲಿ ಹತ್ತಾರು ಸಾವಿರ ರೂ.ಗಳನ್ನು ಬಲವಂತದಿಂದ ಸಂಗ್ರಹ ಮಾಡುವ ಕ್ರಮ, ನೀರಾವರಿ ಪಂಪ್‌ಸೆಟ್ ವಿದ್ಯುತ್ ದರಗಳನ್ನು ಶೇಕಡ 100-300 ರಷ್ಟು ಏರಿಕೆ, ಮೀಟರ್ ಅಳವಡಿಕೆಯಂತಹ ಅತ್ಯಂತ ಜನವಿರೋಧಿ ಕ್ರಮಗಳಿಗೆ ಮುಂದಾಗುತ್ತಿದೆ. ತಮ್ಮದೇ ರೀತಿ ನೀತಿಗಳನ್ನು ಗಾಳಿಗೆ ತೂರಿ ದೀರ್ಘಾವಧಿಯಲ್ಲಿ ತೀರಾ ಕೆಟ್ಟ ದುಷ್ಪರಿಣಾಮಗಳನ್ನು ಬೀರಲಿರುವ ಮಾನ್ಸಂಟೋ ಕಂಪನಿಯ ಬಿಟಿ ಕಾಟನ್ ಬೀಜಗಳನ್ನು ಉಪಯೋಗಿಸಿ ಕೃಷಿ ಮಾಡಲು ಅವಕಾಶ ಮಾಡಿಕೊಡುತ್ತಿದೆ. ಸರ್ಕಾರದ ಇಂತಹ ಜನವಿರೋಧಿ ಮತ್ತು ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಬೇಕಿದೆ.

ವಿವಿಧ ದೇಶಗಳ ಕೃಷಿ ಸಬ್ಸಿಡಿಗಳು

ಅಮೇರಿಕಾ:	ಶೇ. 3ರಷ್ಟು ಇರುವ ತನ್ನ ರೈತರಿಗೆ ಅಮೇರಿಕಾ ನೀಡುತ್ತಿರುವ ಸಬ್ಸಿಡಿ - ಪ್ರತಿ ಹೆಕ್ಟೇರಿಗೆ 306.65 ಡಾಲರ್ 1998-99- ರೈತರಿಗೆ ನೀಡಿರುವ ಸಬ್ಸಿಡಿ - 97.3 ಶತಕೋಟಿ ಡಾಲರ್
ಸ್ವಿಝರ್ಲ್ಯಾಂಡ್-	ಕೃಷಿಗೆ ಪ್ರತಿವರ್ಷ ನೀಡುವ ಸಬ್ಸಿಡಿ - 6.2 ಶತಕೋಟಿ ಡಾಲರ್
ಜಪಾನ್ -	ಪ್ರತಿವರ್ಷದ ಸಬ್ಸಿಡಿ - 56.8. ಶತಕೋಟಿ ಡಾಲರ್

ನಮ್ಮ ಕೇಂದ್ರ ಸರ್ಕಾರ ರಸಗೊಬ್ಬರಕ್ಕೆ ನೀಡುತ್ತಿರುವ ಸಬ್ಸಿಡಿ ಕೇವಲ 12,000 ಕೋಟಿ ರೂ ಮಾತ್ರ.

ಸಮಸ್ಯೆಗಳಿಗೆ ಪರಿಹಾರ - ಆತ್ಮಹತ್ಯೆಯಲ್ಲ, ಹೋರಾಟ!

ಸಮಸ್ಯೆಗಳಿಗೆ ಪರಿಹಾರ ಆತ್ಮಹತ್ಯೆಯಲ್ಲ, ಹೋರಾಟ ಎಂದು ರೈತ ಕೂಲಿಕಾರರು ಸ್ವಯಂಪ್ರೇರಣೆಯಿಂದ ಹೋರಾಟಗಳಿಗೆ ಮುಂದಾಗುತ್ತಿದ್ದಾರೆ. ಬೆಂಬಲ ಬೆಲೆಗಾಗಿ, ಸರ್ಕಾರದಿಂದ ಮಾರುಕಟ್ಟೆ ಮಧ್ಯ ಪ್ರವೇಶಕ್ಕಾಗಿ ಆಗ್ರಹಿಸಿ ಪೋಲೀಸರ ಲಾಠೀ, ಗೋಲಿಗಳಿಗೆ ಲೆಕ್ಕಿಸದೆ ಎಪಿಎಂಸಿಗಳ ಮುತ್ತಿಗೆ, ರಸ್ತೆ ತಡೆ, ಬಂದ್, ಘೇರಾವ್ ಇತ್ಯಾದಿ ಹೋರಾಟಗಳಿಗೆ ಮುನ್ನಡೆಯುತ್ತಿದ್ದಾರೆ.

ಈ ಹೋರಾಟಗಳಿಗೆ ಆತ್ಮವಿಶ್ವಾಸ ತುಂಬಿ ದೃಢವಾದ ಸುಸಂಘಟಿತ ಹೋರಾಟವನ್ನಾಗಿ ರೂಪಿಸಲು ರಾಜ್ಯದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ(KRRS), ಕರ್ನಾಟಕ ಪ್ರಾಂತ ರೈತ ಸಂಘ(KPRS) ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(AIAWU) ಮತ್ತು ಅಖಿಲ ಭಾರತ ಕಿಸಾನ್ ಸಭಾ(AIKS) ಕೂಡಿ ಶ್ರಮಿಸುತ್ತಿವೆ.

ನವೆಂಬರ್ 30, 2000 ದೆಹಲಿ ರ್‍ಯಾಲಿಯ ಕರೆ

ತಾಪ್ಯಮಟ್ಟದ 7 ರೈತ ಕೂಲಿಕಾರರ ಸಂಘಟನೆಗಳು ಸಂಘಟಿಸಿದ ನವೆಂಬರ್ 30 ರ ರ್‍ಯಾಲಿಯಲ್ಲಿ KPRS, AIAWU, AIKS ಸೇರಿದಂತೆ ಕರ್ನಾಟಕ ರಾಜ್ಯದ KRRS ಸಹ ಭಾಗವಹಿಸಿತ್ತು. ಅಂದು ದೆಹಲಿಯಲ್ಲಿ ಸಮಾವೇಶಗೊಂಡಿದ್ದ ಲಕ್ಷಾಂತರ ರೈತ ಕೂಲಿಕಾರರ ರ್‍ಯಾಲಿ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ, ಸರ್ಕಾರದ ಏಜೆನ್ಸಿಗಳಿಂದ ಮಾರುಕಟ್ಟೆಯ ಮಧ್ಯೆ ಪ್ರವೇಶ, ಕೃಷಿ ಸಾಮಗ್ರಿಗಳ ಬೆಲೆ ಏರಿಕೆ, ಭೂಮಿ ಹಂಚಿಕೆ, ರೈತ-ಕೂಲಿಕಾರರಿಗೆ ಅಗತ್ಯ ಬ್ಯಾಂಕ್ ಸಾಲ, ಬೆಳೆ ವಿಮೆ, ಕೂಲಿಕಾರರಿಗೆ ಕನಿಷ್ಟ ಕೂಲಿ, ಕೆಲಸ, ಇತ್ಯಾದಿ ಕಾರ್ಷಿಕ ಸಮಸ್ಯೆಗಳ ಪರಿಹಾರಕ್ಕೆ ಫೆಬ್ರವರಿ 5-6, 2001 ರಂದು ಗ್ರಾಮಾಂತರ ಪ್ರದೇಶದಲ್ಲಿ ರಸ್ತೆ ತಡೆ, ರೈಲು ತಡೆ ನಡೆಸಲು, ಫೆಬ್ರವರಿ 7 ರಂದು ತಾಲೂಕು-ಜಿಲ್ಲಾ ಕೇಂದ್ರಗಳಲ್ಲಿ ಕೇಂದ್ರ ಸರ್ಕಾರದ ಕಚೇರಿಗಳನ್ನು ಪಿಕೆಟಿಂಗ್ ನಡೆಸಿ ಜೈಲ್ ಭರೋ ಹೋರಾಟವನ್ನು ಸಂಘಟಿಸಲು ಕರೆ ನೀಡಿದೆ.

ಈ ಹಿನ್ನೆಲೆಯಲ್ಲಿ ಇಡೀ ದೇಶಾದ್ಯಂತ ರೈತ ಕೂಲಿಕಾರರ ಮಹಾನ್ ಸಾಮೂಹಿಕ ಕಾರ್ಯಾಚರಣೆ ನಡೆಯಲಿದೆ. ನಮ್ಮ ರಾಜ್ಯದಲ್ಲಿಯೂ ಫೆಬ್ರವರಿ 5-6 ರಂದು ಹಳ್ಳಿ ಹಳ್ಳಿಗಳಲ್ಲಿ ರಸ್ತೆ, ರೈಲು ತಡೆಗಳು, 7 ರಂದು ಪಿಕೆಟಿಂಗ್ ನಡೆಸಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ರೈತ ಕೂಲಿಕಾರರು ಜೈಲುಗಳನ್ನು ತುಂಬಲು ಸಿದ್ಧರಾಗಬೇಕಿದೆ.

ರೈತ ಕೂಲಿಕಾರರ ಬೆಂಬಲವಾಗಿ ಹೋರಾಟದ ಕಣಕ್ಕೆ ಕಾರ್ಮಿಕ, ವಿದ್ಯಾಥಿ-ಯುವಜನ ಬಂಧುಗಳು

ಗ್ರಾಮೀಣ ಶ್ರಮಜೀವಿಗಳ ಈ ಮಹಾನ್ ಹೋರಾಟಕ್ಕೆ ಕಾರ್ಮಿಕ ವರ್ಗ ಬೆಂಬಲ ನೀಡಿ ಹೋರಾಟದಲ್ಲಿ ಭಾಗವಹಿಸಬೇಕೆಂದು ಇತ್ತೀಚೆಗೆ ಹೈದ್ರಾಬಾದ್‌ನಲ್ಲಿ ನಡೆದ CITU ಅಖಿಲ ಭಾರತ ಸಮ್ಮೇಳನ ಕರೆ ನೀಡಿದೆ. ಇದೇ ರೀತಿಯಲ್ಲಿ AITUC ಈ ಹೋರಾಟವನ್ನು ಯಶಸ್ವಿಗೊಳಿಸಲು ಶ್ರಮಿಸಲು ನಿರ್ಧರಿಸಿದೆ. ಮತ್ತು ವಿದ್ಯಾರ್ಥಿ-ಯುವಜನ ಸಮುದಾಯವನ್ನು ಹೋರಾಟದಲ್ಲಿ ಇಳಿಸಲು SFI, DYFI, AISF, AIYF, ವಿದ್ಯಾರ್ಥಿ-ಯುವ ಜನತಾದಳ(ಎಸ್) ಇತ್ಯಾದಿ ಸಂಘಟನೆಗಳು ನಿರ್ಧರಿಸಿವೆ.

ಒಟ್ಟಾರೆ ಫೆಬ್ರವರಿ 5-6-7 ರ ಹೋರಾಟವನ್ನು ಚಾರಿತ್ರಿಕ ಆಂದೋಲನವನ್ನಾಗಿಸಲು ಎಲ್ಲಾ ದೇಶಪ್ರೇಮಿಗಳ ಸಂಘಟನೆಗಳು, ಶಕ್ತಿಗಳು ಮುಂದಾಗಬೇಕೆಂದು, ರೈತ ಕೂಲಿಕಾರರು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಿದೆ



ಸಂತ್ರಸ್ಥ ರೈತರಿಗೆ ತುರ್ತು ಪರಿಹಾರಕ್ಕೆ ಆಗ್ರಹ

ಇತ್ತೀಚೆಗೆ ಧಾರವಾಡ ಜಿಲ್ಲಾ ರೈತರು ಆಲುಗಡ್ಡೆ, ಈರುಳ್ಳಿ, ಗೋವಿನ ಜೋಳ, ಮುಂತಾದ ತಮ್ಮ ಬೆಳೆಗಳಿಗೆ ನ್ಯಾಯ ಬೆಲೆ ಸಿಗದೆ, ಸಾಲದ ಭಾರ ತಡೆಯಲಾರದೆ ತಮ್ಮ ಆಸ್ತಿ ಒಡವೆ ವಸ್ತುಗಳನ್ನು ಮತ್ತು ಎಮ್ಮ ಎತ್ತುಗಳನ್ನು ಅಗ್ಗದ ದರಗಳಲ್ಲಿ ಮಾರಿಕೊಂಡು ನಿರ್ಗತಿಕರಾಗುತ್ತಿದ್ದಾರೆ. ಹತಾಶರಾಗಿ ಆತ್ಮ ಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಈ ರೀತಿ ಸಂಕಷ್ಟಗಳಿಗೊಳಗಾದ ರೈತರಿಗೆ ರಾಜ್ಯ ಸರಕಾರ ತುರ್ತು ಪರಿಹಾರ ನೀಡಬೇಕೆಂದು ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯ ನಿಯೋಗವು ಮುಖ್ಯ ಮಂತ್ರಿಗಳಿಗೆ ನವಲೂರಿನಲ್ಲಿ ಮಹದೇವಪ್ಪ ಬಸಪ್ಪಾ ಬಾನಿ ಎಂಬ ರೈತ ಇಂತಹ ದುರಂತಕ್ಕೆ ಒಳಗಾಗಿದ್ದು, ಅವರ ಕುಟುಂಬಕ್ಕೆ ಕೂಡಲೇ ಪರಿಹಾರ ನೀಡಲು ನಿಯೋಗ ಒತ್ತಾಯಿಸಿದೆ. ಜನವರಿ 15ರಂದು ಸಿಪಿಐ(ಎಂ) ನಿಯೋಗ ಮೃತರ ಕುಟುಂಬದವರನ್ನು ಮತ್ತು ನೆರೆಹೊರೆಯವರನ್ನು ನವಲೂರನಲ್ಲಿ ಭೇಟ್ಟಿಮಾಡಿ ಸಾಂತ್ವಾನ ಹೇಳಿ ಬಂದಿದೆ. ಅಲ್ಲಿ ದೊರೆತ ಮಾಹಿತಿಗಳ ಆಧಾರದಲ್ಲಿ ಇಂತಹ ದುರಂತಗಳು ಇನ್ನುಮುಂದೆ ಆಗದಂತೆ ವಹಿಸಬೇಕಾದ ಕ್ರಮಗಳನ್ನು ಸರ್ಕಾರದ ಗಮನಕ್ಕೆ ತಂದಿದೆ.

ನಿಯೋಗದಲ್ಲಿ ಜಿಲ್ಲಾ ಕಾರ್ಯದರ್ಶಿ ಸಿ.ಆರ್.ಬಟ್, ಎಂ.ಬಿ.ಕಟ್ಟಿ, ಆರ್.ಎಚ್.ಆಯಿ, ಬಿ.ಎನ್. ಪೂಜಾರಿ, [illegible] ಮುಂತಾದವರು [illegible].

ಭಾರತವೀಗ 51ನೇ ಗಣರಾಜ್ಯೋತ್ಸವದ ಸಂದರ್ಭದಲ್ಲಿದೆ. ಕೇಂದ್ರದಲ್ಲಿ ಅಧಿಕಾರ ಹಿಡಿದಿರುವ 'ಕರಸೇವಕರು' ದೇಶದ ಸಂವಿಧಾನದ ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆಯಂತಹ ಮೂಲಭೂತ ಆಶಯಗಳನ್ನು ಬುಡಮೇಲುಗೊಳಿಸುವ ಸನ್ನದ್ಧರಾಗಿದ್ದಾರೆ. ಅದರ ಭಾಗವಾಗಿಯೇ ನೇಮಕಗೊಂಡದ್ದು 'ಸಂವಿಧಾನ ಪರಾಮರ್ಶೆ'ಯ ಆಯೋಗ. ಇದರ ಪಿತೂರಿಗಳನ್ನು ಬಿಡಿಸಿಟ್ಟರೂ, ಕೆಲವರು 'ಸಂವಿಧಾನದ ಸುಧಾರಿಸುವ ಪ್ರಾಮಾಣಿಕ ಯತ್ನ'ವೆಂದು ಬಣ್ಣಿಸಿದ್ದರು. ಆದರೀಗ... ಪ್ರಕಟಿತವಾದ 'ಟಿಪ್ಪಣಿ'ಗಳು ಆಯೋಗದ ನಿಜ ಉದ್ದೇಶವನ್ನು ಮತ್ತೆ ಬಹಿರಂಗಪಡಿಸಿವೆ.

ಭಾರತದ ಜನತೆಯ ಅಭಿವೃದ್ಧಿ ದೇಶದ ಅಪಾರ ಸಾಧನೆಗಳಿಗೆ ಹಲವು ಮುತಿಗಳ ನಡುವೆಯೂ ಅವಕಾಶ ಕಲ್ಪಿಸಲಾಗಿದ್ದ ಈ ಗಣರಾಜ್ಯದ ಸಂವಿಧಾನವನ್ನು ಹೇಗೆ ಛಿದ್ರಗೊಳಿಸಬಯಸಿದ್ದಾ ಎಂಬುದನ್ನು ಬಿಡಿಸಿಟ್ಟಿದ್ದಾರೆ ಪ್ರಕಾಶ್‌ಕಾರಟ್‌ರವರು.

ಮೇಲ್ವರ್ಗಗಳ ರಾಜಕೀಯ ಮತ್ತು ಕೋಮುವಾದದ ಹೊಲಸು ಮಿಶ್ರಣ

ಒಂದು ವರ್ಷದ ಹಿಂದೆ ಸಂವಿಧಾನ ಪರಾಮರ್ಶೆಗೆ ಒಂದು ಆಯೋಗವನ್ನು ನೇಮಿಸಿದಾಗ ಸಿಪಿಐ(ಎಂ), ಇತರ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಎಚ್ಚರಿಕೆ ನೀಡಿದ್ದವು - ಇದರ ಹಿಂದೆ ಆರ್.ಎಸ್.ಎಸ್. - ಬಿಜೆಪಿ ಕೂಟದ ದೀರ್ಘಾವಧಿಯ ಗುರಿಗಳನ್ನು

ಸಂವಿಧಾನ ಪರಾಮರ್ಶೆ ಆಯೋಗದ 'ಪ್ರಬಂಧ'ಗಳು ಪ್ರಕಟ

ಈಡೇರಿಸಿಕೊಳ್ಳುವ ಆಟ ಅಡಗಿದೆ ಎಂದು. ಅದೀಗ ನಿಜವಾಗುತ್ತಿದೆ. ಆಯೋಗ ಚುನಾವಣಾ ಸುಧಾರಣೆ, ರಾಜಕೀಯ ಸುಧಾರಣೆ ಮತ್ತು ನ್ಯಾಯಾಂಗ ಸುಧಾರಣೆಯ ಕೆಲವು ಅಂಗಗಳ ಮೇಲೆ ಪ್ರಬಂಧಗಳನ್ನು ಬಿಡುಗಡೆ ಮಾಡಿದೆ - ಸಾರ್ವಜನಿಕ ಚರ್ಚೆಗೆ ಎಂದು. ಈ ಪ್ರಬಂಧಗಳು ಈ ಆಯೋಗವನ್ನು ಒಪ್ಪಬಾರದು, ನಾವು ಯಾವುದೇ ರೀತಿಯಲ್ಲಿ ಈ ಆಯೋಗದ ಕಲಾಪಗಳಲ್ಲಿ ಭಾಗವಹಿಸಬಾರದು ಎಂಬ ಸಿಪಿಐ(ಎಂ) ನಿಲುವನ್ನು ಸಂಪೂರ್ಣವಾಗಿ ಸಮರ್ಥಿಸುವಂತಿದೆ.

ಈ ಆಯೋಗ ಕುರಿತಂತೆ ಎತ್ತಿದ ಆಕ್ಷೇಪಗಳು ಮುಖ್ಯವಾಗಿ ಮೂರು. ಮೊದಲನೆಯದು: ಸರಕಾರ ನೇಮಿಸಿದ ಈ ಆಯೋಗಕ್ಕೆ ಸಂವಿಧಾನದ ಸಮಗ್ರ ಪರಾಮರ್ಶೆ ಮಾಡುವ ಯಾವುದೇ ಕಾನೂನಾತ್ಮಕ ಅನುಮೋದನೆಯಿಲ್ಲ. ಕೇವಲ ಸಂಸತ್ತು ಮಾತ್ರವೇ ಇದನ್ನು ಮಾಡಬಲ್ಲದು. ಆದರೆ ಇಲ್ಲಿ ಸಂಸತ್ತು ಮಾತ್ರವೇ ಇದನ್ನು ಮಾಡಬಲ್ಲದು. ಆದರೆ ಇಲ್ಲಿ ಸಂಸತ್ತನ್ನು ಸಂಪೂರ್ಣವಾಗಿ ಬದಿಗೊತ್ತಲಾಗಿದೆ. **ಎರಡನೆಯದು,** ಬಿಜೆಪಿ ಒಂದು ಅಧ್ಯಕ್ಷೀಯ ಮಾದರಿ ಸರ್ಕಾರ ತರಬೇಕು, 30ನೇ ಕಲಮು ಮುಂತಾದ ಅಲ್ಪಸಂಖ್ಯಾತರಿಗೆ ಕೆಲವು ಹಕ್ಕುಗಳನ್ನು ನೀಡುವ ಸಂವಿಧಾನ ಕಲಮುಗಳನ್ನು ಬದಲಿಸಬೇಕು ಎಂದು ಪ್ರತಿಪಾದಿಸುತ್ತಾ ಬಂದಿದೆ. **ಮೂರನೆಯದಾಗಿ,** ಸಂವಿಧಾನದ ಜಾತ್ಯಾತೀತ ಸ್ವರೂಪವನ್ನು ಬದಲಿಸಿ ಹಿಂದುತ್ವದ ಅಗತ್ಯಗಳಿಗೆ ಅನುಗುಣವಾಗಿ ಅದನ್ನು ರೂಪಿಸಲು ಇದು ನೆವವಷ್ಟೆ. ಹಿಂದೂ ರಾಷ್ಟ್ರದ ಗುರಿಗೆ ಸಂವಿಧಾನ ಒಂದು ಅಡಚಣೆ ಎಂದು ಆರ್.ಎಸ್.ಎಸ್. ಟೀಕಿಸುತ್ತಲೇ ಬಂದಿದೆ.

ಸಂವಿಧಾನ ಪರಾಮರ್ಶೆ ಆಯೋಗ ಈಗ ಬಿಡುಗಡೆ ಮಾಡಿರುವ ಪ್ರಬಂಧಗಳ ಮೊದಲ ಕಂತು ಬಿಜೆಪಿಯ ಪರೋಕ್ಷ ಗುರಿಗಳನ್ನು ಬಯಲು ಮಾಡಿದೆ. ಸಂಸದೀಯ ಪ್ರಜಾಪ್ರಭುತ್ವವನ್ನು ಮೊಟಕುಗೊಳಿಪುದು, ಆಳುವ ವರ್ಗಗಳು ಬಯಸುವಂತೆ ಪ್ರಜಾಪ್ರಭುತ್ವವನ್ನು ಮೊಟಕುಗೊಳಿಸಬೇಕು, 'ಚೊಕ್ಕಟಗೊಳಿಸಬೇಕು' ಎಂದು ಯಾವುದೇ ನಾಚಿಕೆಯಿಲ್ಲದೆ ಪ್ರತಿಪಾದಿಸಿದೆ.


ಪ್ರಜಾಪ್ರಭುತ್ವವನ್ನು ಮೊಟಕುಗೊಳಿಸಲು

ರಾಜಕೀಯ ಪಕ್ಷಗಳು ಮತ್ತು ಚುನಾವಣಾ ಸುಧಾರಣೆಗಳನ್ನು ಕುರಿತ ಪ್ರಬಂಧ ಮಾಜಿ ರಾಷ್ಟ್ರಪತಿ ವೆಂಕಟರಾಮನ್, ಮಾಜಿ ಲೋಕಸಭಾಧ್ಯಕ್ಷ ಶಿವರಾಜ ಪಾಟೀಲ್ ಮತ್ತಿತರ ಬಲಪಂಥೀಯ ಸಂವಿಧಾನ ತಜ್ಞರ ಅತ್ಯಂತ ಪ್ರತಿಗಾಮಿ ಪ್ರಸ್ತಾಪಗಳನ್ನು ಕಲೆಹಾಕಿ ಕೊಟ್ಟಿದೆ. ಸಂಸದೀಯ ಪ್ರಜಾಪ್ರಭುತ್ವವನ್ನು ಮೊಟಕುಗೊಳಿಸಿ ಅಧ್ಯಕ್ಷೀಯ ಮಾದರಿಗೆ ದಾರಿ ಮಾಡಿಕೊಡುವುದು ಇದರ ಸಾರಾಂಶ.

ರಾಜಕೀಯ ಪಕ್ಷಗಳನ್ನು ಆಧರಿಸಿದ ವ್ಯವಸ್ಥೆಯ ಮಾರ್ಪಾಡಿಗೆ ಮತ್ತೆ ಮತ್ತೆ ರಾಜಕೀಯ ಅಸ್ಥಿರತೆಯ ನೆವ ಕೊಡಲಾಗಿದೆ. ಲೋಕಸಭೆಯ ಮುಖಂಡರನ್ನು (ಅಂದರೆ ಪ್ರಧಾನ ಮಂತ್ರಿಗಳನ್ನು) ಸದನವೇ ಆರಿಸಬೇಕಂತೆ, ಲೋಕಸಭಾಧ್ಯಕ್ಷರನ್ನು ಆರಿಸಿದಂತೆ. ಅಂದರೆ ಯಾವುದೇ ಪಕ್ಷಕ್ಕೆ ಬಹುಮತವಿಲ್ಲದಿದ್ದಾಗ ರಾಷ್ಟ್ರಪತಿಗಳು ಅತಿದೊಡ್ಡ ಪಕ್ಷದ ಅಥವಾ ಕೂಟದ ಮುಖಂಡರನ್ನು ಪ್ರಧಾನಮಂತ್ರಿಗಳಾಗಿ ಅಧಿಕಾರ ವಹಿಸಿಕೊಳ್ಳಲು ಆಹ್ವಾನಿಸುವಂತಿಲ್ಲ. ಅದೇ ರೀತಿ ಒಬ್ಬ ಪ್ರಧಾನ ಮಂತ್ರಿ ಬಹುಮತ ಕಳಕೊಂಡಾಗ ಸದನದ ಬೆಂಬಲ ಪಡೆಯಿರಿ ಎಂದೂ ರಾಷ್ಟ್ರಪತಿಗಳು ಕೇಳುವಂತಿಲ್ಲ ಕಸರತ್ತುಗಳು, ಸಮಯಸಾಧಕ ಕೂಟಗಳ ಮೂಲಕ ಪಕ್ಷ ಪದ್ಧತಿಯನ್ನೇ ಅಪ್ರಸ್ತುತ ಮಾಡಿಬಿಡಬೇಕು ಎಂಬ ಹುನ್ನಾರ ಇದು.

ಸಂಸತ್ತು ನೇರವಾಗಿ ಒಬ್ಬ ಮುಖಂಡನನ್ನು ಆರಿಸುವುದಾದರೆ ಪಕ್ಷ ಪದ್ಧತಿ ಆಧರಿಸಿದ ಸಂಸದೀಯ ಪದ್ಧತಿ ಎಲ್ಲಿ ಉಳಿಯುತ್ತದೆ? ಅಂದರೆ ಇಲ್ಲಿ ಅಧ್ಯಕ್ಷ ಮಾದರಿಯ ಪ್ರಧಾನ ಮಂತ್ರಿಯನ್ನು ಕಳ್ಳತನದಿಂದ ತರುವ ಪ್ರಯತ್ನ ಎದ್ದು ಕಾಣುತ್ತದೆ.

ಅವಿಶ್ವಾಸ ಠರಾವು ಮಂಡಿಸುವುದನ್ನು ಕಷ್ಟಕರಗೊಳಿಸಬೇಕಂತೆ. ಸುಮಾರಾಗಿ ಅದನ್ನು ಬಳಸದ ಹಾಗೆ ಮಾಡಮಬೇಕೆಂಬುದೇ ಮುಖ್ಯ ಆಶಯವಿದ್ದಂತಿದೆ. ಕನಿಷ್ಟ ಶೇ 20 ಸದಸ್ಯರು ಈ ಠರಾವು ಮಂಡಿಸಲು ಬೇಕು ಎನ್ನುವಂತೆ ಬದಲಾವಣೆ ತರಬೇಕಂತೆ. ಅಲ್ಲದೆ ಈ ಅವಿಶ್ವಾಸ ಸೂಚನೆಯ ಜತೆಗೆ ಪರ್ಯಾಯ ಮುಖಂಡರ ಆಯ್ಕೆಯ ಪ್ರಸ್ತಾವವೂ ಇರಬೇಕಂತೆ. ಅಷ್ಟೇ ಅಲ್ಲ, ಜತೆಗೆ ಇನ್ನೊಂದು ಹಾಸ್ಯಾಸ್ಪದ ಪ್ರಸ್ತಾವವೂ ಇದೆ. ಇಲ್ಲಿಯೂ **ಅಮೆರಿಕಾದ ಮಾದರಿಯಲ್ಲಿ 'ಮುಖಂಡತ್ವ ಸಮಾವೇಶ'ಗಳನ್ನು ನಡೆಸಿ ಜನ ಪ್ರಧಾನಮಂತ್ರಿ ಅಭ್ಯರ್ಥಿಗಳ ಬಗ್ಗೆ ಮೊದಲೇ ತಿಳಿದುಕೊಳ್ಳುವಂತೆ ಮಾಡಬೇಕಂತೆ. ಅಧ್ಯಕ್ಷೀಯ ಮಾದರಿ ಈ ಪ್ರಬಂಧದಲ್ಲಿ ಹಾಸುಹೊಕ್ಕಾಗಿದೆ.**



ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ

ಜನಗಳಲ್ಲಿ ನಂಬಿಕೆಯಿಲ್ಲ

ಈ ಆಯೋಗದಲ್ಲಿ ಜನತೆಯ ಬಗ್ಗೆ ಭಾರೀ ಸಂದೇಹಗಳಿರುವ ವ್ಯಕ್ತಿಗಳೇ ಇರುವಂತೆ ಕಾಣುತ್ತದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರದ ಬಗ್ಗೆ ಅವರಿಗೆ ಭಾರೀ ಆತಂಕವಿದ್ದಂತಿದೆ. ಇಲ್ಲವಾದರೆ ರಾಜಕೀಯ ಪಕ್ಷಗಳು ಸಾರ್ವಜನಿ ರ್‍ಯಾಲಿಗಳು, ಮತ ಪ್ರದರ್ಶನಗಳು ಮತ್ತು ಪ್ರತಿಭಟನೆಗಳಿಗೆ ಮಾಡುವ ಖರ್ಚನ್ನು ಮಿತಗೊಳಿಸಬೇಕೆಂಬ ಹಾಸ್ಯಾಸ್ಪದ ಪ್ರಸ್ತಾವ ಬರುತ್ತಿರಲಿಲ್ಲ. ಈಗಿನ ಸ್ಯಾಟಲೈಟ್ ಇಲೆಕ್ಟ್ರಾನಿಕ್ ಮಾಧ್ಯಮದ ದಿನಗಳಲ್ಲಿ ಇವೆಲ್ಲಾ ಬೇಕಿಲ್ಲವಂತೆ. ಇದರಿಂದ ರಾಜಧಾನಿಗಳಲ್ಲಿ ಆಗಾಗ ಸಾರ್ವಜನಿಕ ರ್‍ಯಾಲಿಗಳು, ಬೃಹತ್ ಮತ ಪ್ರದರ್ಶನಗಳಿಂದ ಜನಗಳಿಗಾಗುವ ತೊಂದರೆಯೂ ತಪ್ಪುತ್ತದಂತೆ.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಈ ರೀತಿ ಸಾರ್ವಜನಿ ರ್‍ಯಾಲಿಗಳಲ್ಲಿ, ಮತ ಪ್ರದರ್ಶನಗಳಲ್ಲಿ, ಪ್ರತಿಭಟನೆಗಳಲ್ಲಿ ಅಪಾರ ಜನಸಮೂಹಗಳನ್ನು ಅಣಿನೆರೆಸಬೇಕೆಂದಿದ್ದಾರೆ. ಸ್ವತಂತ್ರ ಭಾರತದ ಸಂವಿಧಾನವನ್ನು ಚರ್ಚಿಸಲು ಈ ಮಹಾಶಯಗಳಿಗೆ ಅವಕಾಶವೇ ಸಿಗುತ್ತಿರಲಿಲ್ಲ ಎಂಬ ಅರಿವು ಇದ್ದಂತಿಲ್ಲ. ಪಕ್ಷಗಳು ಜನಗಳನ್ನು ಅಣಿನೆರೆಸುವ ಕೆಲಸ ಬಿಟ್ಟು ದೊಡ್ಡ ವ್ಯಾಪಾರಸ್ಥರ ಒಡೆತನದ ಸರಕಾರದ ಟಿ.ವಿ. ಚಾನಲ್‌ಗಳನ್ನು ಬಳಸಬೇಕು ಎಂದು ನಿರೀಕ್ಷಿಸುವುದು ಜನತೆಯ ಬಳಿಗೆ ಹೋಗದೆಯೇ ಚುನಾವಣೆಗಳ ಮೇಲೆ ಪ್ರಭಾವ ಬೀರುವಷ್ಟು ಅಗಾಧ ಹಣ ಸಂಪನ್ಮೂಲ ಇರುವವರಿಗೆ ಮಾತ್ರ ಸಾಧ್ಯ.


ಹೀಗೆ ಈ ಪ್ರಬಂಧದಲ್ಲಿ ಪ್ರಜಾಪ್ರಭುತ್ವವನ್ನು ನಾಶಗೊಳಿಸಬಯಸುವ ಪ್ರಸ್ತಾವಗಳು ಸಾಲುಗಟ್ಟಿ ಬಂದಿವೆ. ಆಯೋಗಗಳ ಪ್ರಕಾರ 'ನಿರಕ್ಷರಿ' ನಾಗರಿಕರು ಚುನಾವಣೆಗೆ ಸ್ಪರ್ಧಿಸಲು ಬಿಡಬಾರದಂದೆ. ಚುನಾವಣೆಗೆ ಸ್ಪರ್ಧಿಸುವವರಿಗೆ ಓದಲು, ಬರೆಯಲು, ಸಂವಿಧಾನದ ಅಂಶಗಳನ್ನು ತಿಳಿಯಲು ಸಾಧ್ಯವಾಗಬೇಕಂತೆ. ನಮ್ಮ ದೇಶದ ಆಳುವ ವರ್ಗಗಳ ದಯೆಯಿಂದ ಈಗಲೂ 40 ಶೇಕಡಾ ಜನಗಳಿಗೆ ಓದರು, ಬರೆಯಲು ಬಾರದ ಪರಿಸ್ಥಿತಿಯಿದೆ. ಅಂದರೆ ಭಾರತೀಯ ಪ್ರಭುತ್ವದ ಈ ಶೋಚನೀಯ ವಿಫಲತೆಗೆ ಈ 40 ಶೇಕಡಾ ಜನಕ್ಕೆ ಶಿಕ್ಷೆ ಕೊಡಬೇಕು. ಅದೇಕೋ ಆಸ್ತಿವಂತರು ಮಾತ್ರ ಮತ ನೀಡಲು ಅರ್ಹರೆಂದಾಗಬೇಕು ಎಂದು ಹೇಳಿಲ್ಲ. ಅದಕ್ಕಾಗಿ ನಾವು ಕೃತಜ್ಞರಾಗಿರಬೇಕು!

'ಅಸ್ಥಿರತೆ'ಯ ಭಯ

ಪುಟ 11 ಕ್ಕೆ

ಸ್ವರ್ಣವಲ್ಲಿ ಮಠಾಧೀಶರು ಮತ್ತು ಸಂವಿಧಾನದಲ್ಲಿ ಅಧ್ಯಾತ್ಮಿಕತೆಯ ಉಪದೇಶವು

ಅದು ಶಿರಸಿಯ ಸೊಂದ ಸ್ವರ್ಣದಲ್ಲಿ ಮಹಾ ಸಂಸ್ಥಾನದ ಸ್ವಾಮಿಗಳು ಏರ್ಪಡಿಸಿದ ವಿಚಾರಸಂಕಿರಣ. ಈ ವಿಚಾರ ಸಂಕಿರಣದ ವಿಷಯ 'ಭಾರತದ ಸಂವಿಧಾನದಲ್ಲಿ ಧರ್ಮ ಮತ್ತು ಅದ್ಯಾತ್ಮಿಕತೆಯನ್ನು ಸೇರಿಸಬೇಕೆಂದು, ಅದು ಸಂವಿಧಾನದ ಪ್ರಸ್ತಾವನೆಯಲ್ಲಿ 'ಜಾತ್ಯಾತೀತ' ಎಂಬ ಪದದ ನಂತರ ಧರ್ಮ ಮತ್ತು ಆದ್ಯಾತ್ಮಿಕ ಎಂಬ ಪದಗಳನ್ನು ಸೇರಿಸಬೇಕೆಂದು, ಇದರ ಬಗ್ಗೆ ಚಿಂತನೆ ಮಾಡಲೆಂದೆ ಈ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಕಳೆದ 10-15 ವರ್ಷಗಳಿಂದ ನಮ್ಮ ಸಂವಿಧಾನದ ಮೂಲ ಆಶಯ ಮತ್ತು ಆಧಾರವಾಗಿರುವ ಜಾತ್ಯಾತೀತ ಮೌಲ್ಯಗಳಿಗೆ ಸಮಗ್ರತೆ ಸವಾಲು ಹಾಕಿರುವ ಧರ್ಮಾಂದ ಮೂಲಭೂತವಾದಿ ಶಕ್ತಿಗಳು ಧರ್ಮದ ಮತ್ತು ಜಾತಿಯ ಆಧಾರದಲ್ಲಿ ಈ ದೇಶವನ್ನು ಛಿದ್ರ ಮಾಡಲು ಹುನ್ನಾರ ಹೂಡಿ ಧರ್ಮದ ಹೆಸರಿನಲ್ಲಿ ಮತ್ತು ಜಾತಿ ಹೆಸರಿನಲ್ಲಿ ಇವರು ಹರಿಸಿರುವ ರಕ್ತದ ಹೊಳೆ ಇತಿಹಾಸಕ್ಕೆ ಕಪ್ಪು ಚುಕ್ಕೆಯಾಗಿ ಜಗತ್ತಿನ ಮುಂದೆ ತಲೆತಗ್ಗಿಸುವಂತಾಗಿದೆ. ಇದೇ ಸಂದರ್ಭದಲ್ಲಿ ಬಹುಸಂಖ್ಯಾತ ಮೂಲಭೂತವಾದಿ ಶಕ್ತಿಗಳಿಗೆ ಕೇಂದ್ರದಲ್ಲಿ ಅಧಿಕಾರ ಸಿಕ್ಕ ನಂತರ ಅವರ ಸಂವಿಧಾನವನ್ನೇ ಪರಾಮರ್ಶೆ ಮಾಡಲು ಈಗಾಗಲೆ ಒಂದು ಸಮಿತಿಯನ್ನು ಸಹ ನೇಮಕ ಮಾಡಿದ್ದಾರೆ. ಮೂಲಭೂತವಾದಿಗಳ ಈ ಕ್ರಮವನ್ನೆ ಭಾರತದ ಜಾತ್ಯಾತೀತ ಶಕ್ತಿಗಳು ಆತಂಕದಿಂದ



ನೋಡುತ್ತಿದ್ದಾರೆ. ಈಗ ಸಂವಿಧಾನದಲ್ಲಿ ಧರ್ಮವನ್ನು ಮತ್ತು ಆಧ್ಯಾತ್ಮಿಕತೆಯನ್ನು ಸೇರಿಸಬೇಕೆಂಬ ಈ ವಾದ ಮತ್ತು ಇದರ ಹಿಂದಿರುವ ಶಕ್ತಿಗಳು ಯಾವುವು ಎಂಬುದನ್ನು ಸ್ಪಷ್ಟವಾಗಿ ತಿಳಿಯಬೇಕಾಗಿದೆ.

ಭಾರತದ ಸಂವಿಧಾನವು ಎಲ್ಲಾ ಧರ್ಮಗಳನ್ನು ಸಮಾನವಾಗಿ ನೋಡುವ ಮತ್ತು ಎಲ್ಲಾ ಧರ್ಮಗಳಿಗೆ ಸಮಾನ ಅವಕಾಶ ಕೊಡುವ ಆಶ್ವಾಸನೆಯನ್ನು ಕೊಟ್ಟಿದೆ. ಇಲ್ಲಿ ಯಾವುದೇ ಒಂದು ಧರ್ಮ ತನ್ನ ಅಧಿಪತ್ಯವನ್ನು ಸ್ಥಾಪಿಸಲು ಅವಕಾಶವಿದ್ದು ಮತ್ತು ನಮ್ಮ ಸಂವಿಧಾನವು ಧರ್ಮನಿರಪೇಕ್ಷತೆಯನ್ನು ಎತ್ತಿ ಹಿಡಿದಿದೆ. ಇಂತಹ ಸಂವಿಧಾನದಲ್ಲಿ ಧರ್ಮ ಮತ್ತು ಆದ್ಯಾತ್ಮಿಕತೆಯನ್ನು ಸೇರಿಸಬೇಕೆಂಬುದು ಉದ್ಧಟತನ ಮತ್ತು ಕುಚೋದ್ಯದಿಂದ ಕೂಡಿದೆ. ಇಷ್ಟಕ್ಕೂ ಇವರು ಯಾವ ಧರ್ಮವನ್ನು ಮತ್ತು ಯಾವ ಆಧ್ಯಾತ್ಮಿಕತೆ ವಾದವನ್ನು ಸಂವಿಧಾನದಲ್ಲಿ ಸೇರಿಸಬೇಕೆಂದು ಹೇಳುತ್ತಾರೆ? ಇದು ಬಹುಧರ್ಮೀಯ ದೇಶ. ಹಾಗೆಯೇ ಆದ್ಯಾತ್ಮಿಕವಾದದ ಬಹಳಷ್ಟು ಭಿನ್ನವಾದ ಆದ್ಯಾತ್ಮಿಕ ಭಾವನೆಗಳು ಮತ್ತು ಅಭಿಪ್ರಾಯಗಳು ಇವೆ. ಕೆಲವರಿಗೆ ಪುನರ್ಜನ್ಮದಲ್ಲಿ ನಂಬಿಕೆ ಇದೆ. ಕೆಲವರಿಗೆ ಇಲ್ಲ. ಕೆಲವರಿಗೆ ಇಹ ಲೋಕದಲ್ಲಿ ನಂಬಿಕೆ ಇಲ್ಲ. ಕೆಲವರಿಗೆ ಪರಲೋಕದಲ್ಲಿ ನಂಬಿಕೆ ಇಲ್ಲ. ಕೆಲವು ವಿಗ್ರಹರಾಧನೆಯನ್ನು ನಂಬುತ್ತಾರೆ. ಕೆಲವು ವಿರೋಧಿಸುತ್ತಾರೆ. ಕೆಲವು ಆಕಾರಗಳನ್ನು ನಂಬುತ್ತಾರೆ. ಕೆಲವರು ನಿರಾಕಾರವೆನ್ನುತ್ತಾರೆ. ಬಹುಧರ್ಮೀಯ ದೇಶದಲ್ಲಿ ಯಾವ ಧರ್ಮವನ್ನು ಸೇರಿಸಬೇಕು. ಒಂದು ವೇಳೆ ಆದ್ಯಾತ್ಮಿಕವಾದ ಒಂದನ್ನೇ ಸೇರಿಸಬೇಕೆಂದರೆ ಅದರಲ್ಲು ಏಕತೆ ಇಲ್ಲ. ಕೆಲವು ಅದ್ಯಾತ್ಮಿಕತೆಯೆಂದರೆ ಸರ್ವಸಂಗ ಪರಿತ್ಯಾಗ.

ಪುಟ 8 ಕ್ಕೆ

ಹಾಲಾಹಲವಾದ ಹೈ

40 ಸಾವಿರ ಟನ್ ಹಾಲಿನ ಪುಡಿ ಅಮೆರಿಕಾದಿಂದ ಕಡಲುಗಳ ದಾಟಿ ಪಂಜಾಬಿಗೆ ಬಂದಿಳಿದಾಗ ಬೊಬ್ಬಿಟ್ಟರು ರೈತರು. ಆಧುನಿಕ ಸಂಶೋಧನೆಗಳ ಫಲವಾಗಿ ಹಾಲಿನ ಹೊಳೆಯನ್ನೇ ಹರಿಸಿ 'ಕ್ಷೀರಕ್ರಾಂತಿ'ಯ ಹರಿಕಾರರಾದ(ಶ್ವೇತಕ್ರಾಂತಿ) ಪಂಜಾಬಿನ ರೈತರು ಈ ಮೊದಲ ಕಂತಿನ ಆಮದಿನಿಂದ ಕಂಗಾಲಾಗಿದ್ದದ್ದು ಸಹಜವೇ. ಹೀಗೆ ಹಾಲಿನ ಪುಡಿ, ಹಾಲಿನ ಉತ್ಪಾದನೆಗಳು... ಸಾವಿರ ಸಾವಿರ ಟನ್ ಬಂದಿಳಿಯುತ್ತಿದ್ದರೆ ಇಂದು ನಾಳೆಯ ನಮ್ಮ ಗತಿಯೇನು? ಎಂದು ಚಿಂತಿತರಾದವರಿಗೆ ಸಮಜಾಯಿಷಿ ಇರಲಿ, ಸಾಂತ್ವನವನ್ನೂ ಹೇಳಲಿಲ್ಲ ದೆಹಲಿಯ ಸರ್ಕಾರ. ಇದಾಗಿ ಹಲವು ತಿಂಗಳುಗಳೇ ಆದರೂ ತಮ್ಮ ಗದ್ದುಗೆಗೆ ಮಾರುದ್ದದ ದೂರದಲ್ಲಿರುವ ಪಂಜಾಬ್‌ನ ರೈತರನ್ನು ಕಣ್ಣೆತ್ತಿಯೂ ನೋಡಿಲ್ಲ. ಹಾಲಿನ ಪುಡಿ ಆಮದು ನಿಂತೇ ಇಲ್ಲ. ಜೊತೆಗೆ ಹಾಲೆಂಡಿನ ಸಗಣಿ ಬೇರೆ.....

ಆಂಧ್ರದ 'ಹೆರಿಟೇಜ್' ಒಳಗೊಂಡು ಇನ್ನಾವುದೇ ಹೊರಗಿನ ಖಾಸಗಿ ಹಾಲನ್ನು ಕರ್ನಾಟಕದೊಳಗೆ ಪ್ರವೇಶಿಸಲು ಬಿಡುವುದಿಲ್ಲ ಎಂದು ಗುಡುಗಿದ್ದ ರಾಜ್ಯದ ಸಹಕಾರ ಸಚಿವ ಶಿವಕುಮಾರ್‌ಗೆ ಆಡಿದ ಮಾತು ಮರತೇ ಹೋದಂತಿದೆ. ಈ 'ಹೆರಿಟೇಜ್' (ಚಂದ್ರಬಾಬುನಾಯ್ಡು ಸಂಬಂಧಿಕರದ್ದು) ಹಾಲು ದಿನ ಬೆಳಗಾಗುವುದರೊಳಗೆ ಬೆಂಗಳೂರಿಗೆ 1 ಲಕ್ಷ 60 ಸಾವಿರ ಲೀಟರ್ ಒಳಹರಿದು, ವಿತರಣೆಯಾಗಿಬಿಡುತ್ತದೆ. ಇನ್ನು ನೆರೆಯ ತಮಿಳುನಾಡು ಕಡೆಗಳಿಂದ ಹಲವು 'ಬ್ರಾಂಡ್'ಗಳ ಹಾಲು ಬರುತ್ತಲಿದೆ. ಜೊತೆಗೆ 'ನೀಲಗಿರಿಸ್' ಇವುಗಳೊಂದಿಗೆ ಬೆಸೆದುಕೊಂಡಿದೆ. ಆದರೆ ನಮ್ಮ ಬೆಂಗಳೂರು ಡೈರಿಯಲ್ಲಿ 1 ಲಕ್ಷ 25 ಸಾವಿರ ಲೀಟರ್ ಹಾಲು ಮಿಕ್ಕಿ ಹಾಳಾಗುತ್ತಿದೆ ಎಂಬ ಮಾತೂ ಕೇಳುತ್ತಿದೆ. ಮೇಲಾಗಿ ಬೆಂಗಳೂರು ಡೈರಿಯಲ್ಲಿ ನಡೆಯುವ ಭ್ರಷ್ಟಾಚಾರ, ಪೋಲು, ಅವ್ಯವಹಾರಗಳಿಗೆ ನಿಯಂತ್ರಣವೂ ಇಲ್ಲದಿರುವುದು ಇನ್ನೊಂದು ಕಥೆ. ಇಂತಹವುಗಳಿಗೆ ನಿಯಂತ್ರಣ ಹಾಕಿದರೆ ನಮ್ಮ ಹಾಲು ಉತ್ಪಾದಕರಿಗೆ ಕನಿಷ್ಟ ರಕ್ಷಣೆ ಸಿಗಬಹುದು.

ಆದರೆ..... ಇದಕ್ಕೆ ಹೆಚ್ಚು ಆಘಾತಕಾರಿಯಾದದ್ದು ವಿದೇಶಗಳಿಂದ ತರಿಸಲಾಗುತ್ತಿರುವ ಹಾಲಿನ ಉತ್ಪನ್ನಗಳು. ಕೇಂದ್ರ ಸರ್ಕಾರದ ಜಾಗತೀಕರಣ, ಉದಾರೀಕರಣದ ನೀತಿಗಳ ವಿವಿಧ ವಿಭಾಗಗಳ ಜನರಿಗೆ, ಮುಖ್ಯವಾಗಿ ರೈತಾಪಿ ಜನಸಮೂಹಕ್ಕೆ ತಂದೊಡ್ಡುತ್ತಿರುವ ಆತಂಕಗಳು ಹಲವು. ಹತ್ತಿ, ಎಣ್ಣೆಕಾಳು, ಭತ್ತ, ಗೋಧಿ, ಕಾಫಿ; ಟೀ, ತೆಂಗು ಮುಂತಾದ ಬೆಳೆಗಳು ರೈತರು ವಿನಾಶದತ್ತ ತಳ್ಳಿರುವಾಗ ಹಾಲು ಉತ್ಪಾದಕರದ್ದು ಈಗಿನ ಸರದಿ. ವಿಶ್ವದಲ್ಲೇ ಹಾಲಿನ ಉತ್ಪಾದನೆಯಲ್ಲಿ ಅಗ್ರಸ್ಥಾನ ಪಡೆದಿರುವ ಭಾರತ ಅದನ್ನು ಹೊಂದಿಕೊಂಡ ಲಕ್ಷಾಂತರ ಕುಟುಂಬಗಳ ಭವಿಷ್ಯವೇನು?

ನಮ್ಮ ಬೆಂಗಳೂರು ಹಾಲು ಉತ್ಪಾದಕರು ಎದುರಿಸುತ್ತಿರುವ ಪ್ರಸಕ್ತ ಸಮಸ್ಯೆಯ ಮೇಲೆ ಬೆಳಕು ಚೆಲ್ಲುವುದು ಈ ಲೇಖನ.

ಎನ್.ವೆಂಕಟಾಚಲಯ್ಯ, ಎನ್.ಪ್ರಭಾ

ಬೀದಿಗಿಳಿದವರ ಸರದಿಯಲ್ಲಿ ಹಾಲು ಉತ್ಪಾದಕರು

"ಚಾಕ್ಲೇಟು, ಚಿಪ್ಸು, ಆಲೂಗಡ್ಡೆ, ಶುಂಟಿ, ಟೊಮೊಟೋ ಮುಂತಾದ ರೀತಿಯ ಪದಾರ್ಥಗಳೇ ವಿದೇಶದಿಂದ ದುಮುಕ್ಕುತ್ತಿರುವಾಗ ಇನ್ನು ಹಾಲು ಹಾಲಿನ ಪುಡಿ, ವಿದೇಶದಿಂದ ಬರದೇ ಹೋದರೆ ಹೇಗೆ?"

ಅಪ್ಪಟ ಸ್ವದೇಶಿ ಮಾಲಾದ ಹಾಲೂ ಸಹ ಮಾರುಕಟ್ಟೆಗೆ ನುಗ್ಗಿದೆ. ಸ್ಥಳೀಯವಾದ ಸಮಸ್ಯೆಗಳ ಮಧ್ಯದಲ್ಲಿಯೇ ಚೇತರಿಸಿಕೊಳ್ಳುತ್ತಿದ್ದ ಹೈನು ಉದ್ಯಮ ವಿದೇಶೀ ಹಾಲಿನ ಧಾಳಿಯಿಂದಾಗಿ ಮುಗ್ಗರಿಸುತ್ತಿದೆ. ದಾಳಿಗಳ ಮೇಲೆ ದಾಳಿಗಳನ್ನ ಎದುರಿಸುತ್ತಿರುವ ರೈತ ಆತ್ಮಹತ್ಯೆಗಳ ಅಗ್ರ ಪಂಕ್ತಿಯಲ್ಲಿದ್ದಾನೆ. ಮಂಡ್ಯದಲ್ಲಿ ಕಬ್ಬು ಬಳ್ಳಾರಿಯಲ್ಲಿ ಹತ್ತಿ, ಮೆಣಸಿನಕಾಯಿ, ಗುಲ್ಬರ್ಗಾದಲ್ಲಿ ತೊಗರಿ ರಾಯಚೂರಿನಲ್ಲಿ ಭತ್ತ, ಹಾಸನದಲ್ಲಿ ಆಲೂಗಡ್ಡೆ, ತುಮಕೂರಿನಲ್ಲಿ ಕಡಲೆಕಾಯಿ, ಬೆಂಗಳೂರು, ಕೋಲಾರದಲ್ಲಿ ಟೊಮೊಟೋ, ತರಕಾರಿ ಬೆಳೆದ ರೈತ ಉದಾರೀಕರಣದ ವಿಷ ಕುಡಿಯುತ್ತಿರುವಾಗಲೇ ಹಾಲು ಉತ್ಪಾದಕರೀಗ 'ಅಸ್ತಿತ್ವಕ್ಕಾಗಿ' ಹೋರಾಟ ನಡೆಸುತ್ತಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದಿದ್ದಾರೆ.

ಹೋರಾಟದ ಹಾದಿ ಹಿಡಿದವರ ಸರದಿಯಲ್ಲೀಗ ಹಾಲು ಉತ್ಪಾದಕರೂ ಸೇರ್ಪಡೆಯಾಗಿದೆ. ಕೋಲಾರ ಜಿಲ್ಲೆಯ ಹಾಲು ಉತ್ಪಾದಕರು ಚಳುವಳಿ ನಡೆಸಿದ್ದು ಪೊಲೀಸರ, ಅಧಿಕಾರಿಗಳ ಅಷ್ಟೇ ಏಕೆ ಸರ್ಕಾರದ ದಬ್ಬಾಳಿಕೆ ಎದುರಿಸಿದ ನೆನಪು ಹಸಿಯಾಗಿರುವಾಗಲೇ ಬೆಂಗಳೂರು ಜಿಲ್ಲೆಯ ಹಾಲು ಉತ್ಪಾದಕರು ಸಹ ಸಹಸ್ರಾರು ಸಂಖ್ಯೆಯಲ್ಲಿ ಬೆಂಗಳೂರಿನ ಡೈರಿಯನ್ನು ಮುತ್ತಿಗೆ ಹಾಕಿದರು. ಏಕಿರಬಹುದು?"

ಹೈನು ಗ್ರಾಮಾಂತರ ಪ್ರದೇಶದ ರೈತರ ಪ್ರಧಾನ ಉಪಕಸುಬು ಉಪ್ಪು-ಮೆಣಸು, ಸೊಪ್ಪು, ಬಟ್ಟೆ-ಬರೆ ಔಷದಿ ಮಾತ್ರೆ, ಮಕ್ಕಳ ವಿದ್ಯಾಭ್ಯಾಸ ಇನ್ನಿತರೆ ಗೃಹ ಖರ್ಚುಗಳನ್ನು ಪೂರೈಸಿಕೊಳ್ಳಲು ರೈತರಿಗಿರುವ ಮುಖ್ಯ ಮಾರ್ಗೋಪಾಯ ಹೈನುಗಾರಿಕೆ. ಪ್ರಸ್ತುತ ದಿನಗಳಲ್ಲಿ ಹೈನುಗಾರಿಕೆ ಮಾತ್ರವನ್ನೇ ಅವಲಂಬಿಸಿ ಬದುಕನ್ನು ದೂಡುತ್ತಿರುವ ನೂರಾರು ಕುಟುಂಬಗಳನ್ನು ಹಳ್ಳಿಗಳಲ್ಲಿ ಮಾತ್ರವಲ್ಲದೆ ಪಟ್ಟಣಗಳಲ್ಲೂ ನೋಡುತ್ತಿದ್ದೇವೆ. ಈ ಪ್ರಾಮುಖ್ಯತೆಯ ಹಿನ್ನೆಲೆಯಲ್ಲಿಯೇ ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಂಡು ಹಾಲಿಗೆ ವ್ಯವಸ್ಥಿತ ಮಾರುಕಟ್ಟೆಯನ್ನು ಕಲ್ಪಿಸಿಕೊಂಡದ್ದು ಜೀವನಾವಶ್ಯಕವಾದ ಹಾಲಿಗೆ ಮಾರುವ-ಕೊಳ್ಳುವ ವ್ಯವಸ್ಥಿತ ರೂಪ ನೀಡಿದ್ದು ಹಾಲು ಉತ್ಪಾದಿಸುವ ಹಳ್ಳಿಗರಿಗೆ ಸ್ಥಳೀಯವಾಗಿ ಹಾಲನ್ನು ವಿಲೇವಾರಿ ಮಾಡಲು ಅನುಕೂಲವಾಗುವ ನಿಟ್ಟಿನಲ್ಲಿ ಪ್ರಾಥಮಿಕ ಹಾಲು ಉತ್ಪಾದಕರ ಸಂಘಗಳು ಗ್ರಾಮಗಳಲ್ಲಿ ಹುಟ್ಟಿಕೊಂಡವು.

ಒಂದು ಹಳ್ಳಿಯಿಂದ ಹಿಡಿದು 10 ಹಳ್ಳಿಗಳ ತನಕ ಹಾಲು ಉತ್ಪಾದಕರು ಇದರ ಸದಸ್ಯರಾಗಿರುತ್ತಾರೆ. ನೂರು ಲೀಟರ್ ಹಾಲಿನಿಂದ ಹಿಡಿದು ಸಾವಿರ ಅಥವಾ ಅದಕ್ಕಿಂತ ಹೆಚ್ಚಿನ ಪ್ರಮಾಣದ ಹಾಲನ್ನು ಈ ಸಹಕಾರಿ ಸಂಘಗಳು ಸ್ಥಳೀಯವಾಗಿ ಸಂಗ್ರಹಮಾಡುತ್ತವೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಒಟ್ಟು 1200 ಪ್ರಾಥಮಿಕ ಹಾಲು ಉತ್ಪಾದಕರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ.

ಪ್ರಾ. ಹಾ.ಉ. ಸಂಘಗಳು ಸಂಗ್ರಹ ಮಾಡುವ ಹಾಲನ್ನು ಶಿಥಲೀಕರಣ ಕೇಂದ್ರಗಳಿಗೆ ರವಾನಿಸಲಾಗುತ್ತದೆ. ತಾಲ್ಲೂಕು ಕೇಂದ್ರಗಳಲ್ಲಿ ಕೆಲಸ ಮಾಡುವ ಶೀಥಲೀಕರಣ ಕೇಂದ್ರಗಳಲ್ಲಿ ತಾಲ್ಲೂಕಿನ ಎಲ್ಲೆಡೆಯಿಂದ ಬಂದ ಹಾಲನ್ನು ಅಳತೆ ಮಾಡುವುದು. ಗುಣಮಟ್ಟವನ್ನು ಪರೀಕ್ಷಿಸುವುದು ಮುಂತಾದವನ್ನು ನಿರ್ವಹಿಸಿ ನಂತರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಸಾಗಿಸಲಾಗುತ್ತದೆ.

ರಾಜ್ಯದಲ್ಲಿ ಒಟ್ಟು 13 ಹಾಲು ಒಕ್ಕೂಟಗಳು ರಚನೆಯಾಗಿವೆ.

ಒಕ್ಕೂಟದಲ್ಲಿ ಹಾಲನ್ನು ಸಂಸ್ಕರಿಸುವುದು, ಗ್ರಾಹಕರಿಗೆ ಸರಬರಾಜು ಮಾಡುವುದು, ಹಾಲಿನಿಂದ ಪುಡಿಯನ್ನು ತಯಾರಿಸುವುದು, ಪೇಡಾ, ಖೋವಾ, ಬರ್ಫಿ ಇನ್ನಿತರೆ ಸಿಹಿ ಪದಾರ್ಥಗಳನ್ನು ಪಾನೀಯಗಳನ್ನು ತಯಾರಿಸುವುದು ಬೆಣ್ಣೆ, ಮೊಸರು, ತುಪ್ಪ ಇತ್ಯಾದಿಗಳನ್ನು ತಯಾರಿಸುವ ಹಾಗೂ ಮಾರಾಟಮಾಡುವ ಕೆಲಸವನ್ನು ಮಾಡಲಾಗುತ್ತದೆ.

ಬಹಳ ಮುಖ್ಯವಾಗಿ ಹಾಲು ಉತ್ಪಾದಕರಿಗೆ ಬೆಲೆ ನಿಗದಿಯಾಗುವುದು ಮತ್ತು ಪಾವತಿಯಾಗುವುದು ಸಹ ಇಲ್ಲಿಂದಲೆ.

ಹಾಲು ಉತ್ಪಾದಕರಿಗೆ ಸಿಗುತ್ತಿರುವ ಬೆಲೆ ಎಷ್ಟು? ಎಲ್ಲಿದೆ ತರ್ಕಶಾಸ್ತ್ರ

ಒಂದು ವರ್ಷದ ಹಿಂದೆ ಅಂದರೆ 99ರಲ್ಲಿ ಲೀಟರಿಗೆ 9 ರೂಪಾಯಿಗಳು ಉತ್ಪಾದಕರಿಗೆ ಸಿಗುತ್ತಿತ್ತು. 6 ತಿಂಗಳ ಹಿಂದೆ ಲೀಟರಿಗೆ 70 ಪೈಸೆ ಕಡಿಮೆ ಮಾಡಿ 8.30ಕ್ಕೆ ಇಳಿಸಲಾಯಿತು. ನಂತರ ಇನ್ನೂ 10 ಪೈಸೆ ಕಡಿಮೆ ಮಾಡಿ 8.20ಕ್ಕೆ ಇಳಿಸಲಾಯಿತು. (ಪ್ರಸ್ತುತದರ).

ಆದರೆ ಅದೇ ಸಂದರ್ಭಕ್ಕೆ ಹಿಂಡಿ, ಬೂಸ ಪಶು ಆಹಾರದ ಬೆಲೆಗಳನ್ನು ಟನ್ ಮೇಲೆ 500-700 ರೂಪಾಯಿಗಳಿಗೆ ಏರಿಸಲಾಯಿತು. ಜೊತೆಗೆ ಪಶು ಔಷದಿ ಮುಂತಾದವುಗಳ ಬೆಲೆಯೂ ದುಬಾರಿಯಾಯಿತು. ಈ ವ್ಯತ್ಯಾಸವನ್ನು ಸರಿದೂಗಿಸುವುದು ಹೇಗೆ? ಪಶು ಆಹಾರದ ಬೆಲೆಗಳು ಹೆಚ್ಚಾಗುವುದಾದರೆ ಹಾಲಿನ ಬೆಲೆಯು ಹೆಚ್ಚಾಗಬೇಕು. ಆಗ ಮಾತ್ರ ಸರಿದೂಗಿಸಲು ಸಾಧ್ಯ ಇದು ಸಾಮಾನ್ಯ ಅರ್ಥಶಾಸ್ತ್ರ. ಆದರೆ ತದ್ವಿರುದ್ಧವಾಗಿ ಹಾಲಿಗೆ ಕೊಡುವ ಬೆಲೆ ಇಳಿಸುವುದು ಅದೇಹಾಲು ಮಾರುವ ರೈತಕೊಳ್ಳುವ ಪದಾರ್ಥಗಳಿಗೆ ಬೆಲೆ ಏರಿಸುವುದು ಯಾವ ತರ್ಕಶಾಸ್ತ್ರ 'ಜಾನುವಾರುಗಳನ್ನು ಕಟುಕರಿಗೆ ಕೊಟ್ಟು ಕೈ ಮುಗಿಯುವುದೋ ಎಂಬುದು ರೈತರ ಪ್ರಶ್ನೆ. ಬೆಳೆಗಳಿಗಂತೂ ಬೆಲೆಇಲ್ಲ ಅಮೃತ ಸಮಾನ ಹಾಲಿನ ಬೆಲೆಯನ್ನೂ ಕಳೆಯುವುದಾದರೆ ನಾವು ವಿಷ ಕುಡಿಯಬೇಕಷ್ಟೆ ಎನ್ನುತ್ತಾರೆ ನೊಂದ ಸಾವಿರಾರು ರೈತರು.

ಪಶುಆಹಾರದ ಬೆಲೆ ಎಲ್ಲೆಡೆ ಒಂದೇ ಆದರೆ ಹಾಲಿಗೆ ಬೇರೆ ಬೇರೆ.

ಹಿಂಡಿ, ಬೂಸ, ಔಷದಿ ಮುಂತಾದವನ್ನು ಬಿಜಾಪುರದಲ್ಲಿ ಕೊಳ್ಳಿ ಬೆಂಗಳೂರಿನಲ್ಲಿ ಕೊಳ್ಳಿ, ಕೊಡಗಿನಲ್ಲೇ ಕೊಳ್ಳಿ, ಕೋಲಾರದಲ್ಲಿ.... ಒಂದೇ ಬೆಲೆ. ಆದರೆ ಹಾಲು ಮಾರುವ ರೈತನಿಗೆ ಸಿಗುವುದು ಮಾತ್ರ ಜಿಲ್ಲೆಗೊಂದೊಂದು ಬೆಲೆ, ಇದರಲ್ಲಿ ಪಶುಗಳ ತಪ್ಪೇನು ಇಲ್ಲ. ಅವು ಎಲ್ಲ ಬಾಗದಲ್ಲೂ ಒಂದೇ ರೀತಿ ಹಾಲನ್ನು ನೀಡುತ್ತವೆ. ಆದರೆ ಬೆಲೆ ನಿಗದಿ ಮಾಡುವವರಿಗೆ ಒಂದೇ ನೀತಿ ಇಲ್ಲವಷ್ಟೆ. ಎಲ್ಲಾ ಒಕ್ಕೂಟದಲ್ಲಿ ಏಕರೀತಿಯ ನ್ಯಾಯಯುತವಾದ ಬೆಲೆಯನ್ನು ನಿಗದಿಪಡಿಸಬೇಕೆನ್ನುವ ಬದ್ದತೆ ಇಲ್ಲ. ಇವುಗಳ ಮೇಲೆ ಬದ್ದತೆಯನ್ನು ಹೇರಬೇಕಾದಂತಹ ದೃಡತೆ ಸರ್ಕಾರಕ್ಕೂ ಇಲ್ಲ. ಬೆಂಗಳೂರಿನ ಹಾಲು ಉತ್ಪಾದಕರಿಗೆ ಲೀಟರಿಗೆ 8 ರೂ 20 ಪೈಸೆ ದೊರೆತರೆ (ಇದೇ ಗರಿಷ್ಠ) ಬಿಜಾಪುರದವರಿಗೆ ಸಿಗುವುದು 6.30ರಿಂದ 7 ರೂಪಾಯಿಗಳು. ಅದೇ ಸಂದರ್ಭಕ್ಕೆ ಹಾಲನ್ನು ಕೊಳ್ಳುವ ಗ್ರಾಹಕರಿಗೂ ಒಂದೇ ಬೆಲೆ ನಿಗದಿಯಾಗಿದೆ ಎನ್ನುವುದನ್ನು ಮರೆಯುವಂತಿಲ್ಲ. ಗ್ರಾಹಕರಿಗೆ ಬೆಲೆ ಹೆಚ್ಚಾದಾಗಲೆಲ್ಲಾ ಹಾಲು ಉತ್ಪಾದಕರಿಗೆ ಬೆಲೆ ಹೆಚ್ಚಾಗುವುದಿಲ್ಲ. ಗ್ರಾಹಕರಿಗೆ ಹೆಚ್ಚಾಗುವಷ್ಟು ಪ್ರಮಾಣದಲ್ಲಿ ಉತ್ಪಾದಕರಿಗೆ ಬೆಲೆ ಸಿಗುತ್ತಿಲ್ಲ. ಕೊಳ್ಳುವವರಿಗೆ ರೂಪಾಯಿಗಳ ಲೆಕ್ಕದಲ್ಲಿ ಬೆಲೆ ಏರಿದರೆ, ಮಾರುವವರಿಗೆ ಪೈಸೆ ಲೆಕ್ಕದಲ್ಲಿ ಮಾತ್ರ ಹೆಚ್ಚಾಗುತ್ತದೆ.

ಹಾಲು ಉತ್ಪಾದಕರಿಗೆ 8.20 ಪೈಸೆ ಸಿಕ್ಕರೆ ಕೊಳ್ಳುವ ಗ್ರಾಹಕರು 11 ರಿಂದ 15 ರೂಪಾಯಿಗಳನ್ನು ಕೊಡಬೇಕಾದ ಸ್ಥಿತಿ ಬೆಂಗಳೂರು ಹಾಲು ಒಕ್ಕೂಟದಲ್ಲಿಯೇ ಚಲಾವಣೆಯಲ್ಲಿದೆ. ಹೀಗಾಗಿ ಹೈನುಗಾರರು ಹಾಲಿನ ಬೆಲೆಯನ್ನು ಹೆಚ್ಚು ಮಾಡುವಂತೆ ಆಗ್ರಹಪಡಿಸಿದರೆ



...ಗಾರಿಕೆ

ಹೋರಾಟ ನಡೆಸಿದರೆ ಗ್ರಾಹಕ ಸಿಟ್ಟಾಗುವ ಅಗತ್ಯವಿಲ್ಲ. ಗ್ರಾಹಕರ ಮೇಲೆ ಹೊರೆ ಹೇರದೆ ಹೈನುಗಾರರ ಬೇಡಿಕೆಗಳನ್ನು ಈಡೇರಿಸಲು



ಸಾಧ್ಯವಿದೆ. ಜನಪರ ನೀತಿ ನಿಲುವುಗಳಿಲ್ಲದೇ ಇಬ್ಬರಿಗೂ ಅನ್ಯಾಯವಾಗುತ್ತಿದೆಯಷ್ಟೆ.

ಹಾಲಿನ ಬೆಲೆ ಕುಸಿದದ್ದೇಕೆ?

98-99ನೇ ಸಾಲಿನಲ್ಲಿ ನಮ್ಮ ದೇಶ ಹೈನು ಉತ್ಪಾದನೆಯಲ್ಲಿ ಜಗತ್ತಿನಲ್ಲೇ ಪ್ರಥಮ ಸ್ಥಾನ ಗಳಿಸಿತ್ತು. ಹೇರಳವಾಗಿ ತಯಾರಿಸಿದ ಹಾಲಿಗೆ ಮಾರುಕಟ್ಟೆಯನ್ನು ಕಲ್ಪಿಸಿಕೊಳ್ಳಲಾಗಿತ್ತು. ಹೈನು ಉದ್ಯಮ ಪ್ರಾಶಸ್ತ್ಯಕ್ಕೆ ಒಳಗಾಗಿತ್ತು. ಹೈನುಗಾರಿಕೆಯ ಮುಖಾಂತರ ಲಕ್ಷಾಂತರ ಮಂದಿಗೆ ಲಕ್ಷಾಂತರ ಉದ್ಯೋಗದ ಅವಕಾಶವು ಲಭ್ಯವಾಗಿತ್ತು. ಇದ್ದಿದ್ದರಲ್ಲಿ ನೆಮ್ಮದಿಯಿಂದ ನಡೆಯುತ್ತಿದ್ದ ಹೈನುಗಾರಿಕೆಯ ಮೇಲೆ ಅಪ್ಪಳಿಸಿದ್ದು ಉದಾರೀಕರಣದ ಬಂಡೆ, ಗುಂಡುಗಳು.

ಅಮೇರಿಕಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಬ್ರಿಟನ್, ಡೆನ್ಮಾರ್ಕ್ ಮುಂದಾದ ದೇಶಗಳಿಂದ ಹಾಲು, ಹಾಲಿನ ಪುಡಿ ಹರಿದು ಬಂತು. ವಿನೂತನ ತಂತ್ರಜ್ಞಾನದ ಮೂಲಕ ಅಭಿವೃದ್ಧಿಪಡಿಸಿದ ಹೈನುಗಾರಿಕೆಯಿಂದಾಗಿ ಆ ದೇಶಗಳಲ್ಲಿ ಹೇರಳವಾಗಿ ಹಾಲು ಉತ್ಪಾದನೆಯಾಯಿತು. ಮಾರುಕಟ್ಟೆ ಇಲ್ಲದೇ ಹೋಯಿತು. ಕೆಟ್ಟವರಿಗೆಲ್ಲಾ ತವರು ಮನೆಗಟ್ಟೆ ಎನ್ನುವಂತೆ ಅಲ್ಲಿ ಬೇಡವಾದ ಹಾಲು ಈ ಬಡ ದೇಶಕ್ಕೆ ನುಗ್ಗಿತು. (WTO ಒಪ್ಪಂದಗಳ ಮೂಲಕ ನಮ್ಮ ದೇಶವನ್ನು ಬಹುರಾಷ್ಟ್ರೀಯ ಕಂಪನಿಗಳು ತವರಾಗಿಸಿಕೊಂಡಿರುವುದು ಗೊತ್ತಲ್ಲ.) ಅಷ್ಟು ಮಾತ್ರವಲ್ಲ ಹಾಲಿನ ಜೊತೆಗೆ ಇಂಡಿ , ಬೂಸ, ಔಷಧಿಯೂ ಬಂತು. ಇಂಡಿ, ಬೂಸ, ಔಷದಿಗಳ ಬೆಲೆಗಳನ್ನು ಜಾಸ್ತಿಮಾಡಿದ ಭೂಪರು ಹಾಲಿನ ಬೆಲೆಯನ್ನು ಇಳಿಸಿದರು. ಇದನ್ನೇ ಜಾರಿ ಮಾಡುವಂತೆ ನಮ್ಮನ್ನು ಆಳುವ ದೊರೆಗಳಿಗೆ ತಾಕೀತು ಮಾಡಿದರು ನಮ್ಮ ದೊರೆಗಳು 'ಜೀ. ಹುಜೂರ್' ಎಂದರು.

ಇಲ್ಲೂ ಹೇರಳವಾಗಿ ತಯಾರಾಗಿದ್ದ ಹಾಲು, ಅಲ್ಲಿಂದಲೂ ಹರಿದು ಬಂದ ಹಾಲು ಒಟ್ಟಾಗಿ ಸೇರಿದ್ದರಿಂದ ದೇಶೀ ರೈತ ಮುಳುಗಡೆಯಾಗಬೇಕಾಗಿ ಬಂತು. ದುಬಾರಿ ಬೆಲೆ ಕೊಟ್ಟು ಇಂಡಿ ಬೂಸ ಕೊಳ್ಳಲಾರ, ಅಗ್ಗದ ಬೆಲೆಗೆ ಹಾಲನ್ನು ಮಾರಲಾರ ಹೇಗಿದೆ ಉದಾರೀಕರಣದ ತಂತ್ರ. ಇಲ್ಲಿಗೆ ರವಾನಿಸಲ್ಪಡುತ್ತಿರುವ ವಿದೇಶೀ ಹಾಲಿನ ಪುಡಿಗೆ ಕೆ.ಜಿ.ಗೆ 40 ರಿಂದ 50 ರೂ ಆದರೆ ದೇಶೀ ಹಾಲಿನ ಪುಡಿಯ ಬೆಲೆ 80 ರಿಂದ 100 ರೂಪಾಯಿಗಳಾಗಿವೆ. ಗ್ರಾಹಕರು ಆರಿಸುವುದು ಯಾವುದನ್ನು ದುಬಾರಿ ಬೆಲೆ ತೆತ್ತು ಸ್ಥಳೀಯವಾಗಿ ಉತ್ಪಾದಿಸಿದ ಹಾಲನ್ನು ಇಲ್ಲಿನ ರೈತ ಏನು ಮಾಡಬೇಕು. ರೈತರ ಗತಿಯೇನು ಇದರ ಹೊಣೆ ಹೊರುವವರು ಯಾರು.

ಜೊತೆಗೂಡಿದ ಸ್ಥಳೀಯ ಸಮಸ್ಯೆಗಳು

ಜನವಿರೋಧಿ, ದೇಶವಿರೋಧಿ, ಸರ್ಕಾರದ ನೀತಿಗಳು ಒಂದು ಕಡೆ ಬಾಧಿಸುತ್ತಿದ್ದರೆ ಸ್ಥಳೀಯವಾಗಿ ರೂಪಿಸಿಕೊಂಡ ವ್ಯವಸ್ಥೆಗಳೂ ಮತ್ತೊಂದು ಕಡೆ ಬಾಧಿಸಬೇಕೆ.

ಪ್ರಾಥಮಿಕ ಸಂಘಗಳ ಮೂಲಕ ಶೀಥಲೀಕರಣಕ್ಕೆ ಹಾಲು ರವಾನಿಸಿದರೆ ಅಲ್ಲಿ ಅಳತೆ ಕಡಿಮೆ ತೋರಿಸುವುದು ಇಷ್ಟಬಂದಂತೆ ಗುಣಮಟ್ಟವನ್ನು ತೋರಿಸುವುದು ಹುಳಿ ಹಾಲೆಂದು ಮೋಸ ಮಾಡುವುದು ಭ್ರಷ್ಟಾಚಾರ ಮಾಡುವುದು.

ಒಕ್ಕೂಟದಿಂದ ಸಹಕಾರಿ ಸಂಘಗಳಿಗೆ ನೀಡುವ ವಾರದ ಬಿಲ್ಲುಗಳನ್ನು ಸಮಯಕ್ಕೆ ಸರಿಯಾಗಿ ನೀಡದೆ ವಿಳಂಬ ಮಾಡುವುದು. (ಎರಡು ತಿಂಗಳಾದರೂ ಬಿಲ್ ನೀಡದೆ ಪ್ರಾಥಮಿಕ ಸಂಘಗಳು ಬಡ್ಡಿಗೆ ಸಾಲ ಪಡೆದು ಹಾಲು ಉತ್ಪಾದಕರಿಗೆ ನೀಡಬೇಕಾಗುವುದು)

ಪ್ರಾ. ಹಾ.ಉ.ಸ. ಸಂಘಗಳಿಗೆ ಲೀಟರಿಗೆ ಕೇವಲ 17 ಪೈಸೆ ಮಾತ್ರ ಸಿಗುತ್ತಿದ್ದು ವ್ಯವಸ್ಥಿತವಾಗಿ ಸಂಸ್ಥೆ ನಡೆಸಲು ಕಷ್ಟವಾಗುತ್ತಿರುವುದು.

ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡುವ ನೌಕರರಿಗೆ ಕೆಲಸದ ಭದ್ರತೆ ಕನಿಷ್ಠಕೂಲಿ ಇನ್ನಿತರೆ ಸೌಲಭ್ಯಗಳಿಲ್ಲದೆ ಕಷ್ಟಕ್ಕೆ ಸಿಲುಕಿರುವುದು.

ಪಶು ಚಿಕಿತ್ಸಾ ಕೇಂದ್ರಗಳ ಕೊರತೆ, ವೈದ್ಯರ ಕೊರತೆ, ಔಷದಿಗಳ ಕೊರತೆ, ಸಾರಿಗೆ-ಸಂಪರ್ಕದ ಕೊರತೆ, ಒಂದೇ ಎರಡೇ ಸಮಸ್ಯೆಗಳ ಪಟ್ಟಿಯೇ ಬೆಳೆಯುತ್ತಾ ಹೋಗುವುದು.

ಉಳಿದದ್ದು ಹೋರಾಟ ಮಾತ್ರ

ಹೀಗಾಗಿ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕ ಹೈನುಗಾರರು ರೈತರು ಕೊನೆಗೆ ನಿರ್ಧರಿಸಿದ್ದು ಹೋರಾಟ ಕಳೆದ ಅಕ್ಟೋಬರ್ 26 ರಂದು ಬೆಂಗಳೂರು ಜಿಲ್ಲಾ ಹಾಲು ಉತ್ಪಾದಕರು ಮತ್ತು ನೌಕರರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸಭೆ ಸೇರಿದರು. ಸಹಕಾರಿ ಸಂಘಗಳ ಅಧ್ಯಕ್ಷರು, ನಿರ್ದೇಶಕರುಗಳು ಸಭೆಯಲ್ಲಿ ಭಾಗವಹಿಸಿದ್ದರು. ಸುಧೀರ್ಘವಾಗಿ ಚರ್ಚಿಸಿದ ನಂತರ ಹಾಲು ಒಕ್ಕೂಟದ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸುವ ತೀರ್ಮಾನಕ್ಕೆ



ಬರಲಾಯಿತು.

ಜನರ ಹೋರಾಟ ಸಮಿತಿಯನ್ನು ರಚಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಎನ್.ವೆಂಕಟಚಲಯ್ಯನವರನ್ನು ಆಯ್ಕೆ ಮಾಡಲಾಯಿತು.

50,000 ಕರಪತ್ರಗಳನ್ನು ಮುದ್ರಿಸಿ ಜಿಲ್ಲೆಯ ಹನ್ನೊಂದು ತಾಲ್ಲೂಕುಗಳಲ್ಲೂ ಪ್ರಚಾರ ಸಭೆ ಚರ್ಚೆಗಳನ್ನು ನಡೆಸಿದರು. ಪ್ರತಿ ತಾಲ್ಲೂಕು ಮಟ್ಟದ ಸಭೆಗಳನ್ನು ಕರೆಯಲಾಗಿ ಇನ್ನೂರು-ಮುನ್ನೂರು ಜನ ಬಂದು ಸೇರುತಿದ್ದರು. ಹೋರಾಟದ ತೀರ್ಮಾನಕ್ಕೆ ಇಂಬು ನೀಡುತ್ತಿದ್ದರು. ಹಣಕಾಸಿನ ನೆರವನ್ನು ಸ್ವ-ಇಚ್ಛೆಯಿಂದ ನೀಡಿದರು. ಎಲ್ಲ ರೀತಿಯ ತಯಾರಿಗಳನ್ನು ನಡೆಸಿದ ನಂತರ ಡಿಸೆಂಬರ್ 27 ರಂದು ಬೆಂಗಳೂರು ಹಾಲು ಒಕ್ಕೂಟವನ್ನು ಮುತ್ತಿಗೆ ಹಾಕಿದರು. ರಾಮನಗರ, ಚನ್ನಪಟ್ಟಣ, ಮಾಗಡಿ, ಆನೇಕಲ್ ಮುಂತಾದ ತಾಲ್ಲೂಕುಗಳಿಂದಲಂತೂ ಅನಿರೀಕ್ಷಿತ ಪ್ರತಿಕ್ರಿಯೆ ದೊರಕಿತು. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ರೈತರ ಸಾಮೂಹಿಕ ಒತ್ತಡದಿಂದಾಗಿ ನಿಯೋಗವನ್ನು ಒಕ್ಕೂಟದ ಅಧ್ಯಕ್ಷರು ಮಾತುಕತೆಗೆ ಕರೆದರು. ಸಮಸ್ಯೆಗಳ ಕುರಿತು ಚರ್ಚಿಸಿ ಹಾಲಿನ ಬೆಲೆಯನ್ನು ಮಾಮೂಲಾಗಿ 9 ರೂಪಾಯಿಗಳಿಗೆ ಹೆಚ್ಚಿಸುವ ಭರವಸೆ ನೀಡಿದರು. ಟ್ಯಾಂಕರ್‌ಗಳ ಮುಖಾಂತರ ಹಾಲನ್ನು ಶೇಖರಿಸುವ ಮೂಲಕ ಡಬ್ಬಗಳಿಂದಾಗುವ ಅನ್ಯಾಯವನ್ನು ತಡೆಗಟ್ಟುವುದಾಗಿ ತಿಳಿಸಿದರು. ಎರಡನೇ ಸುತ್ತಿನ ಮಾತುಕತೆಗೆ ಆಹ್ವಾನಿಸಿದರು. ಮಾತುಕತೆ ಮುಂದುವರಿದಿದೆ.

6 ರಿಂದ 7 ಸಾವಿರ ಜನ ಭಾಗವಹಿಸಿದ್ದ ಈ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಎನ್.ನಾಗರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಬೆಂಗಳೂರು ಜಿಲ್ಲಾ ಅಧ್ಯಕ್ಷರು ಹೋರಾಟ ಸಮಿತಿಯ ಸಂಚಾಲಕರು ಆದ ವೆಂಕಟಾಚಲಯ್ಯ, ಎಐಕೆಎಸ್ ಬೆಂ.ಜಿಲ್ಲಾ ಕಾರ್ಯದರ್ಶಿ ಆರ್.ಚಂದ್ರತೇಜಸ್ವಿ ರಾಜ್ಯ ರೈತ ಸಂಘದ ಪುಟ್ಟಣ್ಣಯ್ಯ ಮುಂತಾದವರು ಮಾತನಾಡುತ್ತಾ ಸಮಸ್ಯೆಗಳಿಗೆ ಕಾರಣಗಳನ್ನು ವಿವರಿಸಿದರು. ಹೋರಾಟ ಮುಂದುವರೆಸುವ ಆಶಯದೊಂದಿಗೆ ರೈತರು ತೆರಳಿದರು.

ಸರ್ಕಾರ ರೈತರ ಪರ ಧಾವಿಸಬಾರದೇಕೆ?

ಹಾಲು ಯಾರಿಗೆ ಬೇಡ? ದಿನ ಆರಂಭ ಹಾಲಿನ ಮೂಲಕ ದಿನದ ಮುಕ್ತಾಯವೂ ಹಾಲಿನ ಮೂಲಕ. ಹುಟ್ಟುವಾಗ ಬೇಕಾಗುವುದು ಹಾಲೆ. ಹಾಲು ಮನುಷ್ಯನ ಬದುಕಿನಲ್ಲಿ ಬೆರೆತುಹೋಗಿದೆ.

ಆದರೆ ಹಾಲಿನಿಂದ ವಂಚಿತವಾಗಿರುವ ಸಾವಿರಾರು ಕುಟುಂಬಗಳು ಲಕ್ಷಾಂತರ ಮಕ್ಕಳು ನಮ್ಮ ನಡುವೆ ಬದುಕುತ್ತಿವೆ. ಹಾಲಿಲ್ಲದೆ ಸಾಯುವ ಮಕ್ಕಳ ಸಂಖ್ಯೆಗೇನೂ ಕಡಿಮೆಯಿಲ್ಲ. ಹಾಲಿನ ಅಭಾವದಿಂದಾಗಿ ಅಪೌಷ್ಟಿಕತೆಯಿಂದಲೇ ಬೆಳೆಯುವ ಮಕ್ಕಳಿಗೂ ಕೊರತೆಯಿಲ್ಲ. ಪ್ರೋಟಿನ್ ಕೊರತೆಯಿಂದ ನರಳುವ ಅನಾರೋಗ್ಯವಂತ ಮಕ್ಕಳನ್ನು ಹೆರುವ ಗರ್ಭಿಣಿ, ಬಾಣಂತಿಯರು ಲೆಕ್ಕವಿಲ್ಲದಷ್ಟು. ಅಪಾಯದ ಅಂಚಿನಲ್ಲಿರುವ ಈ ವಿಭಾಗಕ್ಕೆ ಕೊನೆ ಪಕ್ಷ ದಿನಕ್ಕೆ ಒಂದು ಲೋಟ ಹಾಲನ್ನು ಪೂರೈಸಿದರೆ ಅವರ ಆರೋಗ್ಯವನ್ನು, ಆಯುಷ್ಯವನ್ನು ಸಾಕಷ್ಟು ಸುಧಾರಿಸಿದಂತಾಗುತ್ತದೆ. ಆದರೆ ಅವರಿಗೆ ಹಾಲಿನ ಲಭ್ಯತೆ ಅಷ್ಟು ಸುಲಭವಲ್ಲ.

ಒಂದು ಕಡೆ ವಿಪರೀತವಾಗಿ ಉತ್ಪನ್ನವಾಗುತ್ತಿರುವ ಹಾಲು ಮತ್ತೊಂದು ಕಡೆ ಹಾಲಿಲ್ಲದೆ ಸಾಯುವ ಕಂದಮ್ಮಗಳು. ಹಾಲಿನ ಕೊರತೆಯಿಂದ ಬಳಲುವ ಮಕ್ಕಳು. ಸರ್ಕಾರ ಮಧ್ಯ ಪ್ರವೇಶ ಮಾಡಿ ಹಾಲನ್ನು ಕೊಂಡು ಅಂಗನವಾಡಿಗಳ ಮುಖಾಂತರ ಗರ್ಭಿಣಿ, ಬಾಣಂತಿಯರು ಹಾಗೂ 6 ವರ್ಷಗಳದೊಳಗಿನ ಮಕ್ಕಳಿಗೆ (ಬಡತನ ರೇಖೆಗಿಂತ ಕೆಳಗಿನವರು ಮಾತ್ರ ಅಂಗನವಾಡಿಗಳಲ್ಲಿ ನೊಂದಾಯಿತರಾಗಿರುತ್ತಾರೆ.) ಉಚಿತವಾಗಿ ಹಾಲನ್ನು ಪೂರೈಸುವ ಮೂಲಕ ಮತ್ತು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೂ ಸಹ ಹಾಲನ್ನು ವಿತರಿಸುವ ಮೂಲಕ ಒಂದು ಕಡೆ ಕೊರತೆಯಾಗುತ್ತಿರುವ ಹಾಲನ್ನು ಸರಿದೂಗಿಸಲಾಗದೆ?

ಹಿಂದೆಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಉಪ್ಪಿಟ್ಟು ಕ್ಷೀರ ಇತ್ತೀಚೆಗೆ ಅಂಗನವಾಡಿಗಳ ಮಕ್ಕಳಿಗೆ ಹಾಲನ್ನು ಪೂರೈಸಿದ್ದು ತಿಳಿದಿದೆ. 'ಮಿಡ್ ಡೇ ಮೀಲ್' ಯೋಜನೆಯನ್ನು ರೂಪಿಸಿ ಶಾಲೆಗೆ ಮಕ್ಕಳನ್ನು ಆಕರ್ಷಿಸಿದ್ದು ನೆನಪಿದೆ. ಆದರೆ ಸಾಮಾಜಿಕ ಕಲ್ಯಾಣ ಕಲ್ಪನೆ..... ಐಎಂಎಫ್ ದೊರೆಗಳ ಆಜ್ಞೆಯಂತೆ ಇದನ್ನೆಲ್ಲಾ ಹಿಂದಕ್ಕೆ ಪಡೆದೂ ಆಗಿದೆ. ಆದರೆ 'ಕಲ್ಯಾಣ ರಾಷ್ಟ್ರದ' ಸರ್ಕಾರಗಳು ಸಾಮಾಜಿಕ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಾಗದು. ಬಡ ಕುಟುಂಬಗಳು ಬಡ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿರುವ ನಮ್ಮಲ್ಲಿ ಸರ್ಕಾರಗಳು ಹೊಣೆ ಹೊರಲೇಬೇಕಾಗುತ್ತದೆ. ಹೀಗಾಗಿ ಹಾಲು ಉತ್ಪಾದಿಸಿ ಬೀದಿ ಪಾಲಾಗುತ್ತಿರುವ ರೈತರಿಂದ ಹಾಲನ್ನು ಖರೀದಿಸಿ ಹಾಲಿಲ್ಲದೆ ಮಣ್ಣು ಪಾಲಾಗುತ್ತಿರುವ ಮಕ್ಕಳನ್ನು, ಗರ್ಭಿಣಿಯರನ್ನು ಬದುಕಿಸಿದರೆ ಸರ್ಕಾರಕ್ಕೇನು ಕೆಡುಕಾಗದು.. ಹೊಟ್ಟೆಗಿಲ್ಲದ ರೈತರು ಈ ದೇಶದವರೇ, ಮಣ್ಣು ಪಾಲಾಗುತ್ತಿರುವ ಮಕ್ಕಳು ಭಾರತಾಂಬೆಯ ಮಕ್ಕಳೆ, ಸರ್ಕಾರ ಈ ವಿಚಾರವನ್ನು ಪರಿಗಣಿಸುವಂತೆ ರೈತರು ಆಗ್ರಹಪಡಿಸುತ್ತಿದ್ದಾರೆ.

ಅಮೆರಿಕಾ ಸರ್ಕಾರ ಶೇ 80 ಸಹಾಯಧನ ನೀಡುವ ಮೂಲಕ ಹಾಲನ್ನು ಕೆರೆಗೆ ಚೆಲ್ಲಬೇಕಾದ ರೈತರ ನೆರವಿಗೆ ಧಾವಿಸಿದೆಯೆನ್ನುವುದನ್ನು ರೈತರು ಅಮೆರಿಕಾದ ಆರಾಧಕರಾದ ನಮ್ಮ ದೊರೆಗಳಿಗೆ ನೆನಪಿಸುತ್ತಿದ್ದಾರೆ.

ಹೋರಾಟ ಸಮಿತಿ ರಚನೆ

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಸಹಕಾರ ಸಂಘಗಳ ಹಾಲು ಉತ್ಪಾದಕರ ಮತ್ತು ನೌಕರರ ಹೋರಾಟ ಸಮಿತಿಯನ್ನು ಜಿಲ್ಲಾ ಮಟ್ಟದಲ್ಲಿ ರಚನೆ ಮಾಡಿಕೊಂಡು ಹಾಲು ಉತ್ಪಾದಕರು ಪ್ರತಿ ತಾಲ್ಲೂಕುಗಳಲ್ಲಿ ಸಮಾವೇಶಗಳನ್ನು ಮಾಡುವ ಜೊತೆಗೆ ತಾಲ್ಲೂಕು ಸಮಿತಿಗಳನ್ನು ರಚನೆ ಮಾಡುವ ತೀರ್ಮಾನಕ್ಕೆ ಬಂದಿರುತ್ತಾರೆ. ಆ ಮೂಲಕ ರಾಜ್ಯದೆಲ್ಲೆಡೆ ಹಾಲು ಉತ್ಪಾದಕರ ಹೋರಾಟಗಳನ್ನು ಹುಟ್ಟುಹಾಕುವ, ನೇತೃತ್ವ ನೀಡುವ ಉತ್ಸಾಹವನ್ನು ಹೊಂದಿದ್ದಾರೆ. ರಾಜ್ಯದೆಲ್ಲೆಡೆ ಸಮಸ್ಯೆಗಳು ತೀವ್ರತೆ ಒಂದೆ ಕಾರಣಗಳು ಸಂಕಷ್ಟಗಳು ಹೆಚ್ಚುತ್ತಿವೆ. ಎಲ್ಲರೂ ಸೇರುವ ಹೋರಾಟ ಅನಿವಾರ್ಯ ಎನ್ನುವುದು ಇವರ ವಾದ.

ಆಯ್ಕೆಯಾದ ಸದಸ್ಯರು: ಸಂಚಾಲಕರ-ಎನ್.ವೆಂಕಟಾಚಲಯ್ಯ ಮತ್ತು ಲೋಕನಾಥ ರೆಡ್ಡಿ, ಸದಸ್ಯರುಗಳಾಗಿ ಸಿದ್ದಪ್ಪ, ರಾಮಕೃಷ್ಣಪ್ಪ(ನೆಲಮಂಗಲ), ವೆಂಕಟಾಚಲಯ್ಯ, ಪುಟ್ಟಸ್ವಾಮಿಗೌಡ(ರಾಮನಗರ), ಪುಟ್ಟರಾಜು, ನಾಗರಾಜು(ಚನ್ನಪಟ್ಟಣ) ರಾಮಣ್ಣ(ಕನಕಪುರ), ನಾಗಲಕ್ಷ್ಮಮ್ಮ, ಸೋಮಪ್ರಕಾಶ್ ರೆಡ್ಡಿ (ಆನೇಕಲ್), ಭರತೇಶ್, ಯತಿರಾಜ್(ಮಾಗಡಿ), ದೇವರಾಜ(ಬೆಂಗಳೂರು ಉತ್ತರ), ಚಂದ್ರು ತೇಜಸ್ವಿ(ದೊಡ್ಡಬಳ್ಳಾಪುರ)

ಉದಾರೀಕರಣದ ಅಪ್ಪಳಿಕೆಗೆ ಎದುರಾಗಿ ನಿಂತ ಕರಾವಳಿ ಜನ

ಆ ದಿನ ಹೊಸಶತಮಾನದ ಜನವರಿ 12. ಕರ್ನಾಟಕ ರಾಜ್ಯದ ಕಡಲ ತೀರದಲ್ಲಿರುವ ಮಂಗಳೂರು ನಗರವು ಅಂದು ವಸ್ತುಶಃ ಕೆಂಪು ಕಡಲಾಯಿತು. ದ.ಕ. ಉಡುಪಿ ವಿವಿಧ ಮೂಲೆಗಳಿಂದ ಕೆಂಬಾವುಟಗಳೊಂದಿಗೆ ಪ್ರತಿಭಟನೆಯ ಕಿಚ್ಚನ್ನು ಹೊತ್ತುಕೊಂಡ ಹೋರಾಟಗಾರರು ಮಂಗಳೂರಿನ ಬೀದಿಗಳಲ್ಲಿ ಹೆಜ್ಜೆಹಾಕಿದರು. ಮುಗಿಲು ಮುಟ್ಟುವ ಕಂಠಗಳೊಂದಿಗೆ "ಜಾಗತೀಕರಣಕ್ಕೆ ಧಿಕ್ಕಾರ", "ಕೇಂದ್ರ ಸರಕಾರದ ಜನವಿರೋಧಿ ನೀತಿಗೆ ಧಿಕ್ಕಾರ".... ಘೋಷಣೆಗಳು ಜಡತ್ವದಿಂದಿದ್ದ ಮಂಗಳೂರಿನ ನಾಗರಿಕರನ್ನು ಬಡಿದೆಬ್ಬಿಸಿತು.


ಚಿತ್ರ: ಅರುಣ್ ಕುಮಾರ್

ದಿನನಿತ್ಯದ ಬವಣೆಯ ಬದುಕಿನಿಂದ ಬೇಸತ್ತ ಜನತೆಗೆ ಆ ದನಿಗಳು ಅದೇನೋ ಭರವಸೆಯ ನುಡಿಗಳಂತೆ ಕಂಡವು.

ಭಾರತದ ಜನತೆಯ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿರುವ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರದ 'ಜನ-ವಿರೋಧಿ' 'ದೇಶ ವಿರೋಧಿ' ನೀತಿಯನ್ನು ಖಂಡಿಸಲು ಸಿಪಿಐ(ಎಂ) ರಾಜ್ಯ ಸಮಿತಿ ನೀಡಿದ್ದ ಕರೆಗೆ ನಿರೀಕ್ಷೆಗೂ ಮೀರಿ ಸ್ಪಂಧನ ಲಭಿಸಿತು. ಠಾಗೋರ್ ಪಾರ್ಕಿನಿಂದ ಹೊರಟ ಪ್ರತಿಭಟನಾ ರ್‍ಯಾಲಿ ಯಾಂತ್ರಿಕವಾಗಿರದೆ ಚೈತನ್ಯಶೀಲವಾಗಿತ್ತು. ವಿದ್ಯಾರ್ಥಿಗಳು, ಯುವಜನರು, ಕಾರ್ಮಿಕರು, ರೈತರು, ನೌಕರರು, ಮಹಿಳೆಯರು... ಎಲ್ಲಾ ವಿಭಾಗಗಳನ್ನು ಪ್ರತಿನಿಧಿಸುವ ರ್‍ಯಾಲಿಯಾಗಿತ್ತು. ಬೀಡಿ ಕಾರ್ಮಿಕರು, ಕೃಷಿ ಕಾರ್ಮಿಕರು, ರೈತರಿಂದ ಹಿಡಿದು ಬ್ಯಾಂಕ್, ಎಲ್ಐಸಿಯಲ್ಲಿ ದುಡಿಯುವವರು ಎಲ್ಲರ ಬವಣೆಯೂ ಒಂದೇ. ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳೆಂಬ 'ತ್ರಿಕರಣ'ಗಳು ಭೇದಭಾವವಿಲ್ಲದೆ ಎಲ್ಲರ ಬದುಕನ್ನೂ ನರಕಯಾತನೆಗೊಳಿಸಿತ್ತು. ಆದರೂ ಅವರು ದಿಕ್ಕೆಡದೆ ಸವಾಲನ್ನು ಎದುರಿಸಲು ಸಿಪಿಐ(ಎಂ)ನ ಕೆಂಬಾವುಟದಲ್ಲಿ ಅಣಿನೆರೆದು ಹೋರಾಟಕ್ಕೆ ಸಜ್ಜಾಗಿದ್ದರು.

ದ.ಕ. ಉಡುಪಿ ಕರಾವಳಿ ಮಲೆನಾಡು ಜಿಲ್ಲೆಗಳ ಜನತೆಯು ಪರ್ಯಾಯಕ್ಕಾಗಿ ಎದುರು ನೋಡುತ್ತಿದ್ದಾರೆ. ಕಾಂಗ್ರೆಸ್ಸು, ಬಿಜೆಪಿಗಳು ತಮ್ಮ ಬದುಕನ್ನು ಕಂಗೆಡಿಸಿವೆಯೆಂಬುದನ್ನು ನಿಧಾನವಾಗಿಯಾದರೂ ಅವರು ಅರ್ಥೈಸುತ್ತಿದ್ದಾರೆ. ಒಂದಕ್ಕೆ ಪರ್ಯಾಯ ಇನ್ನೊಂದು ಎಂಬ ಭ್ರಮೆ ಮಾಯವಾಗುತ್ತಿದೆ. ಮೊನ್ನೆಯವರೆಗೆ ಬಿಜೆಪಿಗೆ ಅಟ್ಟಿ ಅಟ್ಟಿ ಓಟುಗಳನ್ನು ತಂದುಕೊಡುತಿದ್ದ ಅಡಿಕೆ, ತೆಂಗು, ಬೆಳೆಗಾರರು ಇದೇ ಪ್ರಥಮ ಬಾರಿ ಬಿಜೆಪಿಗೆ ತಕ್ಕಪಾಠ ಕಲಿಸಲು ಪಣತೊಟ್ಟಿದ್ದಾರೆ. ಪಂಚಾಯತ್ ಚುನಾವಣೆಯಲ್ಲಿ ದ.ಕ. ಉಡುಪಿ ಜಿಲ್ಲೆಗಳಲೆಲ್ಲಾ ಈ ಬಿಜೆಪಿ ವೋಟ್ ಬ್ಯಾಂಕ್' ಗಳು ಆ ಪಕ್ಷಕ್ಕೆ ಇನ್ನಿಲ್ಲದಂತಹ ಕಪಾಳ ಮೋಕ್ಷಮಾಡಿದ್ದಾರೆ. ಬಿಜೆಪಿಯ ಮೇಲಿನ ಸೇಡು ತೀರಿಸಿಕೊಳ್ಳಲಿಕ್ಕಾಗಿ ಕಾಂಗ್ರೆಸ್ಸಿಗೆ ಮತ ನೀಡಿದರೂ, ಆ ಪಕ್ಷವೂ ತಮ್ಮ ಉದ್ಧಾರಕ್ಕೆ ಶ್ರಮಿಸುತಿಲ್ಲವೆಂಬುದನ್ನು ಇದೀಗ ಮನಗಾಣುತ್ತಿದ್ದಾರೆ. ಇಷ್ಟಾದರೂ ಬಿಜೆಪಿ ತನ್ನ ಜನವಿರೋಧಿ ನೀತಿಯನ್ನು ಮರೆಮಾಚಲು ಏನೇನೋ ಕುತಂತ್ರದ ಆಟವಾಡುತ್ತಿದೆ. ಕೇಂದ್ರ ಸರಕಾರದ ಆಮದು ನೀತಿಯ ಫಲವಾಗಿ ಅಡಿಕೆ, ತೆಂಗು ಬೆಳೆಗಾರರು ನೆಲಕಚ್ಚುತ್ತಿರುವುದರ ವಾಸ್ತವತೆಯನ್ನು ಮರೆಮಾಚಲು ಅದು 'ಬೊಂಡಮೇಳ' (ಸೀಯಾಳ ಮೇಳ)ದ ನಾಟಕವಾಡಿತು. ಬೆಳೆಗಾರರ ಸಂಕಷ್ಟಕ್ಕೆ ರಾಜ್ಯ ಸರಕಾರ ಕಾರಣವೆಂದು ಪೆಟ್ಟು ತಪ್ಪಿಸಿಕೊಳ್ಳಲೆತ್ನಿಸಿತು. ಕಾಂಗ್ರೆಸ್ಸು ಏನೂ ಕಮ್ಮಿಯಿಲ್ಲ. ಕೇಂದ್ರದ ಜನವಿರೋಧಿ ನೀತಿಯನ್ನು ವಿರೋಧಿಸದೆ ಭಾರವನ್ನು ಜನತೆಯ ಮೇಲೆಯೇ ಹೇರಲಾರಂಬಿಸಿತು. ದಿಕ್ಕೆಟ್ಟ ಜನತೆ ಪರ್ಯಾಯಕ್ಕಾಗಿ ಪರಿತಪಿಸುತ್ತಿದ್ದಾರೆ. ಆದರೆ ಪರ್ಯಾಯ ಯಾವುದು? ಜನತಾದಳ ನುಚ್ಚುನೂರಾಗಿದೆ. ರಾಮಕೃಷ್ಣಹೆಗಡೆಯ ಬಣವಂತೂ ಕೋಮುವಾದಿಗಳೊಂದಿಗೆ ಕೈ ಜೋಡಿಸಲೂ ಹೇಸಲಿಲ್ಲ. ದೇವೇಗೌಡರೇನೋ ಜನರ ಪ್ರಶ್ನೆಗಳನ್ನೆತ್ತಿಕೊಂಡು ಓಡಾಡುತ್ತಿದ್ದಾರೆ. ಆದರೆ ಬಲ ಸಾಲದು. ಎಡ ಪ್ರಜಾಪ್ರಭುತ್ವ ಜಾತ್ಯಾತೀತ ಪಕ್ಷಗಳೇ ಪರ್ಯಾಯ ನೀಡಬಲ್ಲವೆಂಬ ವಿಶ್ವಾಸ ಜನತೆಯಲ್ಲಿ ಇದೀಗ ದಿನೇ ದಿನೇ ಬೆಳೆಯುತ್ತಿದೆ. ಕೇರಳ, ಪ.ಬಂಗಾಳ, ತ್ರಿಪುರಾಗಳಲ್ಲಿ ಜನಪರ ಕಾಳಜಿಯುಳ್ಳ ಸರಕಾರ ನೀಡಲು ಸಾಧ್ಯವಾಗಿದೆಯೆಂಬ ಹೆಗ್ಗಳಿಕೆ ಹೊಂದಿರುವ ಎಡಪಕ್ಷಗಳಿಂದ ಮಾತ್ರ ಇದು ಸಾಧ್ಯವೆಂಬ ಅಪ್ಪಟ ಸತ್ಯ ದಿನೇ ದಿನೇ ಉಜ್ವಲಗೊಳ್ಳುತ್ತಿದೆ.

ಈ ಹಿನ್ನೆಲೆಯಲ್ಲಿ ಮಂಗಳೂರಿನಲ್ಲಿ ಸಿಪಿಐ(ಎಂ) ಹಮ್ಮಿಕೊಂಡ ಪ್ರತಿಭಟನಾ ಕಾರ್ಯಕ್ರಮಕ್ಕೆ ಮಂಗಳೂರಿನ ಜನತೆ ಸ್ಪಂದಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಉಡುಪಿ ಜಿಲ್ಲೆಯ ಬೈಂದೂರಿನಿಂದ ಮತ್ತು ದ.ಕ. ಜಿಲ್ಲೆಯ ಸುಳ್ಯದಿಂದ ಹೊರಟಿದ್ದ ಎರಡು ವಾಹನ ಪ್ರಚಾರ ಜಾಥಾಗಳಿಗೂ ಜನರು ಸ್ಪಂಧಿಸಿದ ರೀತಿ ಎಡಶಕ್ತಿಗಳಿಗೆ ಉಜ್ವಲ ಭವಿಷ್ಯವಿದೆಯೆಂಬ ಆಶಾವಾದವನ್ನು ಸೃಷ್ಟಿಸಿತು. ಅನೇಕರು ಜಾಥಾ ತಂಡದೊಂದಿಗೆ ತಮ್ಮ ಬದುಕಿನ ಬವಣೆಯನ್ನು ಮುಚ್ಚುಮರೆಯಿಲ್ಲದೆ ನಿವೇದಿಸಿಕೊಂಡರು. ಸಿಪಿಐ(ಎಂ)ನ ದ.ಕನ್ನಡ ಜಿಲ್ಲಾ ಸಮಿತಿ ಹಳ್ಳಿ ಹಳ್ಳಿ, ಗಲ್ಲಿಗಲ್ಲಿಗಳಲ್ಲಿಯೂ ಜನತಲುಪಲು ನಡೆಸಿದ ಪ್ರಚಾರ ವೈಖರಿ, ಹಂಚಿಕೊಂಡ ಒಡಲ ಕಿಚ್ಚು ಎಲ್ಲರಲ್ಲೂ ಅಚ್ಚಳಿಯದೇ ಉಳಿಯಿತು. ಜನ ಚಲಿಸುವಂತೆ ಮಾಡಿತು. ಕಾರ್ಯಕರ್ತರಿಗೂ, ನಾಯಕರಿಗೂ ದೃಢವಿಶ್ವಾಸ ಬೆಸೆದು, ಬೆಳೆಸಿತು.

ಮಂಗಳೂರಿನ ತುಂಬಾ ಕಾರ್ಯಕ್ರಮಗಳೋ ಕಾರ್ಯಕ್ರಮಗಳು
ಆದರೆ ಜನ ಬಂದದ್ದು.....

ಅಂದು ಮಂಗಳೂರಿನಲ್ಲಿ ಕಾರ್ಯಕ್ರಮಗಳೇ ಕಾರ್ಯಕ್ರಮಗಳು. ಸಚಿವರುಗಳ ದಂಡುಗಳು ಕೇಂದ್ರದ ಸಚಿವ ಧನಂಜಯಕುಮಾರ್, ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್, ಸಂಪರ್ಕಖಾತೆಯ ಸಚಿವ ರಾಂವಿಲಾಸ್ ಪಾಸ್ವಾನ್‌ರ ದಿನವಿಡೀ ಪ್ರತ್ಯೇಕ ಪ್ರತ್ಯೇಕ ಕಾರ್ಯಕ್ರಮಗಳು. ಅಂದೇ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರ ಹಲವು ಯೋಜನೆ, ಕಾರ್ಯಕ್ರಮಗಳಲ್ಲಿ ದಿನಪೂರ್ತಿ ಎಡಬಿಡದೇ ಓಡಾಟ- ಅವರ ಹಿಂದೆ ರಾಜ್ಯದ ಸಚಿವರು, ಹಿರಿ-ಕಿರಿ ನಾಯಕರ ದಂಡುಗಳು. ಇಷ್ಟು ಸಾಲದೆಂಬಂತೆ ಭರ್ಜರಿ 'ಕರಾವಳಿ ಉತ್ಸವದ' ಉದ್ಘಾಟನೆಯೂ ಅಂದೇ. ಈ ನಡುವೆ ಸಿಪಿಐ(ಎಂ)ನ ರ್‍ಯಾಲಿ. ಟಿ.ವಿ. ಪತ್ರಿಕೆಗಳ ಮಾಧ್ಯಮ ವರದಿಗಾರರೇ "ನಾವು ಎಲ್ಲಿಗೆ ಹೋಗಬೇಕು ಹೇಳಿಸ್ವಾಮಿ. ಜನರಾದರೂ ಎಲ್ಲಿಗೆ ಬಂದಾರು. ಹೋಗಲಿ ನೀವಾದರೂ ಕಾರ್ಯಕ್ರಮ ಮುಂದೂಡಬಾರದೇ" ಎಂದು ಹೇಳಿಯೇಬಿಟ್ಟರು ಒಬ್ಬರು.

ಆದರೆ ಮುಖ್ಯಮಂತ್ರಿಗಳ ಸುತ್ತ ತಿರುಗುತ್ತಾ ಇದ್ದವರು 300 ರಷ್ಟು ಜನ: ಕಾರುಗಳ ಭರಾಟೆ. ಕೇಂದ್ರ ಸಚಿವರುಗಳೇ ಆಯಾ ಪ್ರದೇಶಗಳಲ್ಲಿ ಓಡಾಟ. ಅವರ ಭಾಷಣಗಳು. ಇಷ್ಟಾದರೂ ಜನ ಹರಿದದ್ದು ಸಿಪಿಐ(ಎಂ) ನ 'ದೇಶ ಉಳಿಸಲು ರೈತರನ್ನು ಉಳಿಸಿ' ಎಂಬ ರ್‍ಯಾಲಿಗೆ. ಸುಮಾರು 6000 ದಷ್ಟು ಜನ. ದುಡಿಯುವ ಜನ. ಮಹಿಳೆಯರ ಪಾಲು ಅರ್ಧಕ್ಕೂ ಹೆಚ್ಚು. ಪ್ರಜಾವಾಣಿ ಪತ್ರಿಕೆಯಂತೂ ಬರೆದೇ ಬಿಟ್ಟಿತು "ಈ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಜನರನ್ನು ಆಕರ್ಷಿಸಿ ಸೆಳೆದದ್ದು ಸಿಪಿಐ(ಎಂ)ನ ರ್‍ಯಾಲಿಯೇ.

ನಾಗೇಶ್ ಕುಮಾರ್

ಖಾಸಗೀಕರಣದ ಹೆಸರಿನಲ್ಲಿ ದೇಶ ಮಾರಾಟ: ನಾಯನಾರ್


ನೆಹರು ಪ್ರಧಾನಿಯಾಗಿದ್ದಾಗ ಸಾರ್ವಜನಿಕ ರಂಗದಲ್ಲಿ ಬೃಹತ್ ಉದ್ಯಮಗಳನ್ನು ಸ್ಥಾಪಿಸಿದರು. ಇಂದಿರಾಗಾಂಧಿ ಅವರು ಪ್ರಧಾನಿಯಾಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದರು. ಆದರೆ ಇಂದಿನ ಬಿಜೆಪಿ ಸರ್ಕಾರ ದೂರಸಂಪರ್ಕ ಇಲಾಖೆ, ವಿಮಾನ ಯಾನ, ಅಂಚೆ ಇಲಾಖೆ, ಬಂದರು ಹಾಗೂ ವಿದ್ಯುತ್ ಮಂಡಳಿಗಳನ್ನು ಖಾಸಗೀಕರಣ ಮಾಡಿ ದೇಶವನ್ನೇ ಮಾರುತ್ತಿದೆ ಎಂದು ಕೇರಳ ಮುಖ್ಯಮಂತ್ರಿ ಇ.ಕೆ.ನಾಯನಾರ್ ಟೀಕಿಸಿದರು.

ಕೇಂದ್ರ ಸರ್ಕಾರದ ಜನವಿರೋಧಿ ಆಮದು ನೀತಿಯ ವಿರುದ್ಧ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸಿಪಿಐ(ಎಂ) ಪಕ್ಷವು ಇಲ್ಲಿನ ನೆಹರೂ ಮೈದಾನದಲ್ಲಿ ಏರ್ಪಡಿಸಿದ್ದ ಬೃಹತ್ ಪ್ರತಿಭಟನಾ ರ್‍ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು. ಕೇಂದ್ರ ಸರ್ಕಾರದ ಆಮದು ಆರ್ಥಿಕ ನೀತಿಯಿಂದಾಗಿ ಜನಸಾಮಾನ್ಯರು, ರೈತರು, ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ ಎಂದರು.

ಕೇರಳ ಸರ್ಕಾರ ಕೂಲಿಕಾರ್ಮಿಕರಿಗೆ ದಿನಕ್ಕೆ 150 ರೂಪಾಯಿ ನಿಗದಿ ಮಾಡಿದೆ.ಆದರೆ ಕರ್ನಾಟಕದಲ್ಲಿ ಬರೇ ರೂ. 50 ಎಂದು ಗೇಲಿಮಾಡಿದರು. ಕೇರಳ ಸರ್ಕಾರದ ಬಡವರಿಗಾಗಿ ಪಿಂಚಣಿ ಜಾರಿಗೆ ತಂದು ಸುಮಾರು 60 ಲಕ್ಷ ಜನರಿಗೆ ನೆರವಾಗಿದೆ ಎಂದರು.

ಸಿಪಿಐ(ಎಂ)ಜಿಲ್ಲಾ ಕಾರ್ಯದರ್ಶಿ ಕೆ.ಆರ್. ಶ್ರೀಯಾನ್ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣರಾವ್ ಮಾತನಾಡಿದರು. ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಕೇರಳದ ಶಾಸಕ ರಾಘವನ್ ಉಪಸ್ಥಿತ ರಿದ್ದರು. ಸಿಪಿಎಂ ಜಿಲ್ಲಾ ಮುಖಂಡ ಮಾಧವ ವಂದಿಸಿದರು.

ಈ ರ್‍ಯಾಲಿಗೆ ಉ.ಕನ್ನಡ ಜಿಲ್ಲೆಯಿಂದ ನೂರಾರು ಜನರು ಭಾಗವಹಿಸಿದ್ದರು. ಇದಕ್ಕೂ ಮೊದಲು ಉ.ಕನ್ನಡ ಜಿಲ್ಲೆಯ ತೆಂಗು, ಅಡಿಕೆ ರೈತರ ಸಮಾವೇಶ ಯಶಸ್ವಿಯಾಗಿ ಜರುಗಿ ವ್ಯಾಪಕ ಪ್ರಚಾರ ಕಾರ್ಯ ನಡೆಸಲಾಗಿತ್ತು. ಮಂಗಳೂರಿನಲ್ಲಿ ರೈತ ಸಂಘಟನೆಗಳಿಂದ ಡಿ. 15 ರಂದು ಸಮಾವೇಶ ಸಹ ನಡೆದದ್ದು ಇಲ್ಲಿ ನೆನಪಿಸಿಕೊಳ್ಳಬಹುದು.


ಚಿತ್ರ: ಅರುಣ್ ಕುಮಾರ್

ಸ್ವರ್ಣವಲ್ಲಿ ಮಠಾಧೀಶರು......

ನಶ್ವರವಾದಗಳನ್ನು ಮಂಡಿಸುತ್ತಾರೆ. ಇಷ್ಟಕ್ಕು ನಶ್ವರವಾದಿಗಳಿಗೂ ಸರ್ವಸಂಗ ಪರಿತ್ಯಾಗಿಗಳಿಗೂ ಸಂವಿಧಾನದ ಅವಶ್ಯಕತೆ ಏನಿದೆ. ಆಧ್ಯಾತ್ಮಿಕತೆ ಎನ್ನುವುದಕ್ಕೆ ಸಂವಿಧಾನದ ರಕ್ಷಣೆಯಾಗಬೇಕು. ಸಂವಿಧಾನದಲ್ಲಿ ಯಾವುದಾದರೂ ಒಂದು ಹೊಸ ಅಂಶವನ್ನು ಸೇರಿಸಬೇಕಾದರೆ ಯಾವ ಅಂಶ ಒಂದು ಸಮಾಜದಲ್ಲಿ ರಕ್ಷಣೆಯನ್ನು ಪಡೆಯಬೇಕೋ ಅಥವಾ ಯಾವ ಸಮಸ್ಯೆ ಸಮಾಜದ ಗಂಭೀರ ಸಮಸ್ಯೆಯಾಗಿರುತ್ತದೆ. ಅದಕ್ಕೆ ಪರಿಹಾರ ಸಿಕ್ಕಬೇಕಾದರೆ ಅದನ್ನು ಸಂವಿಧಾನದಲ್ಲಿ ಸೇರಿಸಬೇಕಾಗಿದೆ. ಆದರೆ ಆಧ್ಯಾತ್ಮಿಕವಾದಕ್ಕೆ ಯಾಕೆ ರಕ್ಷಣೆ ಬೇಕಾಗಿದೆ.

ಜಗತ್ತಿನಲ್ಲಿರುವ ಎಲ್ಲಾ ದೇಶಗಳೂ ಒಂದೊಂದು ಧರ್ಮವನ್ನು ರಾಷ್ಟ್ರೀಯ ಧರ್ಮವೆಂದು ಒಪ್ಪಿಕೊಂಡಿವೆ. ಆದುದರಿಂದ ನಮ್ಮ ದೇಶಗಳು ಹಿಂದೂ ಧರ್ಮವನ್ನು ನಮ್ಮ ದೇಶದ ಅಧಿಕೃತ ರಾಷ್ಟ್ರೀಯ ಧರ್ಮವೆಂದು ಪರಿಗಣಿಸಬೇಕೆಂದು ಸತತವಾಗಿ ಒತ್ತಾಯಪಡಿಸುತ್ತಿರುವ ಶಕ್ತಿಗಳು, ಈ ದೇಶಕ್ಕಿರುವ ಬಹುಧರ್ಮೀಯ ದೇಶವೆಂಬ ಹಣೆಪಟ್ಟಿಯನ್ನು ತೆಗೆದು ಏಕಧರ್ಮದ ದೇಶವೆಂದು ಘೋಷಣೆ ಮಾಡಬೇಕೆಂದು, ಒಂದು ದೇಶ, ಒಂದು ಸಂಸ್ಕೃತಿ ಮತ್ತು ಒಂದು ಭಾಷೆ ಬೇಕೆಂದು ನಿರಂತರವಾಗಿ ಒತ್ತಾಯಿಸುತ್ತಿರುವ ಧರ್ಮಾಂಧ ಮೂಲಭೂತವಾದಿಗಳು ಮತ್ತು ಆ ಚಿಂತನೆಯ ಹಿನ್ನೆಲೆಯಲ್ಲಿ ಭಾರತದ ಸಂವಿಧಾನವನ್ನು ಪರಾಮರ್ಶೆ ಮಾಡಲು ಹೊರಟಿರುವ ಶಕ್ತಿಗಳಿಗೆ ಪೂರಕವಾಗಿಯೋ, ಈ ವಿಚಾರ ಸಂಕಿರಣವನ್ನು ಏರ್ಪಡಿಸಿ ಸಂವಿಧಾನದಲ್ಲಿ ಧರ್ಮವನ್ನು ಮತ್ತು ಆಧ್ಯಾತ್ಮಿಕತೆಯನ್ನು ಸಂವಿಧಾನದಲ್ಲಿ ಸೇರಿಸಬೇಕೆಂಬ ಪ್ರಾರಂಭದ ಕೂಗನ್ನು ಎತ್ತಿದೆ. ಈ ವಿಷಯಕ್ಕೆ ಈ ವಿಚಾರಸಂಕಿರಣದಲ್ಲಿ ಅಸಮ್ಮತಿಯನ್ನು ವ್ಯಕ್ತಪಡಿಸಿರುವವರು ಇಂದು ಕೇಂದ್ರದಲ್ಲಿ ಅಧಿಕಾರವನ್ನು ನಡೆಸುತ್ತಿರುವ ಬಹುಸಂಖ್ಯಾತ ಮೂಲಭೂತವಾದಿಗಳಿಗೆ ಬೆಂಬಲ ಸೂಚಿಸಿರುವವರೆ ಎಂಬುದು ಗಮನಿಸಬೇಕಾದ ಅಂಶ. ಅವರು ಹಲವಾರು ಸಂದರ್ಭಗಳಲ್ಲಿ ರಾಜಕೀಯದಲ್ಲಿ ಆಧ್ಯಾತ್ಮಿಕತೆ ಇರಬೇಕೆಂದು ಹೇಳುತ್ತಿದ್ದವರೆ. ಹೀಗಾಗಿ ಈಸ್ವರ್‌ಗಳ ಬಗ್ಗೆ ಈಗಲೇ ಎಚ್ಚೆತ್ತುಕೊಳ್ಳಬೇಕಾದ ಅವಶ್ಯಕತೆ ಇದೆ.

ಜಿ.ವಿ.ಶ್ರೀರಾಮರೆಡ್ಡಿ

ಬಿಜಾಪುರ: ಕೋಮುವಾದಿಗಳ ನಡಗೆ ಜನತೆಯ ತಡೆ

ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ನೆಲಸಮಗೊಳಿಸಿದ ಸ್ಥಳದಲ್ಲಿಯೇ ರಾಮ ಮಂದಿರ ನಿರ್ಮಿಸುವ ದೃಢ ನಿರ್ಧಾರದ ಸಂಘಟನೆಗಳಲ್ಲೊಂದಾದ ಭಜರಂಗ ದಳ, ಬಿಜೆಪಿ, ಆರ್‌ಎಸ್‌ಎಸ್. ಸಂಯೋಜನೆಯೊಂದಿಗೆ ಬಿಜಾಪುರ ನಗರದಲ್ಲಿ ತನ್ನ ಚಟುವಟಿಕೆ ತೀವ್ರಗೊಳಿಸಲು ಪ್ರಾರಂಭಿಸಿದೆ. ಮುಂಬರುವ ನಗರ ಸಭೆ ಚುನಾವಣೆ ಇದಕ್ಕೆ ಅವಕಾಶ ಮಾಡಿಕೊಟ್ಟಿದೆ. ಹಿಂದುಗಳೆಲ್ಲ ಒಂದಾಗಬೇಕೆಂಬ ಉದ್ದೇಶದಿಂದ ಅಲ್ಪಮತಸ್ತರ ಮಸೀದಿ, ಮಂದಿರಗಳಿಗೆ ಹೊಂದಿ ಭಜರಂಗ ದಳದ ನಿಶಾನೆ ಮತ್ತು ಫಲಕಗಳನ್ನು ಹಚ್ಚುವ ಕಾರ್ಯಕ್ರಮ ನಡೆಸಿ ಕೋಮು ಸೌಹಾರ್ದತೆಗೆ ಕಿಡಿ ಹಚ್ಚುವ ಹುನ್ನಾರ ನಡೆಸಿದರು. ಅದನ್ನು ಪ್ರತಿಭಟಿಸಿದಾಗ ಆಟೋಗಳಿಗೆ ಬೆಂಕಿ ಹಚ್ಚುವ ಪ್ರಯತ್ನ ನಡೆಯಿತು. ನಗರ ಸಭೆ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಒಬ್ಬ ಮಾಜಿ ನಗರಸಭೆ ಸದಸ್ಯ ಬಹಿರಂಗವಾಗಿಯೇ ಮುಸಲ್ಮಾನರ ವಿರುದ್ಧ ಹಿಂದುಗಳೆಲ್ಲ ಒಂದಾಗಬೇಕೆಂದು ಭಾಷಣ ಮಾಡಿದಾಗ ಜನವಾದಿ ಮಹಿಳಾ ಸಂಘಟನೆಯ ಮತ್ತು ಸಿಪಿಐ(ಎಂ) ಪಕ್ಷದ ಮಹಿಳೆಯರು ಅವನನ್ನು ಎದುರಿಸಬೇಕಾಯಿತು. ಮುನಿಸಿಪಲ್ ಚುನಾವಣೆಯ ಸಮಯದಲ್ಲಿ ಇದು ಗಂಭೀರ ಸ್ವರೂಪ ತಾಳಬಹುದೆಂದು ತಿಳಿದು ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳ ವತಿಯಿಂದ ಪತ್ರಿಕಾ ಹೇಳಿಕೆ ನೀಡಿ ಭಜರಂಗ ದಳದ ಚಟುವಟಿಕೆಯನ್ನು ಖಂಡಿಸಿ, ಅದರ ಪ್ರಚೋದನೆಗೆ ಬಲಿಯಾಗದೆ ಶಾಂತಿ ಕಾಪಾಡಬೇಕೆಂಬ ಜಂಟಿ ಹೇಳಿಕೆ ನೀಡಲಾಯಿತು.

ಹೀಗೆ ಬಹಿರಂಗದಳ ಬಹಿರಂಗವಾಗಿಯೇ ಕೋಮು ಗಲಭೆ ಎಬ್ಬಿಸುವ ಕುತಂತ್ರ ನಡೆಸುತ್ತಿದ್ದಾಗ, ಪೋಲೀಸರು ರಾತ್ರಿಯಲ್ಲಿ ಮುಸಲ್ಮಾನರ ಮನೆಗಳಿಗೆ ನುಗ್ಗಿ ನಿರಪರಾಧಿಗಳನ್ನು ಬಂಧಿಸಿದಾಗ ಇದರ ಪ್ರಕರತೆಯನ್ನು ಮನಗಂಡ ಸಿಪಿಐ(ಎಂ) ದಿ. 8 ರಂದು ಕೋಮು ಸೌಹಾರ್ದತೆ ಜಾಥಾ ನಡೆಸುವ ನಿರ್ಧಾರ ಕೈಗೊಂಡಿತು. ಅದೇ ದಿವಸ ರೈತರ ಸಮಸ್ಯೆಗಳ ಕುರಿತು ಪ್ರತಿಭಟನೆ ನಡೆಯಲಿದ್ದು, ಸಿಪಿಐ(ಎಂ) ಜೊತೆಯಲ್ಲಿ ರಾಜ್ಯ ರೈತ ಸಂಘ ಮತ್ತು ಕಿಸಾನ್ ಸಭಾ ಸೇರಿಕೊಂಡು ಕೋಮು ಸೌಹಾರ್ದತಾ. ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು.

ಈ ಮಧ್ಯೆ ಪರಿಸ್ಥಿತಿ ಗಂಭೀರತೆಯನ್ನು ಮನಗಂಡ ಜಿಲ್ಲಾಧಿಕಾರಿಗಳು ಸಾರ್ವಜನಿಕ ಸ್ಥಳಗಳಲ್ಲಿರುವ ವಿವಿಧ ಧರ್ಮಸೂಚಕ ಬಾವುಟಗಳನ್ನು 2 ದಿವಸದೊಳಗಾಗಿ ತೆಗೆದು ಹಾಕಬೇಕೆಂಬ ಆದೇಶವನ್ನು ಪ್ರಕಟಿಸಿದರು. ಸಿಪಿಐ(ಎಂ) ಪಕ್ಷದ ದೃಢನಿರ್ಧಾರ ಮತ್ತು ಜಿಲ್ಲಾಧಿಕಾರಿಗಳ ಕ್ರಮದಿಂದಾಗಿ ಪರಿಸ್ಥಿತಿ ಶಾಂತವಾಗಿರುವುದನ್ನು ಜನ ಪ್ರಶಂಸಿಸುತ್ತಿದ್ದಾರೆ.



ಈ ಕಾರ್ಯಕ್ರಮದಲ್ಲಿ ಸಿಪಿಐ(ಎಂ),ಜನವಾದಿ ಮಹಿಳಾ-ಸಂಘಟನೆ, ಎಸ್‌ಎಫ್‌ಐ, ಡಿವೈಎಫ್‌ಐ ಪಾಲ್ಗೊಂಡಿವೆ.

ಕೋಮು ಸೌಹಾರ್ದತೆ ಜಾಥಾ, ಎಪಿಎಂಸಿಗೆ ಹೋಗಿ ಅಲ್ಲಿಯ ಅಧಿಕಾರಿಗಳಿಗೆ ರೈತರ ಸಮಸ್ಯೆಗಳ ಮನವಿ ಅರ್ಪಿಸಿತು. ನಂತರ ಕೆ.ಪಿ.ಟಿ.ಸಿ.ಎಲ್ ಕಛೇರಿಗೆ ಹೋಗಿ ಇಂಜಿನಿಯರಿಂಗ್, ವಿದ್ಯುತ್ ಸಮಸ್ಯೆ ಕುರಿತು ಮನವಿ ಅರ್ಪಿಸಿತು.

ಎನ್.ಕೆ.ಉಪಾಧ್ಯಾಯ, ಭೀಮಸಿ ಕಲಾದಗಿ, ವಿ.ಎಂ.ಸೊನ್ನದ ಅಲ್ಲದೆ ಸುರೇಖಾ ರಜಪೂತ, ಪ್ರೇಮಸಿಂಗ ನಾಯಕ, ರಾಜ್ಯ ರೈತ ಸಂಘದ ಬಸಪ್ಪ ಅಂಗಲಿ, ಪ್ರಕಾಶ ಹಿಟ್ಟಿನಲ್ಲಿ, ಸಿದ್ರಾಮ ಗಂಜನಗಿ ಮೊದಲಾದವರು ನೇತೃತ್ವ ವಹಿಸಿದ್ದರು.

ಕೋಮು ಸೌಹಾರ್ದತಾ ಸಮಾವೇಶ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಿಜಾಪುರ ಜಿಲ್ಲಾ ಘಟಕವು ಕೋಲ್ಹಾರದಲ್ಲಿ ಕರ್ಫ್ಯೂ ಇದ್ದರೂ ಕೂಡ ಕೋಲ್ಹಾರಕ್ಕೆ ಮುಖಂಡರನ್ನು ಕಳುಹಿಸಿತ್ತು. ಪರಿಸ್ಥಿತಿಯನ್ನು ಅಭ್ಯಾಸ ಮಾಡಿ ಕೋಮು ಸೌಹಾರ್ದತೆಯನ್ನು ಪುನರಚಿಸಲು ತಾಲೂಕಿನ ಹಳ್ಳಿಗಳಲ್ಲಿ ಜಾಥಾ ಮೂಲಕ ಕೋಮು ಸೌಹಾರ್ದತೆಯ ಸಂದೇಶ ಮೊಳಗಿಸಿ ಡಿಸೆಂಬರ್ 26 ರಂದು ಕೊಲ್ಹಾರದಲ್ಲಿ ಕೋಮು ಸೌಹಾರ್ದ ಸಮಾವೇಶ ನಡೆಸಿತು. ಕರ್ನಾಟಕ ಪ್ರಾಂತ ರೈತ ಸಂಘ, ಬಸವನ ಬಾಗೇವಾಡಿ ತಾಲೂಕು ಸಮಿತಿಯವರು ಡಿಸೆಂಬರ್ 22 ರಿಂದ 26 ರವರೆಗೆ ತಾಲೂಕಿನಾದ್ಯಂತ ಜೀಪ್ ಮತ್ತು ಕಾಲ್ನಡಿಗೆ ಜಾಥಾ, ಸಭೆಗಳನ್ನು ನಡೆಸಿ ಹಾಡು, ಘೋಷಣೆ, ಭಾಷಣಗಳ ಮೂಲಕ ಕೋಮು ಸೌಹಾರ್ದತೆಗೆ ಅಡ್ಡಿ ಉಂಟು ಮಾಡುತ್ತಿರುವ ಬಿಜೆಪಿ, ಆರ್.ಎಸ್.ಎಸ್., ವಿಶ್ವಹಿಂದೂ ಪರಿಷತ್‌ನದುಷ್ಟ ಶಕ್ತಿಗಳ ಕುಟಿಲ ಕಾರಾಸ್ಥಾನವನ್ನು ಬಯಲಿಗೆಳೆದರು. 'ದಯವಿಲ್ಲದ ಧರ್ಮವು ಆದಾವುದಯ್ಯ, ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲಿ' ಎಂದು ಜಗತ್ತಿಗೆ ಶಾಂತಿ ಸಂದೇಶ ಸಾರಿದ ಬಸವಣ್ಣ ಹುಟ್ಟಿದ ಈ ನೆಲದಲ್ಲಿ ಕೋಮು ಸೌಹಾರ್ದತೆ ಕಾಪಾಡಲು, ಮತೀಯ ಶಕ್ತಿಗಳನ್ನು ನಿರ್ನಾಮ ಮಾಡಲು ಮುಂದಾಗೋಣ ಎಂಬ ಸಂದೇಶ ಬೀರಿ ಜನರಲ್ಲಿ ಧೈರ್ಯ ತುಂಬಿದರು. ಕೊಲ್ಹಾರದ ಜನ ಸಮಾವೇಶದಲ್ಲಿ ಭಾಗವಹಿಸುವಂತೆ ಸ್ಫೂರ್ತಿ ತುಂಬಿಸಿತು. ಬಸ್‌ಸ್ಟಾಂಡ್ ಮೈದಾನ ತುಂಬಿ ತುಳುಕುವಂತೆ ಮಾಡಿತು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಿಪಿಐ(ಎಂ) ಮುಖಂಡ ಎನ್.ಕೆ.ಉಪಾಧ್ಯಾಯ ಅಧ್ಯಕ್ಷತೆ ವಹಿಸಿದ್ದರು. ಕ.ಪ್ರಾ.ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಮುಖ್ಯ ಅತಿಥಿಯಾಗಿ ಮಾತನಾಡಿದರು. ಜಿಲ್ಲಾ ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ, ಕಾರ್ಯದರ್ಶಿ ಅಣ್ಣಾರಾಯ ಈಳಿಗೇರ, ಜನವಾದಿ ಮಹಿಳಾ ಸಂಘಟನೆಯ ಸುರೇಖಾ ರಜಪೂತ ಮಾತನಾಡಿ ಕೋಮುಸೌಹಾರ್ದತೆಗೆ ಮನವಿ ಮಾಡಿಕೊಂಡರು. ಅಲ್ಲದೆ ಎಸ್‌ಎಫ್‌ಐ, ಡಿವೈಎಫ್‌ಐ, ಪೌರ ಕಾರ್ಮಿಕರ ಸಂಘಟನೆ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು.

ರೌಡಿಗಳಿಂದಾಗಿ ಈ ಘಟನೆ ನಡೆದಿರಬೇಕೆಂಬ ಕೆಲವು ಹಿರಿಯರ ಅಭಿಪ್ರಾಯಕ್ಕೆ ಉತ್ತರಿಸುತ್ತಾ ಕೇಂದ್ರ-ರಾಜ್ಯ ಸರಕಾರಗಳ ಆರ್ಥಿಕ, ಶೈಕ್ಷಣಿಕ ರಾಜಕೀಯ ನೀತಿಯಿಂದಾಗಿ ಉದ್ಯೋಗ ಸಿಗದ ಯುವಕರು ನಿರಾಶೆಯಿಂದಾಗಿ ರೌಡಿಗಳಾಗಬೇಕಾಗಿದೆಂಬುದರತ್ತ ಗಮನ ಸೆಳೆದು ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳಲು ಕಾರಣ ವಿವರಿಸಿ, ಪ.ಬಂಗಾಲ, ಕೇರಳದ ಉದಾಹರಣೆ ನೀಡಿ ಜನಪರ ಆಳ್ವಿಕೆಯಿಂದ ಕೋಮು ಸೌಹಾರ್ದತೆ ಕಾಪಾಡಲು ಸಾಧ್ಯವೆಂದರು.

ಸಾಯಬಣ್ಣ ಹಂದಿಗನೂರು ಅವರ ಸ್ವಾಗತದೊಂದಿಗೆ ಪ್ರಾರಂಭಗೊಂಡು ನಭೀಸಾಬ ದವಳಗಿಯವರ ವಂದನಾರ್ಪಣೆಯೊಂದಿಗೆ ಸಮಾವೇಶ ಮುಕ್ತಾಯವಾಯಿತು. ಲಕ್ಷ್ಮೀ ಮೈಲಾರ ಕ್ರಾಂತಿಗೀತೆ ಹಾಡಿದರು.

ಕೊಲ್ಹಾರದ ಗಣ್ಯರಾದ ಜಿ.ಜಿ.ಗಿಡ್ಡಪ್ಪಗೋಳು, ನಭೀಸಾಬ ಹೊನ್ನಳ್ಳಿ, ಗೋಳಸಂಗಿ, ಗ್ರಾ.ಪ.ಸದಸ್ಯರು, ಡಾ.ಹಿರೇಮಠ ಮೊದಲಾದವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಮತೀಯ ಶಕ್ತಿಗಳಿಗೆ ಅವಕಾಶ ಮಾಡಿಕೊಡುವ ಕೇಂದ್ರ ಸರ್ಕಾರದ ನೀತಿಯನ್ನು ಬಯಲಿಗೆಳೆದು ಜನಜಾಗೃತಿ ಮಾಡಿದ್ದನ್ನು ಜನರೆಲ್ಲ ಪ್ರಶಂಸೆ ಮಾಡಿದರು. ಕೋಮು ಸೌಹಾರ್ದತೆಯ ಹೆಸರಿನಲ್ಲಿ ಬಿಜೆಪಿಯನ್ನು ಟೀಕಿಸಿದರೆಂದು ಕೆಲವು ಗೊಣಗುಟ್ಟಿದಾಗ, ರೈತ ಸಂಘದವರು, ಸಿಪಿಐ(ಎಂ)ನವರು ಒಳ್ಳೆ ಕೆಲಸ ಮಾಡಿದರು ಎಂದು ಹೇಳುವ ಮೂಲಕ ಜನ ಪ್ರತಿಕ್ರಿಯಿಸಿದರು. ಇವುಗಳಿಂದ ಪ್ರಭಾವಿತರಾದ ಊರ ಮುಖಂಡ ಜಿ.ಜಿ.ಗಿಡ್ಡಪಗೋಳರವರು 'ಇನ್ನು ಮುಂದೆ ಇಂಥ ಘಟನೆಗಳಿಗೆ ಅವಕಾಶ ಕೊಡುವುದಿಲ್ಲ' ಎಂದು ಸಭೆಯಲ್ಲಿ ಹೇಳಿದಾಗ ಸಾರ್ವಜನಿಕರು ಚಪ್ಪಾಳೆ ಬಾರಿಸಿದಾಗ ಕೋಮು ಸೌಹಾರ್ದ ಸಮಾವೇಶ ಎಷ್ಟು ಯಶಸ್ವಿಯಾಯಿತೆಂಬುದನ್ನು ತೋರ್ಪಡಿಸಿತು.

- ಎನ್.ಕೆ.ಉಪಾಧ್ಯಾಯ.

ಕೊನೆಗೂ ಬಿಜೆಪಿ ಶಾಸಕರು ತಲೆಬಗ್ಗಿಸಬೇಕಾಯಿತು

ಕೊಲ್ಹಾರದಲ್ಲಿ ಡಿ..6 ರಂದು ನಡೆದ ಘಟನೆ, ಆ ಘಟನೆಯಿಂದಾಗಿ ದಸ್ತಗೀರ್ ಸಾಬರ ಅಂತ್ಯಕ್ರಿಯಯಲ್ಲೂ ಭಾಗವಹಿಸದೆ ಕೊಲ್ಹಾರ ಬಿಟ್ಟಿದ್ದ ಬಿಜೆಪಿ ಜಾಥಾ ಮತ್ತು ಕೋಮು ಸೌಹಾರ್ದತೆ ಸಮಾವೇಶದ ಬಿಸಿ ತಟ್ಟಿದ ನಂತರ ಸಮಾವೇಶ ನಡೆದ ಎರಡನೇ ದಿವಸವೇ ಎರಡೂ ಕೋಮಿನ ಮುಖಂಡರನ್ನು ಕರೆಸಿ ಕೋಮು ಸೌಹಾರ್ದತೆ ಕಾಪಾಡಲು ತಾವು ಶ್ರಮಿಸುವುದಾಗಿಯೂ, ಯುವಕರಿಗೆ ಬುದ್ಧಿ ಹೇಳಿ ತಿದ್ದುವುದಾಗಿಯೂ ಹೇಳಿದ್ದಾನೆ. ಸಿಪಿಐ(ಎಂ) ಮತ್ತು ರೈತ ಸಂಘ ಈ ಸಮಸ್ಯೆಯನ್ನು ಇಷ್ಟಕ್ಕೇ ಕೈ ಬಿಡುವುದಿಲ್ಲವೆಂದೂ ಹೇಳಿ ಒತ್ತಡಕ್ಕೆ ಮಣಿದು ತಲೆ ತಗ್ಗಿಸಿದ್ದಾರೆ.

ಸಂಘ ಪರಿವಾರಕ್ಕೆ ಸವಾಲೆಸೆದ ಮಡಿಕೇರಿಯ ಕಾರ್ಯಕ್ರಮ

ಬಹುವಚನ ವೇದಿಕೆಯ ಕೋಮುವಾದದ ಹಲವು ಮುಖಗಳು ವಿಚಾರ ಸಂಕಿರಣವನ್ನು ಡಿಸೆಂಬರ್ 10 ರಂದು ಕೋಟೆ ಸಭಾಂಗಣದಲ್ಲಿ ನಡೆಸುತ್ತಿರುವಾಗ ಸ್ವಲ್ಪ ಸಮಯದಲ್ಲೇ ಅಲ್ಲಿಗೆ ನುಗ್ಗಿದ ಸಂಘ ಪರಿವಾರದ 40 ಮಂದಿ ಗೂಂಡಾಗಳು ಧಾಳಿ ಮಾಡಿ ಕಾರ್ಯಕ್ರಮ ಅಸ್ತವ್ಯಸ್ತಗೊಳಿಸಿದ್ದರು. ಇದರ ನೇತೃತ್ವ ವಹಿಸಿದ್ದ ಬಿಜೆಪಿಯ ಜಿಲ್ಲಾ ಅಧ್ಯಕ್ಷ ಕೆ.ಜಿ.ಬೋಪಯ್ಯ ಸೇರಿದಂತೆ ಕೆಲವರು ಬಹುವಚನ ತಂಡದ ಸಂಚಾಲಕ ಪಟ್ಟಾಭಿಸೋಮಯಾಜಿಯನ್ನು ನಿಂದಿಸತೊಡಗಿದ್ದರು. ಮಡಿಕೇರಿಯಲ್ಲಿ ಇಂತಹ ಕಾರ್ಯಕ್ರಮಗಳನ್ನು ನಡೆಸಲು ಬಿಡುವುದಿಲ್ಲವೆಂದು ಬೊಬ್ಬೆ ಹಾಕಿದರು. ಸ್ಥಳದಲ್ಲೇ ಇದ್ದ ಸರ್ಕಲ್ ಇನ್ಸ್‌ಪೆಕ್ಟರ್ ಧಾಳಿಕೋರರ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲು 'ಬಹುವಚನ' ತಂಡದವರನ್ನೇ ಬೆದರಿಸಿದ್ದರು. ಅಂದು ಕಾರ್ಯಕ್ರಮ ನಡೆಸಲು ಸಾಧ್ಯವಾಗಿರಲಿಲ್ಲ.

ಸವಾಲೆಸೆದ ಕಾರ್ಯಕ್ರಮ: ಸಂಘ ಪರಿವಾರದ ಈ ಧಾಳಿಯನ್ನು ಖಂಡಿಸಿ, ಬಹುವಚನ ತಂಡ ಮಡಿಕೇರಿಯ ಗಾಂಧಿ ಮಂಟಪದ ಎದುರು ಧರಣಿ [illegible] ಕಾರ್ಯಕ್ರಮವನ್ನು ಮತ್ತಷ್ಟು ಭರ್ಜರಿಯಾಗಿ ನಡೆಸಲು ಪಣ ತೊಟ್ಟರು. ಡಿಸೆಂಬರ್ 30 ರಂದು ಮತ್ತೆ ವಿಚಾರ ಸಂಕಿರಣ ಏರ್ಪಡಿಸಲಾಯಿತು. ಈ ಬಾರಿ ಮಡಿಕೇರಿಯ ಟೌನ್‌ಹಾಲ್‌ನಲ್ಲಿ ಬೃಹತ್ ಪ್ರಮಾಣದಲ್ಲಿ ನಡೆಸಿತು. ಮೊದಲ ಕಾರ್ಯಕ್ರಮಕ್ಕಿಂತ ಹತ್ತು ಪಟ್ಟು ಜನ ಸೇರುವುದರ ಮೂಲಕ ಸಂಘ ಪರಿವಾರಕ್ಕೆ ಸವಾಲೆಸೆದರು. ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದ ಅನೇಕ ವಿಚಾರವಾದಿಗಳು (ಹಿಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿದ್ದವರು) ಸಂಘ ಪರಿವಾರದ ಬಣ್ಣಗಳನ್ನು ಬಯಲು ಮಾಡಿದರು. 'ಬಹುವಚನ' ತಂಡ ಕಾರ್ಯಕ್ರಮಕ್ಕೆ ವ್ಯಾಪಕ ಜನ ಬೆಂಬಲ ಸಿಕ್ಕ ಕಾರಣ ಈ ಬಾರಿ ಧಾಳಿಕೋರರು ಹೆದರಿ ಹಿಂದೆ ಸರಿದರು. ಆದರೆ ಹೊಸದಾಗಿ ಬಂದ ಪೋಲೀಸ್ ಜಿಲ್ಲಾ ಎಸ್.ಪಿ., ಡಿ.ಸಿ.ಯವರು ಸಂಘ ಪರಿವಾರದೊಂದಿಗೆ ಧ್ವನಿಗೂಡಿಸಿದ್ದು ನಾಚಿಕೆಗೇಡು. ಹೀಗಿದ್ದಾಗ್ಯೂ ಪ್ರಗತಿಪರರು ಒಂದಾದರೆ, ಜನರಲ್ಲಿ ಕೋಮು ವಿಷ ಉಣ್ಣಿಸುತ್ತಿರುವ ಕೋಮುವಾದಿಗಳನ್ನು ಎದುರಿಸಲು ಸಾಧ್ಯವಿದೆ ಎಂಬುದಕ್ಕೆ ಈ ಉದಾಹರಣೆಯೇ ಸಾಕಲ್ಲವೇ?

...ಹೊಗಳಿಕೆಗೆ ಸಮರ್ಪಿಸಿಕೊಂಡ ಸಮಾವೇಶ

ಪುಟ 3 ರಿಂದ

ಬೆಲೆ ಇಳಿಯಲು ನಾನೇ ಕಾರಣ ಎಂದು ಹೇಳಿದ ಅವರು ಸೂಚ್ಯವಾಗಿ ತನ್ನ ಮಂತ್ರಿ ಪಟ್ಟ ಹೋಗಿದ್ದು ಧಾರಣೆ ಇಳಿಯಲು ಕಾರಣ ಎಂದಂತಿತ್ತು. ಆದರೆ ತೆಂಗಿನ ಬೆಲೆ ಇಳಿಯಲು ಏನು ಕಾರಣ ಎಂದು ತಿಳಿಸಲೇ ಇಲ್ಲ. ಮತ್ತು ಮೊದಲು ತೆಂಗಿನ ಧಾರಣೆ ಏರಿಸಲು ಏನು ಮಾಡಿದೆ ಎಂದು ಕೂಡ ಹೇಳಲೇ ಇಲ್ಲ.

ಅಡಿಕೆ ಬೆಳೆಯ ಕ್ಷೇತ್ರದ ವಿಸ್ತಾರ ಆಗಿದ್ದು ಬೆಲೆ ಇಳಿಯಲು ಒಂದು ಕಾರಣ ಎಂದು ಹೇಳಿದ ಇವರು ವಿಚಾರಸಂಕಿರಣದ ಮುಖ್ಯಾಂಶವನ್ನು ನನಗೆ ಕೊಡಿ, ನಾನು ದೆಹಲಿಗೆ ನಿಯೋಗ ಒಯ್ದು ಮಾತನಾಡುತ್ತೇನೆ ಎನ್ನುವ ಭರವಸೆಯನ್ನು ಮಾತ್ರ ಕೊಟ್ಟರು. ಕೊನೆಗೂ ಹೆಗಡೆಯವರು ನಮಗೊಂದು ದಿಕ್ಕು ತೋರಿಸುತ್ತಾರೆಂದು ಬಂದವರ ದಿಕ್ಕು ತಪ್ಪಿತು. ಸರ್ಕಾರದ ನೀತಿಯ ವಿರುದ್ಧ ಆಕ್ರೋಶಿತರಾದ ರೈತರನ್ನು ಸಮಾಧಾನ ಮಾಡಲು ಬಂದ ಬಿಜೆಪಿಯ ಪ್ರತಿನಿಧಿಯಂತಿದ್ದರು ಹೆಗಡೆ.

ಪ್ರತಿಕ್ರಿಯೆ: ಬಂದವರಲ್ಲಿ ಕೆಲವರು ವ್ಯಕ್ತಪಡಿಸಿದ ವಸ್ತುನಿಷ್ಠ ಪ್ರತಿಕ್ರಿಯೆಗಳು ಎರಡು

ಒಂದು ಮುಕ್ತ ಆಮದು ನೀತಿಯ ಭಾಗವಾಗಿ ಮೊದಲ ಕಂತಿನಲ್ಲಿ 1400 ನಂತರ 714 ವಸ್ತುಗಳನ್ನು WTO ಶರತ್ತುಗಳಿಗೆ ಒಪ್ಪಿ ಸುಂಕ ಮುಕ್ತಗೊಳಿಸಿ, ಬೆಲೆ ಇಳಿಕೆಗೆ ಕಾರಣರಾದ ರಾಮಕೃಷ್ಣ ಹೆಗಡೆಯವರೇ ಅಡಿಕೆ-ತೆಂಗು ಬೆಳೆಗಾರರ ಸಮಾವೇಶವನ್ನು ದೀಪ ಬೆಳಗಿಸಿ (ಈ ನೀತಿಯಿಂದಾಗಿ ಅನೇಕ ಕುಟುಂಬದ ದೀಪ ಆರಿ ಹೋಗಲು ಕಾರಣರಾದವರು) ಉದ್ಘಾಟಿಸಿದ್ದು ತಮಾಶೆಯಾಗಿತ್ತು.

ಎರಡು, ತೀರಾ ವ್ಯವಸ್ಥಿತವಾಗಿ ಸಮಾವೇಶ ಮಾಡಿದ್ದು, ಜನರನ್ನು ಸೇರಿಸಿದ್ದನ್ನು ಮೆಚ್ಚಲೇಬೇಕು. ಆದರೆ ಒಟ್ಟು ಸಮಾವೇಶ ಚುನಾವಣೆಯಲ್ಲಿ ಜನರಿಂದ ಮೂಲೆಗೆ ತಳ್ಳಲ್ಪಟ್ಟ (ಬಾಲ್ತಿ ಕಳೆದುಕೊಂಡ) ಸಂಯುಕ್ತ ಜನತಾದಳದ(ಲೋಕಶಕ್ತಿ ಗುಂಪು) ಪುನಶ್ಚೇತನಕ್ಕಾಗಿ ನಡೆಸಿದಂತಿತ್ತು. ಅಡಿಕೆ-ತೆಂಗು ಬೆಳೆಗಾರರೆ ನಿಮ್ಮ ಅಭಿವೃದ್ಧಿಗಾಗಿ, ಬೆಳೆಗಳ ಧಾರಣೆಗಾಗಿ ಬಾಣದ ಗುರುತಿಗೆ ಮತ ಕೊಡಿ ಎಂಬಂತಿತ್ತು.

ಕೊನೆ-ಕೆಲವು ಸಲಹೆಗಳು: ಮಧ್ಯಾಹ್ನ ವಿಚಾರ ಸಂಕಿರಣ ನಡೆದು ಕೆಲವು ಉಪಯುಕ್ತ ಸಲಹೆಗಳೂ ಬಂದವು. ಆದರೆ ಎಲ್ಲರೂ ಗಮನಿಸಬೇಕಾದದ್ದು ಉದಾರೀಕರಣ, ಮುಕ್ತ ಆಮದು ನೀತಿಯಿಂದಾಗಿ ಧಾರಣೆ ಕುಸಿದಿದೆ. ಹಾಗಾಗಿ ಆ ನೀತಿಯನ್ನು ಕೈ ಬಿಟ್ಟಲ್ಲಿ ಮಾತ್ರವೇ ರೈತರಿಗೆ ಭವಿಷ್ಯವಿದೆ.

. ಕ್ಯಾಂಪ್ಕೋದಂತ ಸಂಸ್ಥೆಗೆ ಸರ್ಕಾರ ಹೆಚ್ಚಿನ ಧನ ಸಹಾಯ ಕೊಟ್ಟು ಅಡಿಕೆ-ತೆಂಗಿನ ಖರೀದಿಗೆ ಮುನ್ನುಗ್ಗಬೇಕು. ಪ್ರೋತ್ಸಾಹಿಸಬೇಕು. ಕೇವಲ ಅಡಿಕೆ-ತೆಂಗಿನ ಬೆಳೆಗಾರರ ಸಮಾವೇಶ ಮಾಡುವುದಕ್ಕಿಂತ ಸಂತ್ರಸ್ತರಾದ ಎಲ್ಲಾ ಬೆಳೆಗಾರರ ಸಮಾವೇಶ ಆಗಬೇಕು. ಎಲ್ಲಾ ರೈತರು ಒಗ್ಗಟ್ಟಾಗಬೇಕು. ಮತ್ತು ತಮ್ಮ ಬೇಡಿಕೆಯ ಈಡೇರಿಕೆಗಾಗಿ ಬೀದಿಗಿಳಿದು ಹೋರಾಡಬೇಕು.

ಕಾಶ್ಮೀರ-ಕದನ ವಿರಾಮ: ಎಲ್ಲವೂ ಮುಗಿದಿಲ್ಲ

ಭಾರತ ಸರ್ಕಾರವು ರಂಜಾನ್ ತಿಂಗಳ ಪ್ರಾರಂಭದೊಂದಿಗೆ ಏಕಪಕ್ಷೀಯವಾಗಿ ಘೋಷಿಸಿದ ಕಾಶ್ಮೀರದಲ್ಲಿ ಕದನ ವಿರಾಮ ಅಂತ್ಯವಾಗುವ ವೇಳೆ ಬರುತ್ತಿರುವಂತೆ ರಾಷ್ಟ್ರದ ಜನತೆ ಸ್ವಾಭಾವಿಕವಾಗಿ ಕಾಶ್ಮೀರ ಸಮಸ್ಯೆ ಯಾವ ತಿರುವು ಪಡೆದುಕೊಳ್ಳುತ್ತದೆಂದು ಚಿಂತಿಸುತ್ತಿದ್ದಾರೆ. ಭಾರತ ಸರ್ಕಾರವು ಏಕಪಕ್ಷೀಯವಾಗಿ ಕದನ ವಿರಾಮವನ್ನು ಘೋಷಿಸಿದಾಗ ರಾಷ್ಟ್ರದಲ್ಲಿನ ಎಲ್ಲಾ ಶಕ್ತಿಗಳು ಸ್ವಾಗತಿಸಿದಂತೆ ಸಿಪಿಐ(ಎಂ) ಸ್ವಾಗತಿಸಿತ್ತು.

ಈ ಸಂದರ್ಭದಲ್ಲಿ ಹೇಳಲೇಬೇಕಾದ ಅಂಶವೆಂದರೆ ಕದನ ವಿರಾಮವೇ ಕೊನೆಯಲ್ಲ. ಕದನ ವಿರಾಮದ ಘೋಷಣೆಯೊಂದಿಗೆ ಕಾಶ್ಮೀರ ಪ್ರಶ್ನೆಯನ್ನು ಪರಿಹರಿಸಲು ಅಗತ್ಯ ಇರುವ ಮಾತುಕತೆ ಹಾಗೂ ಆ ರಾಜ್ಯದ ಜಾತ್ಯಾತೀತ ದೇಶಪ್ರೇಮ ಶಕ್ತಿಗಳನ್ನು ಒಗ್ಗೂಡಿಸಲು ಅಗತ್ಯವಿರುವ ನಿರ್ದಿಷ್ಟ ಕ್ರಮಗಳನ್ನು ಸಹ ಸರ್ಕಾರ ಕೈಗೊಳ್ಳಬೇಕಿತ್ತು. ಈ ವಿಷಯದಲ್ಲಿ ಸರ್ಕಾರದ ಪ್ರಯತ್ನಗಳೂ ಸಾಲದಾಗಿವೆ.

ಈ ಹಿಂದೆ ಕಾಶ್ಮೀರ ಪ್ರಶ್ನೆ ಪರಿಹಾರಕ್ಕೆ ಪಾಕಿಸ್ತಾನವನ್ನು ಒಳಗೊಂಡಂತೆ ತ್ರಿಪಕ್ಷೀಯ ಮಾತುಕತೆಗೆ ಒತ್ತಾಯಿಸುತ್ತಿದ್ದ ಆಲ್ ಪಾರ್ಟಿ ಹುರಿಯತ್ ಕಾನ್ಫರೆನ್ಸ್(APHC) ಒಳಗೊಂಡ ಸಂಘಟನೆಗಳು ಇದೀಗ ಈ ಒತ್ತಾಯವನ್ನು ಕೈಬಿಟ್ಟಿವೆ. ಡಿಸೆಂಬರ್ 17 ರ ತನ್ನ ಸಭೆಯ ನಂತರ APHC ಭಾರತ ಸರ್ಕಾರದೊಂದಿಗೆ ತ್ರಿಪಕ್ಷೀಯ ಮಾತುಕತೆಗೆ ಇಂಗಿತ ತೋರಿಸಿರುವುದು ಒಂದು ಸಕಾರಾತ್ಮಕ ಬೆಳವಣಿಗೆ. ಇದು ಸದುಪಯೋಗವಾಗಬೇಕಿದೆ.

ಆದರೂ ಸಹ APHC ಯ ಸಂಘಟನೆಗಳು ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಎರಡು ಅಭಿಪ್ರಾಯಗಳನ್ನು ಮುಂದಿಡುತ್ತಿದೆ. ಒಂದು ವಿಭಾಗ ಕಾಶ್ಮೀರ ಪಾಕಿಸ್ತಾನದೊಂದಿಗೆ ಸೇರಬೇಕೆಂದಿದ್ದರೆ ಇನ್ನೊಂದು ವಿಭಾಗ ಕಾಶ್ಮೀರ ಸ್ವಾತಂತ್ರವಾಗಿ ಉಳಿಯಬೇಕೆನ್ನುತ್ತಿದೆ. ಈವರ್ಯಾರು ಒಪ್ಪಲು ಸಿದ್ದರಿರದ ಅಂಶವೆಂದರೆ ಭಾರತದ ಐಕ್ಯತೆ ಸಂರಚನೆ ಒಳಗೆ ಸಮಸ್ಯೆ ಬಗೆಹರಿಸಲಿರುವ ಮೂರನೇ ದಾರಿ.

ಪಾಕಿಸ್ತಾನದ ತಂತ್ರ

APHC ಸಂಘಟನೆಗಳು ಮುಂದಿರಿಸುತ್ತಿರುವ ಈ ಎರಡು ಪರಿಹಾರಗಳಲ್ಲಿ ಹೊಸದೇನಿಲ್ಲ. ಧಾರ್ಮಿಕ ಆಧಾರದಲ್ಲಿ ಕಾಶ್ಮೀರ ಪಾಕಿಸ್ತಾನಕ್ಕೆ ಸೇರಬೇಕೆಂಬ ವಾದವನ್ನು ಪಾಕಿಸ್ತಾನ ಮೊದಲಿನಿಂದಲೂ ಮಂಡಿಸುತ್ತಾ ಬಂದಿದೆ. 1972 ರಲ್ಲಿ ಪಾಕಿಸ್ತಾನ ಹಿನ್ನೆಡೆ ಅನುಭವಿಸಿ ಬಾಂಗ್ಲಾದೇಶ ಒಂದು ಸ್ವತಂತ್ರ ರಾಷ್ಟ್ರವಾಗಿ ಮೂಡಿಬಂದ ನಂತರವೂ ಪಾಕಿಸ್ತಾನವನ್ನು ಆಳುತ್ತಿರುವ ಬುದ್ದಿಜೀವಿಗಳಿಗೆ ಅರ್ಥವಾಗದ ಅಂಶ ಏನೆಂದರೆ ಧರ್ಮವು ರಾಷ್ಟ್ರೀಯತೆಗೆ ಆಧಾರವಾಗಲಾರದು ಎಂಬುದು. 1947 ನೇ ಆಗಸ್ಟ್‌ನಲ್ಲಿಯೇ ಸಂಯುಕ್ತ ಭಾರತವನ್ನು ಧರ್ಮದ ಆಧಾರದಲ್ಲಿ ವಿಭಜಿಸಿದ ನಂತರವೂ ಇಂದಿಗೂ ಪಾಕಿಸ್ತಾನದ ಆಳರಸರಿಗೆ ಶರಿಯತ್ ಕಾನೂನುಗಳನ್ನು ಆದೇಶಗಳನ್ನು ಸಂಪೂರ್ಣವಾಗಿ ಜಾರಿಗೆ ತರಲಾಗಿಲ್ಲ. ಹಾಗೆಯೇ ಸಿಂಧ್, ಬಲೂಚಿಸ್ತಾನ್ ಹಾಗೂ ಉತ್ತರ ಪಶ್ಚಿಮ ಗಡಿ ರಾಜ್ಯಗಳಲ್ಲಿನ ಜನರ ರಾಷ್ಟ್ರೀಯ ಭಾವನೆಗಳನ್ನು ಅರ್ಥಮಾಡಿಕೊಳ್ಳಲಾಗಿಲ್ಲ. ಇಲ್ಲಿಯ ಜನಗಳೂ ಇಸ್ಲಾಮಿಗೆ ಬದ್ದರಾಗಿದ್ದರೂ ಸಹ ಇಸ್ಲಾಮಿಕ್ ರಾಜ್ಯಕ್ಕಾಗಿ ತಮ್ಮ ರಾಷ್ಟ್ರೀಯ ಆಸೆಗಳನ್ನು ಬಲಿಕೊಡಲು ಸಿದ್ದರಿಲ್ಲ. ಈ ರಾಷ್ಟ್ರೀಯ ಆಸೆಗಳು ದಿನದಿಂದ ದಿನಕ್ಕೆ ಬಲಿಷ್ಟಗೊಳ್ಳುತ್ತಿವೆ.

ಈ ಪರಿಹಾರವನ್ನು ಪ್ರತಿಪಾದಿಸುತ್ತಿರುವ ಉಗ್ರಗಾಮಿ ಸಂಘಟನೆಗಳು ಕಾಶ್ಮೀರ ಕಣಿವೆಯಲ್ಲಿ ಕೋಮು ಭಾವನೆಯನ್ನು ಕೆರಳಿಸಲು ಯತ್ನಿಸುತ್ತಿವೆ. ಪಾಕಿಸ್ತಾನದ ಪ್ರಚೋದನೆಯೊಂದಿಗೆ ಈ ಸಂಘಟನೆಗಳು ನಡೆಸಿದ ಕೋಮುವಾದಿ ಧ್ರುವೀಕರಣದ ಪ್ರಯತ್ನದ ಭಾಗವಾಗಿ ಕಣಿವೆಯಲ್ಲಿ ಅಲ್ಪಸಂಖ್ಯಾತರಾಗಿರುವ ಕಾಶ್ಮೀರ ಪಂಡಿತರು ತಮ್ಮ ಮನೆ ಮಠ ತೊರೆದು ವಲಸೆ ಹೋಗಬೇಕಾಗ ಬಂದಿತು. ಈ ನಿರಾಶ್ರಿತರು ತಮ್ಮ ಮನೆ ಮಠಗಳಿಂದ ದೂರ ಉಳಿದು ಅನುಭವಿಸುತ್ತಿರುವ ಯಾತನೆಯನ್ನು ಕಷ್ಟವನ್ನು ಯಾರೂ ತಳ್ಳಿಹಾಕುವಂತಿಲ್ಲ. ಅವರು ತಮ್ಮ ಮನೆಗಳಿಗೆ ಹಿಂದಿರುಗಲು ಅಗತ್ಯವಿರುವ ವಾತಾವರಣವನ್ನು ಸೃಷ್ಟಿಸುವುದು ಅತ್ಯಂತ ಅಗತ್ಯವಾಗಿದೆ. ಅತ್ಯಂತ ದುಃಖದ ಸಂಗತಿಯೆಂದರೆ ರಾಷ್ಟ್ರದ ಇತರೆ ಭಾಗಗಳಲ್ಲಿ ಪಡೆದ ಈ ನಿರಾಶ್ರಿತರು ತಮ್ಮ ಪರಂಪರಾಗತ ಸಂಸ್ಕೃತಿ ಹಾಗೂ ಕಾಶ್ಮೀರತನವನ್ನು ಮರೆತು ತಮ್ಮ ಕಾಶ್ಮೀರಿ ಮುಸ್ಲಿಂ ಬಂಧುಗಳ ವಿರುದ್ಧ ಕೋಮುವಾದಿ ಪ್ರತಿ ಪ್ರಚಾರಕ್ಕೆ ತೊಡಗಿರುವುದು. ಈ ಅಂಶವು ಪಾಕ್ ಪರ ಉಗ್ರಗಾಮಿಗಳಿಗೆ ಅನುಕೂಲಕರವಾಗುತ್ತಿದೆ.

ಎರಡನೇ ಪರಿಹಾರ ಅಂದರೆ ಕಾಶ್ಮೀರ ಸ್ವತಂತ್ರ ರಾಷ್ಟ್ರವಾಗಬೇಕೆಂಬ ವಿಚಾರವು ಸಾಮ್ರಾಜ್ಯಶಾಹಿ ಪರವಾಗಿದ್ದು ನೇರವಾಗಿ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಅನುಕೂಲ ಮಾಡಿಕೊಡುತ್ತದೆ. ಸ್ವತಂತ್ರ ಕಾಶ್ಮೀರವು ಭೌಗೋಳಿಕವಾಗಿ ಅಮೆರಿಕನ್ ಸಾಮ್ರಾಜ್ಯಶಾಹಿಗಳ ನಿರ್ಣಾಯಕ ಹಿತಾಸಕ್ತಿಗಳಿಗೆ ಅನುಕೂಲಕರವಾಗಿದೆ. ಈ ಸಾಮ್ರಾಜ್ಯಶಾಹಿ ಪರ ಚಿಂತಕರು ಅಮೆರಿಕನ್ ಅದಿಪತ್ಯವನ್ನು ಬಲಪಡಿಸುವ ಹಿನ್ನೆಲೆಯಲ್ಲಿ ಅನೇಕ ಪರಿಹಾರಗಳನ್ನು ಮುಂದಿರಿಸಿದ್ದಾರೆ. ಪೋಕ್ರಾನ-2 ಅಣು ಪರೀಕ್ಷೆಯ ನಂತರ ಅಡ್ವಾಣಿಯಂತಹ ಇತರರು ನೀಡಿದ ಭಾವೋನ್ಮಾದ ಹೇಳಿಕೆಗಳು ಕಾಶ್ಮೀರ ವಿಷಯವನ್ನು ಅಂತರಾಷ್ಟ್ರೀಕರಿಸಲು ಅನುವುಗೊಳಿಸಿತ್ತು. ಶಿಮ್ಲಾ ಒಪ್ಪಂದದ ಆಶಯಕ್ಕೆ ವಿರುದ್ಧವಾಗಿ ಬಿಲ್ ಕ್ಲಿಂಟನರು ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ವೈಯಕ್ತಿಕ ಆಸಕ್ತಿ ವಹಿಸಲಿದ್ದಾರೆ ಎಂಬ ಅಂಶವನ್ನು ಹೇಳಿದ ಕ್ಲಿಂಟನ್-ನವಾಜ್‌ರ ಜಂಟಿ ಘೋಷಣೆಯ ಕರಡಿಗೆ ವಾಜಪೇಯಿಯವರು ಒಪ್ಪಿಗೆ ನೀಡಿದರು.

ಅಮೆರಿಕದ ಆಸಕ್ತಿ ಅರ್ಥವಾಗದೇ?

ವಿಶ್ವ ಭೂಪಟದಲ್ಲಿ ಜಮ್ಮು ಕಾಶ್ಮೀರದ ಸ್ಥಳವೇ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಒಂದು ದೊಡ್ಡ ಆಸಕ್ತಿಯನ್ನು ಮೂಡಿಸಿದೆ. ಭೂಪಟದ ಈ ಪ್ರದೇಶದ ಮೇಲೆ ಹಿಡಿತ ಸಾಧಿಸಲು ಸಾಧ್ಯವಾದಲ್ಲಿ ಭಾರತ, ಪಾಕಿಸ್ತಾನ, ಚೈನಾ, ರಷ್ಯಾ, ಅಫಘಾನಿಸ್ತಾನ, ಇರಾನ್, ಮಧ್ಯ ಏಶ್ಯಾ ಗಣರಾಜ್ಯಗಳು ಹಾಗೂ ಇತರರ ಮೇಲೆ ಯಜಮಾನಿಕೆ ನಡೆಸಲು ಅದು ಸಹಕಾರಿಯಾಗುತ್ತದೆ. ಬ್ಲಬಿ ವಿನ ಪೂರ್ವ ದಿಕ್ಕಿನೆಡೆಗಿನ ವಿಸ್ತರಣೆ ಅಮೆರಿಕನ್ ಸಾಮ್ರಾಜ್ಯಶಾಹಿಗಳ ನೈಜ ಉದ್ದೇಶಗಳು ಕುರಿತಂತೆ ವಾಜಪೇಯಿ ಸರ್ಕಾರಕ್ಕೆ ಎಚ್ಚರಿಕೆ ಮೂಡಬೇಕಾಗಿತ್ತು. ಪಾಕಿಸ್ತಾನದ ವಿರುದ್ಧ ಇವರಿಗೆ ಇರುವ ಅಂಥ ವೈರತ್ವವು ಇವರನ್ನು ಅಮೆರಿಕನ್ ಕುತಂತ್ರದ ಬಲಿಪಶುವನ್ನಾಗಿಸುತ್ತಿದೆ. ಇವರಿಗೆ ಅರ್ಥವಾಗದ ಅಂಶವೆಂದರೆ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಭಾರತವನ್ನು ತನ್ನೆಡೆಗೆ ಸೆಳೆದುಕೊಳ್ಳಲು ಪಾಕಿಸ್ತಾನವನ್ನು ಬಿಟ್ಟುಕೊಡುವುದಿಲ್ಲವೆಂಬ ಅಂಶ. ಪಾಕಿಸ್ತಾನದ ಆಳುವ ಹಿತಾಸಕ್ತಿಗಳಿಗೂ ಅರ್ಥವಾಗದ ಅಂಶವೆಂದರೆ ಕಾಶ್ಮೀರ ಭಾರತ ರಾಷ್ಟ್ರದಿಂದ ಬೇರ್ಪಟ್ಟರೂ ಸಹ ಪಾಕಿಸ್ತಾನಕ್ಕೆ ಸೇರುವುದಿಲ್ಲವೆಂಬ ಅಂಶ.



ಚರ್ಚೆಯಲ್ಲಿ ಆಲ್ ಪಾರ್ಟಿ ಹುರಿಯತ್ ಕಾನ್ಫರೆನ್ಸಿನ ಮುಖಂಡರು

ಹದಗೆಡುತ್ತಿರುವ ಪರಿಸ್ಥಿತಿ

ಈ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಕಾರ್ಯ ವಿಧಾನವನ್ನು ಪರಿಶೀಲಿಸಬೇಕಿದೆ. 1987 ರ ಮಾರ್ಚನಲ್ಲಿ ನಡೆದ ಅಸೆಂಬ್ಲಿ ಚುನಾವಣೆಗಳ ನಂತರ ಕಾಶ್ಮೀರ ಪರಿಸ್ಥಿತಿಯು ತೀವ್ರವಾಗಿ ಹದಗೆಡಲು ಪ್ರಾರಂಭಿಸಿದರೂ 1996 ರಲ್ಲಿ ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬಂದ ಸಂಯುಕ್ತ ರಂಗ ಸರ್ಕಾರದ ನಂತರ ಜಮ್ಮು ಮತ್ತು ಕಾಶ್ಮೀರದ ಜನತೆಗೆ ಆಸೆಯ ಕಿರಣಗಳು ಮೂಡತೊಡಗಿದವು. ಈ ರಾಜ್ಯಕ್ಕೆ ಸಂಬಂಧಪಟ್ಟಂತೆ ದೇವೇಗೌಡ ಸರ್ಕಾರ ಘೋಷಿಸಿದ ಅಂಶಗಳು ಜನತೆಯಲ್ಲಿ ಆಸಕ್ತಿ ಮೂಡಿಸಿದವು. ಇದು 1997 ರ ಅಸೆಂಬ್ಲಿ ಚುನಾವಣೆಗಳಲ್ಲಿ ಪ್ರತಿಫಲನವಾಯಿತು. ಈ ಚುನಾವಣೆಗಳು ಶಾಂತಿಯುತ ಪರಿಸ್ಥಿತಿಯಲ್ಲಿ ನಡೆದವು ಹಾಗೂ ರಾಜ್ಯದ ಜನತೆ ಉಗ್ರಗಾಮಿ ಗುಂಪುಗಳ ಬೆದರಿಕೆಗಳನ್ನು ನಿರ್ಲಕ್ಷಿಸಿವೆ. ಎಲ್ಲಾ ಬೆದರಿಕೆಗಳ ನಡುವೆಯೂ ಈ ಚುನಾವಣೆಯಲ್ಲಿ ನಡೆದ ಶೇ. 50 ರಷ್ಟು ಮತದಾನ ಸಾಮಾನ್ಯ ವಿಷಯವಲ್ಲ. ರಾಜ್ಯವು ಐಕ್ಯ ಭಾರತದ ಭಾಗವಾಗಿರುತ್ತದೆಂದು ಘೋಷಿಸಿದ ಹಾಗೂ ಈ ರಾಜ್ಯವು ಸಂಯುಕ್ತ ಭಾರತದಲ್ಲಿ ಸೇರುವ ಘಟ್ಟದಲ್ಲಿ ನಿರ್ಣಾಯಕ ಪಾತ್ರವಹಿಸಿದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವನ್ನು ಈ ಚುನಾವಣೆಗಳು ಅಧಿಕಾರಕ್ಕೆ ತಂದವು. ಕಾಶ್ಮೀರದ ಜನತೆ ಭಾರತದ ಭಾಗವಾಗಿ ಇರಬಯಸುತ್ತಾರೆ ಎಂಬ ಅಂಶವನ್ನು ಇದು ಸ್ಪಷ್ಟಪಡಿಸುತ್ತದೆ.

ವಾಜಪೇಯಿ 'ಪ್ರಚಾರ ಕಸರತ್ತು'

ಸಂಯುಕ್ತ ರಂಗ ಸರ್ಕಾರದ ನಂತರ ಅಧಿಕಾರ ವಹಿಸಿಕೊಂಡ ಬಿಜೆಪಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಪರಿಸ್ಥಿತಿ ಹದಗೆಡಲು ಪ್ರಾರಂಬಿಸಿತು.

ಹರ್ಕಿಶನ್ ಸಿಂಗ್ ಸುರ್ಜಿತ್

ಬಿಜೆಪಿ ನೇತೃತ್ವದ ಸರ್ಕಾರ ಕಣಿವೆಯಲ್ಲಿ ಅಭಿವೃದ್ಧಿ ಕೆಲಸಗಳ ಹೆಸರಿನಲ್ಲಿ ಏನನ್ನೂ ಮಾಡಲಿಲ್ಲ. ಮಾತ್ರವಲ್ಲ ನ್ಯಾಷನಲ್ ಕಾನ್ಫರೆನ್ಸ್ ಸರ್ಕಾರವು ಕೂಡ ಈ ಕರ್ತವ್ಯವನ್ನು ನಿಭಾಯಿಸಲಿಲ್ಲ. ಪ್ರಧಾನ ಮಂತ್ರಿ ವಾಜಪೇಯಿಯವರು ಲಾಹೋರ್‌ಗೆ ಬಸ್ ಯಾತ್ರೆ ನಡೆಸಿ ಪಾಕಿಸ್ತಾನದ ನವಾಜ್ ಶರೀಫರನ್ನು ಭೇಟಿಯಾದ ಕಸರತ್ತು ಪ್ರಚಾರವೊಂದನ್ನು ಬಿಟ್ಟರೆ ಬೇರೆನನ್ನು ಸಾಧಿಸಲಿಲ್ಲ. ಕಾಶ್ಮೀರ್ ಪ್ರಶ್ನೆಯ ಮೇಲೆ ಆರ್.ಎಸ್.ಎಸ್. ಹಾಗೂ ಅದರ ಸಂಘಟನೆಗಳೂ ವಿಷ ಕಾರುವುದನ್ನು ಮುಂದುವರಿಸಿದ್ದವು. ಇಲ್ಲಿನ ಆರ್.ಎಸ್.ಎಸ್. ಪ್ರಚಾರದೊಂದಿಗೆ ಪಾಕಿಸ್ತಾನದಲ್ಲಿಯೂ ಕೋಮುವಾದಿ ಪ್ರಚಾರಕ್ಕೇನೂ ವ್ಯತ್ಯಾಸವಿರಲಿಲ್ಲ. ನಮ್ಮ ಸೈನಿಕರು ಮಹಾನ್ ತ್ಯಾಗ ಬಲಿದಾನಗಲನ್ನು ಮಾಡಿ ಕಾರ್ಗಿಲ್ ಯುದ್ಧವನ್ನು ಗೆದ್ದ ನಂತರವೂ ಆರ್.ಎಸ್.ಎಸ್. ನಡೆಸಿದ ಕೋಮುವಾದಿ ಪ್ರಚಾರದಿಂದಾಗಿ ಪಾಕಿಸ್ತಾನದಲ್ಲಿನ ಆಳುವ ಜನ ಧರ್ಮದ ಆಧಾರದ ಮೇಲೆ ಕಾಶ್ಮೀರವನ್ನು ಕೇಳುವ ತಮ್ಮ ಆಶಯವನ್ನು ತೀವ್ರಗೊಳಿಸಿದರು.

ಜಮ್ಮು-ಕಾಶ್ಮೀರ ವಿಭಜಿಸುವ ಆರ್.ಎಸ್.ಎಸ್. ಯೋಜನೆ

ಕೆಲವು ತಿಂಗಳು ಹಿಂದೆ ಜಮ್ಮು ಮತ್ತು ಕಾಶ್ಮೀರವನ್ನು ಜಮ್ಮು ಕಣಿವೆ ಹಾಗೂ ಲಡಾಖ್ ಪ್ರದೇಶವನ್ನಾಗಿ ಮೂರು ವಿಭಾಗಗಳನ್ನಾಗಿ ವಿಂಗಡಿಸಲು ಆರ್.ಎಸ್.ಎಸ್. ತನ್ನ ವಿಭಜಕ ಯೋಜನೆಯನ್ನು ಮುಂದಿರಿಸಿತು. ಈ ಯೋಜನೆಯನ್ನು ಯಶಸ್ವಿಗೊಳಿಸಲು ಒಂದು ಸಂಘಟನೆಯನ್ನು ಸಹ ಹುಟ್ಟಿಹಾಕಿತು. ಸ್ವತಂತ್ರ ಪೂರ್ವದಲ್ಲಿ ಜನರ ಆಶಯಕ್ಕೆ ವಿರುದ್ಧವಾಗಿ ಮಹಾರಾಜ ಹರಿಸಿಂಗ್‌ನ ಉದ್ದೇಶಕ್ಕನುಗುಣವಾಗಿ ಬ್ರಿಟಿಷರು ಭಾರತವನ್ನು ಬಿಟ್ಟು ಹೋದ್ದನಂತರ ಕಾಶ್ಮೀರವನ್ನು ಸ್ವತಂತ್ರ ರಾಷ್ಟ್ರವಾಗಿ ಇರಿಸಲು ಇದೆ ಆರ್.ಎಸ್.ಎಸ್. 'ಪ್ರಜಾಪರಿಷತ್' ಹೆಸರಿನಲ್ಲಿ ಮಹಾರಾಜನನ್ನು ಸಕ್ರಿಯವಾಗಿ ಬೆಂಬಲಿಸಿತ್ತು. ರಾಜ್ಯವನ್ನು ತ್ರಿಭಜಿಸುವ ಆರ್.ಎಸ್.ಎಸ್.ನ ವಾದವನ್ನು ಕೆಲವು ಜನ ದೇಶಪ್ರೇಮದ ಹೆಸರಿನಲ್ಲಿ ಬೆಂಬಲಿಸಲು ಮುಂದಾಗಿದ್ದರು. ಇತಿಹಾಸ, ಸಂಸ್ಕೃತಿ ಪರಂಪರೆ ಹಾಗೂ ಕಾಶ್ಮೀರಿ ಜನತೆಯ ಅಸ್ತಿತ್ವ ಯಾವುದನ್ನೂ ಲೆಕ್ಕಿಸದೆ ಕೇವಲ ಕೋಮುವಾದಿ ಸಿದ್ಧಾಂತದ ಆಧಾರದಲ್ಲಿ ಈ ವಾದವನ್ನು ಮುಂದಿರಿಸಲಾಗಿತ್ತು. ಆರ್.ಎಸ್.ಎಸ್. ಈ ಯೋಜನೆಯನ್ನು ನೆನಪಿಸುವ ಅಂಶವೆಂದರೆ ದಿವಂಗತ ಮಹಾರಾಜ ಹರಿಸಿಂಗನ ಮಗ ಕರಣ ಸಿಂಗ್ ಪ್ರತಿಪಾದಿಸಿದ್ದ ರಾಜ್ಯವನ್ನು ವಿಭಜಿಸುವ ನೀತಿ. ಪ್ರಸಕ್ತ ಹಿಮಾಚಲ ಪ್ರದೇಶದ ಕೆಲವು ಬಾಗಗಳೊಂದಿಗೆ ಜಮ್ಮು ಪ್ರದೇಶವನ್ನು ಸೇರಿಸಿ 'ಡೋಗ್ರಾ' ಎಂಬ ರಾಜ್ಯವನ್ನು ಸ್ಥಾಪಿಸುವುದು ಕರಣ್‌ಸಿಂಗ್‌ನ ವಾದವಾಗಿತ್ತು.

ಅತಿ ಮುಖ್ಯ ಅಂಶ - ಕಾಶ್ಮೀರಿತನ

ರಾಜ್ಯದ ಜನತೆಯ ಸಂಸ್ಕೃತಿ ಹಾಗೂ ಪರಂಪರೆಯನ್ನು ಬಿಂಬಿಸುವ ಕಾಶ್ಮೀರಿತನವನ್ನು ನಿರ್ಲಕ್ಷಿಸಿ ಈ ಎಲ್ಲಾ ವಾದ ಯೋಜನೆಗಳನ್ನು ಮಂಡಿಸಲಾಗುತ್ತಿದೆ ಪ್ರಾರಂಭದಿಂದಲೂ. ರಾಜ್ಯದ ಜನತೆ ಹಿಂದೂ ಮುಸಲ್ಮಾನರಿಬ್ಬರ ಸಮಾನವಾಗಿ ಹಂಚಿಕೊಳ್ಳುವ ತಮ್ಮದೆ ಆದ ವಿಭಿನ್ನ ಸಂಸ್ಕೃತಿಯನ್ನು ಹೊಂದಿದ್ದಾರೆ. ಭಾರತ ಸ್ವತಂತ್ರದ ಸಮಯದಿಂದಲೂ ರಾಜ್ಯದ ವಿಭಿನ್ನ ಸಂಸ್ಕೃತಿಗೆ ಅನೇಕ ಸಂದರ್ಭಗಳಲ್ಲಿ ರಾಷ್ಟ್ರ ಸಾಕ್ಷಿಯಾಗಿ ನಿಂತಿದೆ. ಭಾರತ ಉಪಖಂಡದಲ್ಲಿ ಅಮಾಯಕ ಜನತೆಯ ಪ್ರಾಣಹರಣ ಆಸ್ತಿ ಪಾಸ್ತಿ ಲೂಟಿ ಅಮಾಯಕ ಹೆಣ್ಣು ಮಕ್ಕಳ ಮಾನಭಂಗ ಹಾಗೂ ಮಾನವ ಇತಿಹಾಸದ ಅತಿದೊಡ್ಡ ವಲಸೆ ಹಾಗೂ ನಿರಾಶ್ರಿತರ ಪ್ರಕರಣಗಳು ನಡೆಯುತ್ತಿದ್ದಾಗ ಕಾಶ್ಮೀರದ ಜನತೆ ಕೋಮು ಸೌಹಾರ್ದತೆಗೆ ತಮ್ಮ ಅಮೂಲ್ಯವಾದ ಆಸ್ತಿ ಎಂಬಂತೆ ಅದನ್ನು ರಕ್ಷಿಸಿಕೊಂಡರು. ಪಾಕ್‌ನಿಂದ ತರಬೇತಿ ಪಡೆದ ಉಗ್ರಗಾಮಿಗಳು ಕಣಿವೆಯಲ್ಲಿ ನುಸುಳಿದಾಗ ರಾಜ್ಯದ ಇಡೀ ಜನತೆ ತಮ್ಮ ಕೈಯಲ್ಲಿ ಬಂದೂಕುಗಳನ್ನು ಹಿಡಿದು ನುಸುಳುಕೋರರನ್ನು ಹಿಮ್ಮೆಟ್ಟಿಸಿದರು. ಮುಲ್ಕ್‌ರಾಜಾನಂದರ ಕಾದಂಬರಿ 'ದಿ ಡೆತ್ ಆಫ್ ಹಿರೋ' ತಿಳಿಸುವಂತೆ ಅತಿ ಸಣ್ಣ ಜನ ವಿಭಾಗವಾಗಿದ್ದ ಕ್ರೈಸ್ತ ಸಮುದಾಯವೂ ಕೂಡ ರಾಜ್ಯದ ರಕ್ಷಣೆಗೆ ಕೊಡುಗೆ ನೀಡಿತು. ಇಂತಹ ಜನತೆಯೇ ನಿರ್ಧರಿಸಿದ್ದು ತಮ್ಮ ಭವಿಷ್ಯ ಜಾತ್ಯಾತೀತ ಭಾರತದೊಂದಿಗೆ ಇದೇ ವಿನಃ ಧರ್ಮಾಧಾರಿತ ಪಾಕಿಸ್ತಾನದಲಲ್ಲ. ಇದು ಕಾಶ್ಮೀರಿತನವೆಂದರೆ.

ಈ ಕಾಶ್ಮೀರಿತನವನ್ನು ನಿರ್ಲಕ್ಷಿಸಿ ಕಾಶ್ಮೀರಿ ಸಮಸ್ಯೆಗೆ ಪರಿಹಾರ ಹುಡುಕಲು ಸಾಧ್ಯವಿಲ್ಲ. ಭಾರತ ಹಾಗೂ ಪಾಕಿಸ್ತಾನದಲ್ಲಿರುವ ಕೋಮುವಾದಿ ಶಕ್ತಿಗಳೂ ಕೊಲ್ಲಲು ಪ್ರಯತ್ನಿಸುತ್ತಿರುವುದು ಈ ಕಾಶ್ಮೀರಿತನವನ್ನು. ಅವರಿಗೆ ಪರಿಗಣಿಸದಿರುವ ಅಂಶವೆಂದರೆ ಜಮ್ಮು ಮತ್ತು ಕಾಶ್ಮೀರದ ಭವಿಷ್ಯ ಜಾತ್ಯಾತೀತ ಭಾರತದೊಂದಿಗೆ ಬೆಸೆದುಕೊಂಡಿದೆ ಎಂಬುದು. ಜಾತ್ಯಾತೀತ ಭಾರತದ ಸಂರಚನೆಗೆ ಒಡ್ಡುವ ಯಾವುದೇ ಅಪಾಯ ಹಾಗೂ ಆ ರಾಜ್ಯದ ಜನತೆಯ ಕಾಶ್ಮೀರಿತನಕ್ಕೆ ಒಡ್ಡುವ ಅಪಾಯ ಎರಡು ಸಹ ಒಂದಕ್ಕೊಂದು ತೀವ್ರ ಅಪಾಯವನ್ನು ಒಡ್ಡುತ್ತಿವೆ. ಧರ್ಮದ ಆಧಾರದ ಮೇಲೆ ರಾಜ್ಯವನ್ನು ಪಾಕಿಸ್ತಾನಕ್ಕೆ ಸೇರಿಸಬಯಸುವ ಉಗ್ರವಾದಿ ಗುಂಪುಗಳು ಮರೆಯುತ್ತಿರುವ ಅಂಶವೆಂದರೆ ಅಂತಹ ಯಾವುದೇ ಬೆಳವಣಿಗೆಯೂ ಇಡೀ ಉಪಖಂಡದ ಪರಿಸ್ಥಿತಿಯನ್ನೇ ಹದಗೆಡಿಸುತ್ತಿದೆ ಎಂಬುದನ್ನು

ಪರಿಸ್ಥಿತಿ ಸುಧಾರಿಸಲೂ ಸಾಧ್ಯವಿದೆ:

ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಇರುವ ಮೇಲಿನ ಎರಡು ಸೂತ್ರಗಳು ಸಮಸ್ಯೆ ಪರಿಹರಿಸಲಾರದು. ಬದಲಾಗಿ ಔಷದಿಯೇ ಖಾಯಿಲೆಗಿಂತ ಹೆಚ್ಚು ಅಪಾಯಕಾರಿಯಾದರೆ ಈ ಸಮಸ್ಯೆ ಪರಿಹಾರ ಕಾಶ್ಮೀರಿತನದ ಆಧಾರದಲ್ಲಿ ಮಾತ್ರ ಸಾಧ್ಯ. ಹಾಗಾಗ ಬೇಕಾದಲ್ಲಿ ಭಾರತ ಸರ್ಕಾರ ಕಾಶ್ಮೀರ ಕುರಿತ ಒಟ್ಟಾರೆ ಚಿಂತನೆಯನ್ನು ಪುನರ್‌ನಿರ್ದೇಸಿಸಬೇಕು. ಈ ಮಧ್ಯೆ ಭಾರತ ಸರ್ಕಾರವು ಕದನ ವಿರಾಮವನ್ನು ಮತ್ತೊಂದು ತಿಂಗಳಿಗೆ ಮುಂದುವರಿಸಿದೆ. ಇದು ಸ್ವಾಗತಾರ್ಹ ಕ್ರಮವಾದರೂ ವಿಷಯ ಅಲ್ಲಿಗೆ ನಿಲ್ಲದು. ಭಾರತ ಸರ್ಕಾರವೂ ಕದನ ವಿರಾಮದ ಸಮಯವನ್ನು ಉಗ್ರಗಾಮಿ ಗುಂಪುಗಳೊಂದಿಗೆ ಮಾತುಕತೆ ನಡೆಸಲು ಬಳಸಬೇಕು. ಶಿಮ್ಲಾ ಒಪ್ಪಂದದ ಸಂರಚನೆ ಒಳಗೆ ಪಾಕಿಸ್ತಾನದೊಂದಿಗೂ ಮಾತುಕತೆ ನಡೆಸಬಹುದು. ಉಗ್ರಗಾಮಿ ಗುಂಪುಗಳು ಬಂಡವಾಳವನ್ನಾಗಿಸುವ ಕಾಶ್ಮೀರ ಜನತೆಯಲ್ಲಿ ಮೂಡತ್ತಿರುವ ಪರಕೀಯತೆಯನ್ನು ನಿವಾರಿಸಲು ಅಗತ್ಯವಿರುವ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರಾರಭಿಸುವುದು ಸರ್ಕಾರದ ಹೊಣೆಯಾಗಬೇಕು. ಇದರಿಂದಾಗಿ ದಶಕಗಳಿಂತಲೂ ಹೆಚ್ಚು ಕಾಲ ತೊಂದರೆಗೆ ಒಳಪಟ್ಟಿರುವ ಜನತೆಯ ಸಾಮೂಹಿಕ ಜೀವನವನ್ನು ಸುಧಾರಿಸಿ ಪರಿಸ್ಥಿತಿಯನ್ನು ಸಾಧಾರಣ ಸ್ಥಿತಿಗೆ ತರಲು ಸಾಧ್ಯವಾಗುತ್ತದೆ. ಇದರೊಟ್ಟಿಗೆ ಉಗ್ರಗಾಮಿ ಚಟುವಟಿಕೆಗಳನ್ನು ದಮನಿಸಲು ಭಾರತದ ಐಕ್ಯತೆಗೆ ಮತ್ತು ಜಾತ್ಯಾತೀತಗೆ ನಿಲ್ಲುವ ಶಕ್ತಿಗಳನ್ನು ಕ್ರಿಯಾಶೀಲಗೊಳಿಸಲು ಅಗತ್ಯವಿರುವ ರಾಜಕೀಯ ಕ್ರಮಗಳನ್ನು ಪ್ರಾರಂಬಿಸಬೇಕು. ಇಂತಹ ಶಕ್ತಿಗಳು ಪರಿಸ್ಥಿತಿಯಲ್ಲಿ ಮಧ್ಯ ಪ್ರವೇಶಿಸಲು ಅನುವು ಗೊಳಿಸಬೇಕು. ರಾಜ್ಯದ ಸ್ವಾಯತ್ತತೆಯ ಸಂರಚನೆಯೊಳಗೆ ರಾಜ್ಯಕ್ಕೆ ಹೆಚ್ಚು ಸ್ವಾಯತ್ತತೆಯನ್ನು ರಾಜ್ಯದ ಮೂರು ವಿಭಿನ್ನ ಪ್ರದೇಶಗಳಿಗೆ ಹೆಚ್ಚು ಸ್ವಾಯತ್ತತೆಯನ್ನು ಕೊಡಮಾಡುವುದು ಜನತೆಯನ್ನು ಗೆಲ್ಲಲು ಸಹಕಾರಿಯಾಗುತ್ತದೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ನೆನಪಿಸಬೇಕಿರುವ ಅಂಶವೆಂದರೆ ಪರಿಸ್ಥಿತಿ ತೀವ್ರ ಗಂಭೀರವಾಗಿದ್ದರೂ ಎಲ್ಲ ಮುಗಿದು ಹೋಗಿಲ್ಲ. ಪರಿಸ್ಥಿತಿಯನ್ನು ಸುಧಾರಿಸಬಹುದು. ಆದರೆ ಅದಕ್ಕೆ ಅಗತ್ಯವಿರುವ ಸಕಾರಾತ್ಮಕ ಕೆಲಸಗಳನ್ನು ಅತ್ಯಂತ ತುರ್ತಾಗಿ ಪ್ರಾರಂಭಿಸಬೇಕು.

ಲಿ ಪೆಂಗ್ ಭೇಟಿ

ಚೀನಾ-ಭಾರತ ಸಂಬಂಧಗಳ ಬೆಳವಣಿಗೆಯಲ್ಲಿ ಹೊಸ ಮೈಲಿಗಲ್ಲು

ಚೀನಾದ ಎರಡನೇ ಅತಿ ಮಹತ್ವದ ನಾಯಕ ಮತ್ತು ಅಲ್ಲಿನ ರಾಷ್ಟ್ರೀಯ ಜನತಾ ಕಾಂಗ್ರೆಸ್(ಪಾರ್ಲಿಮೆಂಟ್) ನ ಅಧ್ಯಕ್ಷ ಲಿ ಪೆಂಗ್ ರ ದೀರ್ಘ 9 ದಿನಗಳ ಭಾರತ ಭೇಟಿ ಮಹತ್ವದ್ದು. ಚೀನಾ-ಭಾರತ ಸಂಬಂಧಗಳ ಬೆಳವಣಿಗೆಯಲ್ಲಿ ಒಂದು ಹೊಸ ಮೈಲಿಗಲ್ಲು. ಅವರ ಭೇಟಿಯಲ್ಲಿ ಚೀನಾ-ಭಾರತ ಸಂಬಂಧಗಳ ಬೆಳವಣಿಗೆಯಲ್ಲಿ ಒಂದ ಹೊಸ ಮೈಲಿಗಲ್ಲು. ಅವರ ಭೇಟಿಯಲ್ಲಿ ಚೀನಾ-ಭಾರತಗಳ ನಡುವೆ ಇರುವ ವಿವಾದಗಳನ್ನು ಬಗೆಹರಿಸುವುದರ ಜೊತೆಗೆ, ಸಹಕಾರಕ್ಕೆ ಹೊಸ ಕ್ಷೇತ್ರಗಳನ್ನು ಅರಸುವುದು ಸೇರಿತ್ತು. ಲಿ ಪೆಂಗರ ಭೇಟಿಯ ಮಹತ್ವದ ಬಗ್ಗೆ ಒಂದು ನೋಟ. ಲಿಪೆಂಗರ 9ದಿನಗಳ ಭೇಟಿ 1980 ರ ನಂತರ ಸತತವಾಗಿ ಉತ್ತಮಗೊಳ್ಳುತ್ತಿರುವ ಭಾರತ-ಚೀನಾ ಸಂಬಂಧಗಳನ್ನು ಗಟ್ಟಿಗೊಳಿಸಿ ಇನ್ನಷ್ಟು ವ್ಯಾಪಕಗೊಳಿಸುವತ್ತ ಮಹತ್ವದ ಮೈಲಿಗಲ್ಲು. 1988, 1993 ರಲ್ಲಿ ಭಾರತದ ಪ್ರಧಾನಿಗಳ ಚೀನಾ ಭೇಟಿ, 1992 ರಲ್ಲಿ ಲೀ ಪೆಂಗರ ಭಾರತ ಭೇಟಿ, 1996 ರಲ್ಲಿ ಚೀನಾದ ಅಧ್ಯಕ್ಷರ ಭೇಟಿ, 2000 ರಲ್ಲಿ ಭಾರತದ ಅಧ್ಯಕ್ಷರ ಭೇಟಿ ನಂತರ ಇದು ಎರಡೂ ದೇಶಗಳ ನಡುವೆ ಅತ್ಯಂತ ಉನ್ನತ ನಾಯಕರ ಭೇಟಿ. ಭಾರತದ ಅಣ್ವಸ್ತ್ರ ಪರೀಕ್ಷಣೆ ನಂತರ ಚೀನಾದ ಅತ್ಯಂತ ಉನ್ನತ ನಾಯಕರ ಭೇಟಿ ಕೂಡ. ಲಿ ಪೆಂಗರ 9 ದಿನಗಳ ಭೇಟಿಯ ಭಾಗವಾಗಿ ಅವರು ನವದೆಹಲಿ ಅಲ್ಲದೆ ಮುಂಬಯಿ, ಬೆಂಗಳೂರು ಮುಂತಾದ ಇತರ ನಗರಗಳಿಗೂ ಭೇಟಿ ನೀಡಿದರು. ಮುಂಬಯಿಯಲ್ಲಿ ಚೀನಾ ಕ್ರಾಂತಿಯ ಸಮಯದಲ್ಲಿ ಭಾರತ ಸ್ವಾತಂತ್ರ್ಯ ಚಳುವಳಿ ಸಹಾಯಕ್ಕೆಂದು ಕಳಿಸಿಕೊಟ್ಟು ಡಾ|| ಕೊಟ್ನಿಸ್‌ರ ಮನೆಗೆ ಹೋಗಿ ಅವರ ಕುಟುಂಬದ ಜೊತೆಗಿನ ಭೇಟಿ ಸ್ಮರಣೀಯ ಘಟನೆಯಾಗಿತ್ತು. ಉನ್ನತ ಅಧಿಕೃತ ಭೇಟಿಯ ನಡುವೆ ಇಂತಹ ಭೇಟಿ ಅಪರೂಪದ್ದು. ಎರಡೂ ದೇಶಗಳ ವಿಮೋಚನಾ ಚಳುವಳಿಗಳ ನಡುವೆ ಇದ್ದ ನಿಕಟ ಬಾಂಧವ್ಯ ಎತ್ತಿ ತೋರಿಸುವಂತದ್ದು.

ಲಿ ಪೆಂಗ ಅವರ ಅಧಿಕೃತ ಭೇಟಿಯ ಭಾಗವಾಗಿ ಅವರು ಪ್ರಧಾನಿ, ಅಧ್ಯಕ್ಷರು, ಉಪಾಧ್ಯಕ್ಷರು, ವಿದೇಶ ಮಂತ್ರಿಗಳ ಜತೆ ಮಾತುಕತೆ ನಡೆಸಿದರು. ಲಿ ಪೆಂಗ್ ಅವರ ಅಧಿಕೃತ ಮಾತುಕತೆಗಳಲ್ಲೂ, ಸಾರ್ವಜನಿಕ ಹೇಳಿಕೆಗಳಲ್ಲೂ ಎರಡೂ ದೇಶಗಳ ನಡುವೆ ಇರುವ ಸಮಾನ ಅಂಶಗಳು, ಇರುವ ವಿವಾದ-ಭಿನ್ನಾಭಿಪ್ರಾಯಗಳಿಗಿಂತ ಎಷ್ಟೋ ಹೆಚ್ಚು ಎಂದು ಒತ್ತಿ ಹೇಳುತ್ತಿದ್ದರು. ಅವರ ಭೇಟಿಯ ಒತ್ತು ಸಹಕಾರದ ಹೊಸ ಕ್ಷೇತ್ರಗಳನ್ನು ಹಡುಕುವುದರ ಜತೆಗೆ ಹಳೆಯ ವಿವಾದಗಳಿಗೆ ಪರಿಹಾರ ಹುಡುಕುವುದೂ ಆಗಿತ್ತು.

ಬಹು ಧೃವೀಯ ಜಗತ್ತಿನತ್ತ

ದಕ್ಷಿಣ ಏಶ್ಯಾದ ಎಲ್ಲಾ ದೇಶಗಳ ಜತೆ ಶಾಂತಿಯುತ ದೂರಗಾಮಿ ಸಂಬಂಧಗಳನ್ನು ಸ್ಥಾಪಿಸುವುದು ಚೀನಾದ ಬಯಕೆ. ಯಾವುದೇ ದೇಶದ ಜತೆ ಸಂಬಂಧ ಮೂರನೇ ದೇಶದ ವಿರುದ್ಧ ಅಲ್ಲ ಎಂದು ಸ್ಪಷ್ಟಪಡಿಸಿದರು. ಗಡಿ ವಿವಾದದ ಬಗ್ಗೆ ಸುಗಮವಾಗಿ ನಡೆಯುತ್ತಿರುವ ಮಾತುಕತೆ, ಗಡಿ ನಿರ್ಧಾರದಲ್ಲಿ ಸಾಧಿಸಿರುವ ಪ್ರಗತಿ ಬಗ್ಗೆ ಅವರು ತೃಪ್ತಿ ವ್ಯಕ್ತಪಡಿಸಿದರು. ಗಡಿ ಬಗ್ಗೆ ಸುಭದ್ರ, ಅಂತಿಮ ಪರಿಹಾರ ಕಂಡು ಹಿಡಿಯಲು ಸಾಧ್ಯ ಎಂದು ಒತ್ತಿ ಹೇಳಿದ್ದಾರೆ.

- ಎರಡೂ ದೇಶಗಳ ನಡುವೆ ಸಂಬಂಧಗಳನ್ನು ಘನಿಷ್ಟಗೊಳಿಸುವ ಬಗ್ಗೆ ರಾಜಕೀಯ ನಿರ್ಧಾರ.
- ಆರ್ಥಿಕ ಸಂಬಂಧಗಳನ್ನು ವಿಸ್ತಾರಗೊಳಿಸುವಲ್ಲಿ ಒತ್ತು.
- ಗಡಿ ವಿವಾದ ಮುಂತಾದ ಪ್ರಸ್ತುತ ವಿವಾದಗಳನ್ನು ಮಾತುಕತೆಗಳ ಮೂಲಕ ಶೀಘ್ರ ಪರಿಹಾರಕ್ಕೆ ಕ್ರಮಗಳು.
- ಚೀನಾ ದಕ್ಷಿಣ ಏಶ್ಯಾದಲ್ಲಿ ಶಾಂತಿ ಮತ್ತು ಭದ್ರತೆಗೆ ಬದ್ಧ ಎಂಬ ಭರವಸೆ ಮೂಡಿಸುವುದು.

ಲಿ ಪೆಂಗರ ಭೇಟಿ ಮೂಲಕ ವ್ಯಕ್ತವಾದ, ಎರಡೂ ದೇಶಗಳ ಸಂಬಂಧಗಳನ್ನು ಘನಿಷ್ಟಗೊಳಿಸುವ ಚೀನಾದ ಪ್ರಯತ್ನವನ್ನು ಭಾರತ ಸ್ವಾಗತಿಸಬೇಕು. ಚೀನಾದ ಜತೆ ಇರುವ ಎಲ್ಲಾ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿ, ಆರ್ಥಿಕ ಸಂಬಂಧಗಳನ್ನು ವಿಸ್ತಾರಗೊಳಿಸುವುದು ಭಾರತದ ಹಿತಾಸಕ್ತಿಗೂ ಅನುಕೂಲಕರವಾದದ್ದೇ. ಚೀನಾ-ಭಾರತ ಘನಿಷ್ಟ ಸಂಬಂಧಗಳು ಈ ಪ್ರದೇಶದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲಿ ಶಾಂತಿ ಮತ್ತು ಸುಭದ್ರತೆ ಖಾಯಂಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಬಲ್ಲದು.



ಲಿ ಪೆಂಗರ ಭೇಟಿಯ ಸಮಯದಲ್ಲಿ ವಾಜಪೇಯಿ ಸರ್ಕಾರ ಸ್ನೇಹಿತರ ವಾತಾವರಣದಲ್ಲಿ ಮಾತುಕತೆಗಳನ್ನು ನಡೆಸಿತು. ಇದನ್ನು ಮುಂದುವರೆಸಬೇಕು. ಅಮೆರಿಕದ ಬಾಲಬಡುಕನಾಗಬಯಸುವ ಪ್ರಸ್ತುತ ಒಟ್ಟಾರೆ ನೀತಿಯನ್ನು ಕೈ ಬಿಡಬೇಕು. ಬಹು ಧ್ರುವೀಯ ಎಲ್ಲಾ ಸಣ್ಣ-ದೊಡ್ಡ, ಶ್ರೀಮಂತ-ಬಡ ದೇಶಗಳ ಸಮಾನತೆ ಆಧಾರಿತ ವಿಶ್ವದ ಬೆಳವಣಿಗೆ ಭಾರತದ ಹಿತಾಸಕ್ತಿಗೂ ಪೂರಕ. ನಮ್ಮ ಆಳುವ ವರ್ಗದಲ್ಲೂ, ಅಮೆರಿಕನ್ ಸಾಮ್ರಾಜ್ಯ ಆಗಾಗ ಹರಿಯಬಿಡುವ ಚೀನಾ-ವಿರೋಧಿ ಭಾವನೆಯನ್ನು ಕೈಬಿಡಬೇಕು. ಚೀನಾದ ಜತೆ ಘನಿಷ್ಟ ಸಂಬಂಧ ಬೆಳೆಸುವತ್ತ ಮುಂದಾಗಬೇಕು.

.... ಕೋಮುವಾದದ ಹೊಲಸು ಮಿಶ್ರಣ

ಪುಟ 4 ರಿಂದ

ಈ ಪ್ರಬಂಧದಲ್ಲಿ ಎದ್ದು ಕಾಣುವ ಅಂಶವೆಂದರೆ ಆಳುವ ವರ್ಗಗಗಳಲ್ಲಿ 'ಅಸ್ಥಿರತೆ' ಯ ಬಗ್ಗೆ ತುಂಬಿರುವ ಭಯ. ಈ ಅಸ್ಥಿರತೆಯನ್ನು ತಂದಿರುವ ಬಂಡವಾಳಶಾಹಿ-ಭೂಮಾಲಕ ಧೋರಣೆಗಳನ್ನು ಪರಿಶೀಲಿಸುವ ಬದಲು ಅವರು ಉದಾರೀಕರಣದ ನೀತಿಗಳಿಗೆ 'ಸ್ಥಿರತೆ' ನೀಡಲು, ಬಂಡವಾಳ ಹೂಡಿಕೆದಾರರು ಬಯಸುವಂತೆ ಪ್ರಜಾಪ್ರಭುತ್ವವನ್ನೇ ಜನಗಳ ರಾಜಕೀಯ ಪಾತ್ರವನ್ನೇ ಸೀಮಿತಗೊಳಿಸುವ ಪ್ರಯತ್ನಕ್ಕಿಳಿದಿದ್ದಾರೆ. ಇಂತಹ 'ಸ್ಥಿರತಾವಾದಿ'ಗಳು ಯಾವಾಗಲೂ ಹಾಡುವ ಒಂದು ರಾಗವೆಂದರೆ 'ಎರಡು ಪಕ್ಷ ಪದ್ಧತಿ' ಇಲ್ಲಿಯೂ ಅದು ಬಂದಿದೆ. ಕನಿಷ್ಟ ಹತ್ತು ಶೇಕಡಾ ಮತ ಪಡೆಯುವ ಪಕ್ಷಗಳಿಗೆ ಮಾತ್ರವೇ ರಾಷ್ಟ್ರೀಯ ಪಕ್ಷದ ಸ್ಥಾನಮಾನ ಕೊಡಬೇಕಂತೆ. ಈ ಲೆಕ್ಕದಲ್ಲಿ ಈಗ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಮಾತ್ರವೇ ಈ ಅರ್ಹತೆ

ಕೋಮುವಾದಕ್ಕೆ ಸಮರ್ಥನೆ

ಚುನಾವಣೆ ಮತ್ತು ರಾಜಕೀಯ ಸುಧಾರಣೆ ಕುರಿತಂತೆ ಪ್ರಸ್ತಾವಗಳು ಸಂಪ್ರದಾಯ ಶರಣತೆಯನ್ನು, ಆಳುವ ಜನಗಳ ಆತಂಕಗಳನ್ನು ತೋರಿಸಿಕೊಟ್ಟಿದೆ. ಕೋಮುವಾದ ಮತ್ತು ಜಾತೀವಾದ ಕುರಿತಂತೆ ವಿವರಣೆ ಇನ್ನಷ್ಟು ಆಘಾತಕಾರಿ. ಕೋಮುವಾದ ಮತ್ತು ಮೂಲಭೂತವಾದದತ್ತ ಪ್ರವೃತಿ ದಿನೇ ದಿನೇ ಬೆಳೆಯುತ್ತಿದೆ ಎಂದು ಹೇಳುವ ಪ್ರಬಂಧ ಕೋಮುವಾದ 'ಹುಸಿ-ಜಾತ್ಯಾತೀತತೆ'ಗೆ ಮತ್ತು 'ಅಲ್ಪಸಂಖ್ಯಾತವಾದ'ಕ್ಕೆ ಹಾದಿ ಮಾಡಿಕೊಟ್ಟಿದೆಯೆನ್ನುತ್ತದೆ. ಅವರ ಮಟ್ಟಿಗೆ ಕೋಮುವಾದದ ಪಿಡುಗು ಕೇವಲ 'ಜಾತಿವಾದಿಗಳು' ಮತ್ತು 'ಕೋಮುವಾದಿ'ಗಳ ನಡುವಿನ ತಿಕ್ಕಾಟ ಪರಿಣಾಮ. ಬಹುಶಃ ಈ 'ವಿಶ್ಲೇಷಣೆ'ಯನ್ನು ಆರ್.ಎಸ್.ಎಸ್. ಮುಖವಾಣಿ 'ಆರ್ಗನೈಸರ್' ನಿಂದ ಅನಾಮತ್ತಾಗಿ ಎತ್ತಿಕೊಂಡಿರಬೇಕು. ಆರ್.ಎಸ್.ಎಸ್. ನ ಯಾವುದೇ ಪ್ರಚಾರಕನನ್ನು ಕೇಳಿದರೂ ಆತ ಹೀಗೇ ಹೇಳುತ್ತಾನೆ.

ಕಳೆದ ದಶಕದಲ್ಲಿ ಕೋಮುವಾದ ಹೆಡೆಯೆತ್ತಿದ್ದು, ರಾಜಕೀಯ ಪ್ರಯೋಜನಕ್ಕೆ ಧಾರ್ಮಿಕ ಪ್ರಶ್ನೆಗಳ ನಗ್ನ ಬಳಕೆ(ಇದಕ್ಕೆ ಅಡ್ವಾಣಿಯವರ 'ರಥಯಾತ್ರೆ' ಒಂದು ಉದಾಹರಣೆ) ಮತ್ತು ಬಾಬ್ರಿ ಮಸೀದಿಯ ಧ್ವಂಸದ ಹೀನಕೃತ್ಯ, ಧರ್ಮದ ಸಿನಿಕ ಬಳಕೆ, ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ಧಾಳಿಗಳು ಇವನ್ನೆಲ್ಲಾ ಕೇವಲ 'ತಥಾಕಥಿತ' 'ಜಾತ್ಯಾತೀತವಾದಿಗಳು' ಮತ್ತು 'ಕೋಮುವಾದಿಗಳ' ನಡುವಿನ ತಿಕ್ಕಾಟಗಳು, ಘರ್ಷಣೆಗಳು ಎಂದು ತಳ್ಳಿ ಹಾಕಲಾಗಿದೆ.

ಜಾತಿವಾದದ ಬೆಳವಣಿಗೆಯನ್ನು ಚರ್ಚಿಸುತ್ತಾ ಈ ಪ್ರಬಂಧ ಇನ್ನೊಂದು ನಿರೂಪಣೆ ನೀಡಿದೆ. ರಾಜಕೀಯ ಪ್ರಯೋಜನಕ್ಕಾಗಿ ಒಂದು ಜಾತಿಯನ್ನು, ಇನ್ನೊಂದು ಜಾತಿಯ ವಿರುದ್ಧ ಎತ್ತಿ ಕಟ್ಟುವುದು ಧಾರ್ಮಿಕ ಕುರುಡುತನಕ್ಕಿಂತಲೂ ಹೆಚ್ಚು ಅವೈಜ್ಞಾನಿಕವಾದದ್ದು ಎನ್ನುವ ಈ ಪ್ರಬಂದ ಕೆಳವರ್ಗದ ಜನಗಳನ್ನು ಅಧಿಕಾರ ಸಂಪನ್ನಗೊಳಿಸುವ ಹೆಸರಲ್ಲಿ ಜಾತಿವಾದದ ಈ ರಾಕ್ಷಸ ವಿಚಿತ್ರ ರೀತಿಯಲ್ಲಿ ಗೌರವಾರ್ಹತೆ ಪಡೆದಿದ್ದಾನೆ' ಎನ್ನುತ್ತದೆ.

ಇದನ್ನೋದುವಾಗ ಮಂಡಲ್ ಆಯೋಗ ವಿರುದ್ಧ ಚಳುವಳಿಯ ಸಮಯದಲ್ಲಿ ಹಿಂದೂ ಕೋಮುವಾದಿಗಳು ತಳೆದ ನಿಲುವು ನೆನಪಾಗುತ್ತದೆ. ಕೆಳಜಾತಿಗಳು ತಲೆ ಎತ್ತಿ ನಿಲ್ಲುತ್ತಿರುವುದು ಕೋಮುವಾದಕ್ಕಿಂತ ಸಮಾಜಕ್ಕೆ ಹೆಚ್ಚು ಅಪಾಯಕಾರಿ ಎಂದು ಆಗವರು ವಾದಿಸುತ್ತಿದ್ದರು. ಆ ಛಾಯೆಯೇ ಪ್ರಬಂಧದಲ್ಲಿ ಕಾಣುತ್ತಿದೆ. ಅಧಿಕಾರಶಾಹಿ, ಪೋಲೀಸ್ ಮತ್ತು ಅರೆ ಮಿಲಿಟರಿ ಪಡೆಗಳಲ್ಲಿ ಅಲ್ಪಸಂಖ್ಯಾತರಿಗೆ 'ನ್ಯಾಯಪೂರ್ಣ' ಪ್ರಾತಿನಿಧ್ಯ ಬೇಕೆಂದು ಒತ್ತಾಯಿಸುತ್ತಿರುವ ರಾಜಕಾರಣಿಗಳನ್ನು ಟೀಕಿಸುವ ಭಂಡತನವನ್ನು ಈ ಪ್ರಬಂಧ ತೋರಿದೆ. ಈಗಲೂ ಉನ್ನತ/ಶಿಕ್ಷಣ ಪ್ರವೇಶಿಸುವವರಲ್ಲಿ ಮುಸ್ಲಿಮರ ಪ್ರಮಾಣ ಕೇವಲ 4 ಶೇಕಡಾ, ಆಡಳಿತದಲ್ಲಿ ಅವರ ಪ್ರಾತಿನಿಧ್ಯ ಅತ್ಯಲ್ಪ ಎಂದು ಈ ಪ್ರಬಂಧಕಾರರಿಗೆ ತಿಳಿದಿಲ್ಲವೇನೋ.

'ಅನಾಮಧೇಯ' ಪ್ರಬಂಧಗಳು

ಆಯೋಗ ನೇಮಿಸಿದ ಈ ಅನಾಮಧೇಯ ಸಮಿತಿಗಳು ನಡೆಸಿದ ಈ ಪಾಂಡಿತ್ಯದ ಕಸರತ್ತುಗಳು ಆರ್.ಎಸ್.ಎಸ್.-ಬಿಜೆಪಿ ಪೂರ್ವಾಗ್ರಹಗಳನ್ನು ಅತ್ಯಂತ ವಿಧೇಯತೆಯಿಂದ ಬಿಂಬಿಸಿವೆ.

ನಾವು 'ಅನಾಮಧೇಯ' ಎಂದು ಪರ ಬಳಸಿದ್ದೇವೆ. ಇದಕ್ಕೆ ಕಾರಣವಿದೆ. ಏಕೆಂದರೆ ಈ ಪ್ರಬಂಧಗಳನ್ನು ಸಿದ್ಧಪಡಿಸಿದವರು. ಯಾರು ಎಂಬುದೊಂದು ರಹಸ್ಯವೇ. ಕೇರಳದ ಪ್ರಖ್ಯಾತ ಸಾಹಿತಿ ಮತ್ತು ಸಾಮಾಜಿಕ ವ್ಯಕ್ತಿ ಡಾ.ಸುಕುಮಾರ್ ಅಝಿಕ್ಕೋಡ್ ಆಯೋಗ ನೇಮಿಸಿದ ಇಂತಹ ಒಂದು ಸಮಿತಿಯಿಂದ ರಾಜೀನಾಮೆ ಕೊಟ್ಟಿದ್ದಾರೆ. ಈ ಸಮಿತಿಯ ಒಂದೇ ಒಂದು ಸಭೆಗೆ ತನ್ನನ್ನು ಕರೆಯಲಿಲ್ಲ, ಈ ಪ್ರಬಂಧಗಳನ್ನು ಹೇಗೆ ಸಿದ್ಧಪಡಿಸಲಾಯಿತು ಎಂದೂ ತನಗೆ ತಿಳಿಯದು ಎಂದು ಅವರು ಹೇಳಿದ್ದಾರೆ.

ಈ ಹಿಂದೆ ಆಯೋಗ ರಚಿಸಿದಾಗ ಇದೊಂದು ಸಂವಿಧಾನವನ್ನು ಸುಧಾರಿಸುವ ಪ್ರಾಮಾಣಿಕ ಪ್ರಯತ್ನ ಎಂದು ನಂಬದ ಹಲವು ತಜ್ಞರು, ನ್ಯಾಯ ಪರಿಣತರು ಇದರಲ್ಲಿ ಭಾಗವಹಿಸಲು ಒಪ್ಪಿದ್ದರು. ಆಗಲೇ ನಾವು ಈ ಆಯೋಗದ ಕೆಲಸಕ್ಕೆ ನ್ಯಾಯಬದ್ಧತೆ ಒದಗಿಸುವ ಯಾವ ಕೆಲಸವನ್ನೂ ಮಾಡಬಾರದು ಎಂದು ಎಚ್ಚರಿಸಿದ್ದೆವು. ಆರ್.ಎಸ್.ಎಸ್. - ಬಿಜೆಪಿಯ ಹಿಂಬಾಲಕರಂತಹ ಸುಭಾಷ್ ಕಶ್ಯಪ್‌ಗಳಂತವರಿಗೆ, ಸ್ಟೇಟ್ಸ್‌ಮನ್ ಸಂಪಾದಕ ಸಿ.ಆರ್.ಇರಾನಿಯಂತವರಿಗೆ(ಇತ್ತೀಚೆಗೆ ಈ ಸಿಪಿಐ(ಎಂ) ನ್ನು ತೊಲಗಿಸಿ, ಪಶ್ಚಿಮಬಂಗಾಳವನ್ನು 'ಶಾಂತಗೊಳಿಸಲು' ಎಡರಂಗ ಸರ್ಕಾರವನ್ನು ವಜಾ ಮಾಡಿ ಸೈನ್ಯ ಕಳಿಸಬೇಕು ಎಂದು ಪ್ರತಿಪಾದಿಸಿದ್ದಾರೆ) ಇರಲಿ ಎಂದಿದ್ದೆವು.

ಮೇಲ್ವರ್ಗದ ರಾಜಕೀಯ ಮತ್ತು ಕೋಮುವಾದಿ ಪೂರ್ವಾಗ್ರಹಗಳ ಅತ್ಯಂತ ಹೊಲಸು ಮಿಶ್ರಣವಾಗಿದೆ ಈ ಆಯೋಗದ ದೃಷ್ಟಿಕೋನ. ಒಂದರ್ಥದಲ್ಲಿ ಈ ಪ್ರಬಂಧಗಳ ಪ್ರಕಟಣೆಯಿಂದ ಒಳ್ಳೆಯದೇ ಆಗಿದೆ. ಆಯೋಗದ ನಿಜ ಮರ್ಮ ಈ ಮೂಲಕ ಬಯಲಾಗಿದೆ. ವಾಜಪೇಯಿ ಸರಕಾರದ ಕೃಪಾಶ್ರಯದಲ್ಲಿ ಸಂವಿಧಾನದ ಪರಾಮರ್ಶೆಯ ಬಗ್ಗೆ ಭ್ರಮೆಗಳನ್ನು ಹೊಂದಿರುವವರು ಈ ಪ್ರಬಂಧಗಳನ್ನು ನೋಡಿದ ಮೇಲೆ ಎಂಬ ವಿಚಾರ ಮಾಡಬೇಕಾಗಿ ಬರುತ್ತದೆ.

ನಮ್ಮ ಸಂವಿಧಾನ ಸುವರ್ಣೋತ್ಸವ ವರ್ಷದಲ್ಲಿ ಸಂವಿಧಾನದ ಪರಾಮರ್ಶೆಗೆ ನೇಮಿಸಿದ ಆಯೋಗ ಇತ್ತೀಚೆಗೆ ರಾಜಕೀಯ, ಚುನಾವಣಾ ಸುಧಾರಣೆ ಕುರಿತಂತೆ 'ಪ್ರಬಂಧ'ಗಳ ಒಂದು ಕಂತನ್ನು ಬಿಡುಗಡೆ ಮಾಡಿದೆ. ಈ 'ಪ್ರಬಂಧ'ಗಳು ಆಯೋಗದ ನೇಮಕದ ಬಗ್ಗೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಆಕ್ಷೇಪಗಳನ್ನು ಸಾಬೀತು ಮಾಡಿವೆ. ಈ 'ಪ್ರಬಂಧ'ಗಳಿಂದ ಒಂದರ್ಥದಲ್ಲಿ ಈ ಆಯೋಗದ ಬಗ್ಗೆ ಇದ್ದ-ಬಿದ್ದ ಭ್ರಮೆಗಳೂ ಮಾಯವಾಗುತ್ತವೆ. ಕೇರಳದ ಪ್ರಖ್ಯಾತ ಸಾಹಿತಿ ಡಾ. ಸುಕುಮಾರನ್ ಅಝಿಕೋಡ್‌ರವರ ರಾಜೀನಾಮೆ ಇದಕ್ಕೊಂದು ಸಾಕ್ಷಿ.

ಇತಿಹಾಸದ ಪುಟಗಳಿಂದ

ಚಾರ್ಲಿ ಚಾಪ್ಲಿನ್ ಭಾರತ ಸ್ವಾತಂತ್ರ್ಯದ ಸಮರ್ಥನೆಯಲ್ಲಿ

ಅಧ್ಯಯನಶೀಲ ಚಾಪ್ಲಿನ್, ಹಲವು ವೈವಿಧ್ಯ ವಿಷಯಗಳ ಗಣಿ. ಕತೆ, ಸಾಹಿತ್ಯ, ರಾಜಕೀಯ, ತತ್ವಶಾಸ್ತ್ರ... ಹೀಗೆ. ಚರ್ಚಿಲ್‌ನೊಂದಿಗಿನ ಸ್ನೇಹ, ಅಂತಹ ಹಲವರೊಂದಿಗಿನ ಚರ್ಚೆಗಳು ಚಾಪ್ಲಿನನ್ನು ಬೆಳೆಸಿದವು. ಈ ಅಧ್ಯಯನ, ಚರ್ಚೆ ಹಾಗೂ ಅನುಭವಗಳು ಚಾಪ್ಲಿನ್ ಸ್ವತಂತ್ರವಾದ ನಿಲುಮೆ ರೂಪಿಸುಕೊಳ್ಳುವಲ್ಲಿ ಸಹಾಯಕವಾದವು. ಗಾಂಧೀಜಿಯವರು ಲಂಡನ್‌ನಲ್ಲೇ ಇರುವ ಸಂಗತಿ ತಿಳಿದು ಅವರನ್ನು ಕಾಣಬೇಕೆಂದು ಚಾಪ್ಲಿನ್ ತವಕಿಸಿದ. ಚರ್ಚಿಲ್, ಬ್ರೆಕನ್, ರೂತ್‌ಬಿಯಂತಹವರಿಗೆ ಏನು ಈ ಗಾಂಧಿ ಎಂಬ ಉಡಾಫೆ ಆದರೆ ಅವರ ಎದುರು ತನ್ನ ನಿಲುವನ್ನು ಸಮರ್ಥಿಸಿಕೊಂಡ, ಭೇಟಿಯೂ ಆದ. ಇದು ಜಾಗತಿಕ ಪ್ರಸಿದ್ಧ ಘಟನೆ ಕೂಡ. ಗಾಂಧಿಯನ್ನು ಸಮರ್ಥಿಸುವುದು, ಭೇಟಿ ಮಾಡುವುದು ಎಂದರೆ ಭಾರತದ ಜನತೆಯ ಸ್ವಾತಂತ್ರ್ಯವನ್ನು ಸಮರ್ಥಿಸಿದಂತೆಯೇ ಗಾಂಧಿಯವರನ್ನು ಭೇಟಿ ಮಾಡಿದಾಗಲೂ ಅವರ ಹಲವು ನಿಲುವುಗಳನ್ನು ನಿಷ್ಠುರವಾಗಿ ವಿಮರ್ಶಿಸಿದ, ಪ್ರಶ್ನಿಸಿದ. ಚಾಪ್ಲಿನ್-ಭಾರತ ಜನರ ವಿಮೋಚನಾ ಹೋರಾಟದ ಮಿತ್ರ.



ಬಹುಮುಖ ಪ್ರತಿಭಾಶಾಲಿಯಾದ ಚರ್ಚಿಲ್ ಬಗ್ಗೆ ಚಾಪ್ಲಿನ್‌ಗೆ ತುಂಬ ಅಭಿಮಾನ. ಆತನ ಕಾರ್ಟಮ್ ನಿವಾಸದಲ್ಲಿ ಚರ್ಚಿಲ್ ರಚಿಸಿದ ವರ್ಣ ಚಿತ್ರಗಳನ್ನು ನೋಡಿ ಮೆಚ್ಚಿದ. ಅವರೊಂದಿಗೆ ರಾಜಕಾರಣ ಬಗ್ಗೆ, ಜಾಗತಿಕ ವಿದ್ಯಮಾನಗಳ ಬಗ್ಗೆ, ಚಿತ್ರೋದ್ಯಮದ ಬಗ್ಗೆ ವಿವರವಾಗಿ ಚರ್ಚಿಸಿದ. ಜೊತೆಯಲ್ಲಿ ರೂತ್‌ಬಿ, ಲಾರ್ಡ್ ಬ್ರೇಕನ್ ಮಹಾನುಭಾವರೂ ಇದ್ದರು.

ಮಾತಿಗೆ ಮಾತು ಬಂದು ಚಾಪ್ಲಿನ್ ತಾನು ಸದ್ಯ ಲಂಡನ್‌ನಲ್ಲಿರುವ ಮಹಾತ್ಮ ಗಾಂಧೀಜಿಯವರನ್ನು ಭೆಟ್ಟಿ ಮಾಡಲು ಉತ್ಸುಕನಾಗಿರುವುದಾಗಿ ತಿಳಿಸಿದ. ಅವನ ಮಾತಿನಿಂದ ಅಲ್ಲಿದ್ದವರಿಗೆಲ್ಲ ಆಶ್ಚರ್ಯ ಮತ್ತು ಬೇಸರವಾಯಿತು. ಅವರೆಲ್ಲ ತಲಾ ಒಂದೊಂದು ರೀತಿಯಲ್ಲಿ ಗಾಂಧೀಜಿ ಕುರಿತು ಉಡಾಫೆ ಮಾತುಗಳನ್ನು ಆಡಿದರು. ಆ ಮುದುಕನನ್ನು ಆದಷ್ಟು ಬೇಗ ಬಂಧಿಸಿ ಜೈಲಿನಲ್ಲಿಡದಿದ್ದರೆ ತಾವು ಇಂಡಿಯಾವನ್ನು ಕಳೆದುಕೊಳ್ಳಬೇಕಾದೀತು ಎಂದು ಬ್ರೇಕನ್ ಬಾಲಿಶವಾಗಿ ಮಾತಾಡಿದ್ದು ಕೇಳಿ ಚಾಪ್ಲಿನ್‌ಗೆ ಸುಮ್ಮನಿರಲಾಗಲಿಲ್ಲ.

"ಖಂಡಿತವಾಗಿ ಗಾಂಧೀಜಿಯವರನ್ನು ಜೈಲಿನಲ್ಲಿರಿಸುವುದು ಸುಲಭ. ಬ್ರಿಟೀಷ್ ಸರ್ಕಾರಕ್ಕೆ ಅದೇನು ಕಷ್ಟದ ಕೆಲಸವಲ್ಲ. ಆದರೆ ನೀವು ಎಷ್ಟು ಜನ ಗಾಂಧಿಗಳನ್ನು ಜೈಲಿನಲ್ಲಿರಿಸಬಲ್ಲಿರಿ... ಸಹಸ್ರ ಸಹಸ್ರ ಗಾಂಧೀಜಿಯಂತಹವರನ್ನು ಸೃಷ್ಟಿಸುವ ಶಕ್ತಿ ಭಾರತದ ಮಣ್ಣಿಗಿದೆ" ಎಂದು ಅವನು ಮುಖ ಮುಲಾಜು ನೋಡದೆ ಹೇಳಿದನು. ಅವನು ಹಾಗೆ ನಿರ್ಭಯವಾಗಿ ಹೇಳಿದ್ದು ಕೇಳಿ ಚರ್ಚಿಲ್‌ಗೆ ಆಶ್ಚರ್ಯ ಮಾತ್ರವಲ್ಲ ಸಂತೋಷವೂ ಆಯಿತು. ಹಾಗೆ ನಿಷ್ಠುರವಾಗಿ ಮಾತಾಡುವವರನ್ನು ಆತ ಇಷ್ಟ ಪಡುತ್ತಿದ್ದ. ಆದರೆ ಗಾಂಧೀಜಿ ಮೇಲೆ ಹರಿ ಹಾಯುತ್ತಿದ್ದ, ಮಾತಿನ ಮಧ್ಯೆ ಇದ್ದಾಗ ಊಟ ಮಾಡುತ್ತಿದ್ದಾಗ ಆತಗೆ ಫೋನ್ ಕರೆಗಳು ಬರುತ್ತಲೇ ಇದ್ದವು. ಅದು ಹತ್ತಿರವಿರುವ ಚುನಾವಣೆ ಬಗೆಗಾಗಿರಬಹುದು ಅದು ದೇಶದ ಆರ್ಥಿಕ ದುಃಸ್ಥಿತಿ ಬಗೆಗಾಗಿರಬಹುದು ಅಥವಾ ತನ್ನ ಸರಳತೆಯಿಂದ ಇಡೀ ಇಂಗ್ಲೆಂಡಿನ ಗಮನ ಸೆಳೆದಿರುವ ಗಾಂಧೀಜಿ ಬಗೆಗಾಗಿರಬಹುದು. ಪ್ರತಿಯೊಂದು ಸಮಸ್ಯೆಯನ್ನು ಆಲಿಸುತ್ತಿದ್ದ. ಸಲಹೆ ನೀಡುತ್ತಿದ್ದ. ಪ್ರಥಮ ಮಹಾಯುದ್ಧದ ನಂತರ ಅಮೆರಿಕಾದಂತೆಯೇ ದಿ ಗ್ರೇಟ್ ಬ್ರಿಟನ್ ಕೂಡ ಆರ್ಥಿಕ ಸಂಕಷ್ಟಗಳಿಗೆ ಗುರಿಯಾಗಿತ್ತು. ಮಂಡಿಸಬೇಕಾಗಿರುವ ಬಡ್ಜೆಟ್ಟಿನಲ್ಲಿ ಆರ್ಥಿಕ ಸಮತೋಲನವನ್ನು ಕಾಪಾಡುವ ಯತ್ನದಲ್ಲಿ ಹೊಸ ತೆರಿಗೆಗಳ ಬಗ್ಗೆ ಯೋಚಿಸುತ್ತಿದ್ದ ತಾನು ಇಂಗ್ಲೆಂಡ್ ಬಿಡುವುದರೊಳಗೆ ಚಹಾದ ಬೆಲೆ ಹೆಚ್ಚಬಹುದೆಂದು ಚಾಪ್ಲಿನ್ ನಗಾಡಿದ.

ಚರ್ಚಿಲ್‌ನ ಬೆಡ್‌ರೂಮಿನಲ್ಲೂ ದೊಡ್ಡ ಲೈಬ್ರರಿಯೇ ಇರುವುದು ಕಂಡು ಚಾಪ್ಲಿನ್‌ಗೆ ಆಶ್ಚರ್ಯವಾಯಿತು. ಅದರಲ್ಲಿ ರಾಜಕೀಯ, ಸಾಹಿತ್ಯಿಕ, ತತ್ವಶಾಸ್ತ್ರ, ಇತಿಹಾಸಕ್ಕೆ ಸಂಬಂಧಿಸಿದ ಸಹಸ್ರಾರು ಉತ್ತಮ ಕೃತಿಗಳಿದ್ದವು. ನೆಪೋಲಿಯನ್ ಬಗೆಗಂತೂ ಹತ್ತಾರು ಸಂಪುಟಗಳಿದ್ದವು. ಚಾಪ್ಲಿನ್ ಮತ್ತು ಚರ್ಚಿಲ್ ನೆಪೋಲಿಯನ್ ವಿಷಯದಲ್ಲಿ ಸಮಾನ ಮನಸ್ಕರಾಗಿದ್ದರು.

"ಚಾಪ್ಲಿನ್ ನೀನು ನೆಪೋಲಿಯನ್ ಕುರಿತು ಸಿನಿಮಾ ಮಾಡಬೇಕೆಂದಿರುವಿಯಂತೆ ನಿಜವೇ?" ಎಂದು ಕೇಳಿದ ಚರ್ಚಿಲ್ ಮತ್ತೆ ಮುಂದುವರಿದು ಹೇಳಿದ "ನೀನಾತನ ಬಗ್ಗೆ ಅದ್ಭುತವಾಗಿ ಸಿನಿಮಾ ಒಮ್ಮೊಮ್ಮೆ ಹುಂಬನಂತೆ ದಡ್ಡನಂತೆ ವರ್ತಿಸುತ್ತಿದ್ದ"

ಚಾಪ್ಲಿನ್‌ಗೆ ಚರ್ಚಿಲ್‌ನ ವಿವಿಧ ಆಸಕ್ತಿಗಳನ್ನು ಕಂಡು ಸಂತೋಷವಾಯಿತು.

ಚರ್ಚಿಲ್, ಬ್ರೆಕನ್, ರೂತ್‌ಭಿಯಂತಹವರ ಎದುರು ಗಾಂಧೀಜಿಯವರನ್ನು ಸಮರ್ಥಿಸುವ ಧೈರ್ಯ ಕೇವಲ ಚಾಪ್ಲಿನ್‌ರಂಥವರಿಗೆ ಮಾತ್ರ ಇರುವುದು ಸಾಧ್ಯ. **ಗಾಂಧೀಜಿಯನ್ನು ಸಮರ್ಥಿಸುವುದೆಂದರೆ ಅವರ ಸತ್ಯಾಗ್ರಹವನ್ನು ಮತ್ತು ಇಂಡಿಯಾಕ್ಕೆ ಸ್ವಾತಂತ್ರ್ಯ ಬಯಸುತ್ತಿರುವುದನ್ನು ಸಮರ್ಥಿಸಿದಂತೆಯೇ ಲೆಕ್ಕ.** ಅಜಾತಶತ್ರು ಗಾಂಧೀಜಿಯನ್ನು ದ್ವೇಷಿಸುವವರು ಪ್ರಪಂಚದಲ್ಲಿ ಪ್ರಾಯಶಃ ಯಾರೂ ಇರಲಿಲ್ಲ. ಚಾಪ್ಲಿನ್‌ನಂತೂ ಗಾಂಧೀಜಿಯ ಕಟ್ಟಾ ಅಭಿಮಾನಿಯಾಗಿದ್ದ. ಅಮೆರಿಕಾದಲ್ಲಿರುವಾಗ ತನ್ನ ಪಂಚೇಂದ್ರಿಯಗಳಿಂದ ಜಾಗತಿಕ ಸಮಾಚಾರವನ್ನು ಸಂಗ್ರಹಿಸುತ್ತಿದ್ದ. ಮೆಚ್ಚುವುದನ್ನು ಮೆಚ್ಚಬಲ್ಲವನಾಗಿದ್ದ. ಅಹಿತಕರ ಎನ್ನುವುದನ್ನು ನಿಷ್ಠುರತೆಯಿಂದ ತಿರಸ್ಕರಿಸಬಲ್ಲ ಮನಸ್ಸನ್ನು ರೂಢಿಸಿಕೊಂಡಿದ್ದ ಚಾಪ್ಲಿನ್.

ಇಂಡಿಯಾದಲ್ಲಿ ಗಾಂಧೀಜಿಯಂತಹ ಮುದುಕ ಮುಗುಳ್ನಗೆಯಿಂದ, ಉಪವಾಸ ವ್ರತದಿಂದ, ತೀರಾ ಸರಳತೆಯಿಂದ ಯುದ್ಧಗಳಿಂದ ಸಾಧಿಸಲಾಗದ್ದನ್ನು ಸಾಧಿಸುತ್ತಿರುವುದರ ಬಗ್ಗೆ, ಕೈಯಲ್ಲಿ ಮೋಟು ಕಟ್ಟಿಗೆ ಮತ್ತು ನೇರ ನೋಟ, ನೇರ ಮಾತುಗಳಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿ ಕಟ್ಟಡದ ಬುನಾದಿಯನ್ನು ದುರ್ಬಲಗೊಳಿಸುತ್ತಿರುವುದನ್ನೆಲ್ಲವನ್ನು ಚಾಪ್ಲಿನ್ ದೂರದಲ್ಲಿದ್ದುಕೊಂಡೇ ಗ್ರಹಿಸುತ್ತಿದ್ದ. ತನ್ಮೂಲಕ ಗಾಂಧೀಜಿಯನ್ನು ಕಾಣಬೇಕೆಂದು ತಹತಹಿಸುತ್ತಿದ್ದ.

ಆ ವಂಡರ್‌ಫುಲ್ ಮುದುಕ ರಾಜಕೀಯ ಕಾರಣಗಳಿಗಾಗಿ ಲಂಡನ್ನಿನಲ್ಲಿರುವನೆಂಬ ಸಂಗತಿ ತಿಳಿದು ಆತ ಸಂತೋಷಪಟ್ಟಿದ್ದು ಸಹಜ. ತನ್ನಂತೆಯೇ ಇಡೀ ಲಂಡನ್ ನಗರ ಗಾಂಧೀಜಿ ಕುರಿತು ಅಭಿಮಾನದಿಂದ ಮಾತಾಡುತ್ತಿರುವುದನ್ನು ಕಂಡು ಚಾಪ್ಲಿನ್ ಸಂತೋಷಪಟ್ಟ. ಆದರೆ ಗಾಂಧೀಜಿ ಎಂಬ ಘಾಟಿ ಮುದುಕನ ಕೆಲವು ಹಠಮಾರಿ ಗುಣಗಳು ಚಾಪ್ಲಿನ್‌ಗೆ ಇಷ್ಟವಾಗುತ್ತಿರಲಿಲ್ಲ. ಅವುಗಳ ಪೈಕಿ ಪ್ರಮುಖವಾದುದೆಂದರೆ ಗಾಂಧೀಜಿ ಯಂತ್ರಗಳನ್ನು ವಿರೋಧಿಸುತ್ತಿದ್ದುದು. ಆದರೆ ಜಗತ್ತಿನ ಅದ್ಭುತಗಳ ಪೈಕಿ ಗಾಂಧೀಜಿಯ ವ್ಯಕ್ತಿತ್ವವೂ ಒಂದೆಂದು ಭಾವಿಸಿಯೇ ಚಾಪ್ಲಿನ್ ಆತನನ್ನು ಕಂಡು ಪಾವನನಾಗಬೇಕೆಂದು ನಿರ್ಧರಿಸಿದ(1931)

ಚಾಪ್ಲಿನ್ ತನ್ನೆಲ್ಲ ಕಾರ್ಯಕ್ರಮಗಳನ್ನು ಬದಿಗೊತ್ತಿ ಮಹಾತ್ಮ ವಾಸ್ತವ್ಯ ಹೂಡಿದ್ದ ಈಸ್ಟ್ ಇಂಡಿಯಾ ಡಾಕ್ ರಸ್ತೆಯ ಕೊಳಚೆಗೇರಿಗೆ ಹೋದ. ಅಷ್ಟೊತ್ತಿಗಾಗಲೆ ಅಲ್ಲಿ ನೂರಾರು ಮಂದಿ ಪತ್ರಕರ್ತರು, ಛಾಯಾಗ್ರಾಹಕರು, ಅಭಿಮಾನಿಗಳು, ಆರಾಧಕರು ಕಿಕ್ಕಿರಿದು ನೆರೆದಿದ್ದರು. ಅವರೆಲ್ಲರ ಮುಖದಲ್ಲಿ ಒಂದು ರೀತಿಯ ಧನ್ಯತಾ ಭಾವ ತುಳುಕಿತ್ತು. ಎಲ್ಲರ ಬಾಯಲ್ಲೂ ಸ್ವಾತಂತ್ರ್ಯ ಗಳಿಸುವುದಕ್ಕಾಗಿ ಭಾರತದಾದ್ಯಂತ ನಡೆದಿರುವ ಅಹಿಂಸಾಯುತ ಹೋರಾಟ, ಸತ್ಯಾಗ್ರಹಗಳ ಸುದ್ದಿಗಳು.

ಗಾಂಧೀಜಿ ಇರಲಿಲ್ಲ. ಅವರು ಬರುವವರೆಗೆ ಕಾಯುವುದು ಎಲ್ಲರಿಗೂ ಅನಿವಾರ್ಯವಾಯಿತು. ಹೀಗೆ ಸ್ವಲ್ಪ ಹೊತ್ತು ಕಳೆದ ನಂತರ ಮಹಾತ್ಮ ಟ್ಯಾಕ್ಸಿಯಲ್ಲಿ ಬಂದರು. ಎಲ್ಲರಂತೆ ಚಾಪ್ಲಿನ್ ಸಹ ಆ ತುಂಡು ಬಟ್ಟೆ ಉಟ್ಟಿರುವ ಬಡಕಲು ಮುದುಕ ಹೇಗಿರುವನೆಂಬ ಕುತೂಹಲದಿಂದ ಮೇಲೆದ್ದ. ವಿನಮ್ರತಾ ಭಾವದಿಂದ ನಿಂತಿದ್ದವರು ಗಾಂಧೀಜಿಗೆ ಕೈ ಮುಗಿದರು. ಮಗುಸಹಜ ಮುಗ್ಧತೆಯ ಗಾಂಧೀಜಿ ಎಲ್ಲರ ಕಡೆ ಪ್ರೀತಿಯಿಂದ ನೋಡುತ್ತಾ ಮುಗುಳ್ನಗುತ್ತ ಕೋಣೆ ಪ್ರವೇಶಿಸಿದರು. ಸ್ವಲ್ಪ ಹೊತ್ತಿನ ನಂತರ ಕರೆ ಬರಲು ಚಾಪ್ಲಿನ್ ಒಳಗಡೆ ಹೋದ. ಚಾಪ್ಲಿನ್ ಚಿತ್ರಗಳ ಬಗ್ಗೆ, ಮಾನವೀಯತೆ ಬಗ್ಗೆ ಸಾಕಷ್ಟು ಕೇಳಿ ತಿಳಿದಿದ್ದ ಗಾಂಧೀಜಿ ಚಾಪ್ಲಿನನ್ನು ಪ್ರೀತಿಯಿಂದ ಬರಮಾಡಿಕೊಂಡು ತಮ್ಮ ಬಲ ಮಗ್ಗಲಲ್ಲಿ ಕುಳ್ಳಿರಿಸಿಕೊಂಡರು. ಜೊತೆಯಲ್ಲಿ ಸರೋಜಿನಿ ನಾಯ್ಡು ಮತ್ತಿತರರು ಇದ್ದರು. ಛಾಯಾಗ್ರಾಹಕರ ಕೈಯಲ್ಲಿದ್ದ ಕ್ಯಾಮರಾಗಳು ಕ್ಲಿಕ್ಕೆಂದವು.

ಚಾಪ್ಲಿನ್ ತಾನು ಮಹಾತ್ಮನ ಬಳಿ ಆಡಲಿರುವ ಮಾತುಗಳ ಬಗ್ಗೆ ಯೋಚಿಸಿದ. ಆತ ತಾನು ನಟಿಸಿರುವ, ನಿರ್ದೇಶಿಸಿರುವ ಚಿತ್ರಗಳನ್ನು ಪ್ರಾಯಶಃ ನೋಡಿರಲಿಕ್ಕಿಲ್ಲ. ಆದರೆ ಕೇಳಿರಬಹುದು! ಎಂದು ಯೋಚಿಸುತ್ತಿರುವ ಹೊತ್ತಿನಲ್ಲಿ ಯಾರೋ ಮಹಿಳೆ ಗಾಂಧೀಜಿಯೊಂದಿಗೆ ಒಂದೇ ಸಮನೆ ಮಾತಾಡುತ್ತಿದ್ದಳು.

ಭಾರತೀಯ ಮಹಿಳೆಯಾದ ಆಕೆಯನ್ನು ದೂರವಿರಿಸಿ ಗಾಂಧೀಜಿಯೊಂದಿಗೆ ಮಾತಾಡಲು ಚಾಪ್ಲಿನ್‌ಗೆ ಅವಕಾಶ ಕಲ್ಪಿಸಿಕೊಟ್ಟರು.

ಇಡೀ ಭಾರತವೇ ತಾನು ಗಾಂಧೀಜಿ ಸಮಕ್ಷಮ ನೀಡಲಿರುವ ಹೇಳಿಕೆ ಬಗ್ಗೆ ಆಡಲಿರುವ ಮಾತಿನ ಬಗ್ಗೆ ತುದಿಗಾಲಲ್ಲಿ ನಿಂತು ಕಾಯುತ್ತಿದೆ ಎಂಬ ಎಚ್ಚರಿಕೆಯನ್ನು ಚಾಪ್ಲಿನ್ ಕಳೆದುಕೊಳ್ಳಲಿಲ್ಲ. ಗಾಂಧೀಜಿ ನೇತೃತ್ವದಲ್ಲಿ **ಭಾರತದಾದ್ಯಂತ ಆರಂಭಗೊಂಡಿರುವ ಸ್ವಾತಂತ್ರ್ಯ ಹೋರಾಟದ ಬಗ್ಗೆ ಅನುಕಂಪ ಮತ್ತು ಬೆಂಬಲವನ್ನು ಚಾಪ್ಲಿನ್ ತ್ರಿಕರಣಪೂರ್ವಕವಾಗಿ ವ್ಯಕ್ತಪಡಿಸಿದ. ಜೊತೆಗೆ ಗಾಂಧೀಜಿಯವರ ಯಂತ್ರ ಮತ್ತು ಆಧುನಿಕ ತಂತ್ರಜ್ಞಾನಗಳ ವಿರೋಧಿ ನಿಲುವನ್ನು ಪ್ರಸ್ತಾಪಿಸಿ, ಇದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ಎತ್ತಿದ.**

ಕುಂ.ವೀರಭದ್ರಪ್ಪನವರ
'ಚಾರ್ಲಿಚಾಪ್ಲಿನ್' ಪುಸ್ತಕದಿಂದ

ಗಾಂಧಿಯೊಂದಿಗೆ ಚಾಪ್ಲಿನ್



PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು 1
Printed & Published by Communist Party of India(Marxist), Karnataka State Committee Editor : G.N. NAGARAJ